ತಾಯಿನಾಡು

ಬೆಂಗಳೂರು ಸಂಪಾದಕರುಗಳ ಮೇಲೆ ಮೊಕದ್ದಮೆ

ಸರಕಾರದ ನೋಟಿಫಿಕೇಷನನ್ನು ಉಲ್ಲಂಘಿಸಿದ ಆಪಾದನೆ

ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ

[ತಾಯಿನಾಡು ವಿ॥ ಬಾತ್ಮೀದಾರರಿಂದ]

ಬೆಂಗಳೂರು ಸೆ ೯

ತಾಯಿನಾಡು ಮಾಲೀಕರೂ ಡೈಲಿ ನ್ಯೂಸ್ ಸಂಪಾದಕರೂ ಆದ ಶ್ರೀ ಪಿ ಆರ್. ರಾಮಯ್ಯ, ತಾಯಿನಾಡು ಸಂಪಾದಕರಾದ ಶ್ರೀ ಪಿ ಬಿ. ಶ್ರೀನಿವಾಸನ್, ವಿಶ್ವಕರ್ಣಾಟಕ ಪ್ರಧಾನ ಸಂಚಾಲಕರಾದ ಶ್ರೀ ಟಿ. ಟಿ. ಶರ್ಮ, ವಿಶ್ವಕರ್ಣಾಟಕ ಸಂಪಾದಕರಾದ ಸಿದ್ಧವ್ವನಹಳ್ಳಿ ಕೃಷ್ಣಶರ್ಮ, ಜನವಾಣಿ ಸಂಪಾದಕರಾದ ಶ್ರೀ ಬಿ. ಎನ್. ಗುಪ್ತ ಇವರುಗಳನ್ನು ಸೆಪ್ಟೆಂಬರ್ ೮-೯ ನೇ ರಾತ್ರಿ ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ೪೧ ನೇ ನಿಬಂಧನೆ ಪ್ರಕಾರ ಪೋಲೀಸರು ದಸ್ತಗಿರಿ ಮಾಡಿ, ಅವರ ಮೇಲೆ ನೆನ್ನೆ ಮಧ್ಯಾಹ್ನ ಸರ್ಕಾರವು ಮೊಕದ್ದಮೆಯನ್ನು ಹೂಡಿತು. ಅವರುಗಳು ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ೪೧ನೇ ನಿಬಂಧನೆ ಪ್ರಕಾರ ಮೈಸೂರು ಸರಕಾರವು ಆಗಸ್ಟ್ ೧೦ರಲ್ಲಿ ಹೊರಡಿಸಿದ ನೋಟಿಫಿಕೇಷನನ್ನು ಪಾಲಿಸಲಿಲ್ಲವೆಂಬುದೇ ಅವರ ಮೇಲಿನ ಅಪಾದನೆ. ಈ ಅಪಾದನೆಯ ಸಮರ್ಥನೆಗೆ ಸೆಪ್ಟೆಂಬರ್ ೧ ರಿಂದ ೮ ರವರೆಗೆ ಪ್ರಕಟವಾದ ಪತ್ರಿಕೆಗಳಲ್ಲಿ ಬಂದಿರುವ ಕೆಲವು ವರದಿಗಳನ್ನು ಸೂಚಿಸಲಾಗಿದೆ. ಮೊದಲು ದಸ್ತಗಿರಿಯಾದವರು ಶ್ರೀ ಗುಪ್ತರು. ಅವರು ದಸ್ತಗಿರಿಯಾದಾಗ ರಾತ್ರಿ ೧೦-೩೦ ಆಗಿತ್ತು. ಶ್ರೀ ಟಿ ಟಿ. ಶರ್ಮರವರು ಮಧ್ಯರಾತ್ರಿಯ ವೇಳೆಗೆ ದಸ್ತಗಿರಿಯಾದರು. ಶ್ರೀ ಪಿ ಆರ್. ರಾಮಯ್ಯನವರು ದಸ್ತಗಿರಿಯಾದಾಗ ೧೨-೪೫ ಗಂಟೆ. ಶ್ರೀ ಪಿ ಬಿ ಶ್ರೀನಿವಾಸನ್‌ರು ದಸ್ತಗಿರಿಯಾದಾಗ ರಾತ್ರಿ ೧-೧೫ ಗಂಟೆ. ಶ್ರೀ ಸಿದ್ಧವ್ವನಹಳ್ಳಿ ಕೃಷ್ಣಶರ್ಮರು ೨-೩೦ ಗಂಟೆ ವೇಳೆಗೆ ಶ್ರೀ ಟಿ ಟಿ ಶರ್ಮರ ಮನೆಯಲ್ಲಿ ದಸ್ತಗಿರಿಯಾದರು. ಉಳಿದವರು ದಸ್ತಗಿರಿಯಾದುದು ಅವರವರ ಮನೆಯಲ್ಲಿ.

ಅವರೆಲ್ಲರಿಗೂ ಸಿದ್ಧತೆಗಾಗಿ ಕಾಲವನ್ನು ಕೊಡಲಾಗಿತ್ತು. ಅವರು ರಾತ್ರಿಯ ಉಳಿದ ಭಾಗವನ್ನು ಅಲಸೂರುಗೇಟ್ ಪೋಲೀಸ್ ಸ್ಟೇಷನ್ನಿನಲ್ಲಿ ಕಳೆದರು. ಬೆಳಿಗ್ಗೆ ಎ ಎಸ್ ಪಿ ಆಫೀಸಿಗೆ ಬಂದು ಅಲ್ಲಿ ಇದ್ದರು. ಅವರನ್ನು ನೋಡಲು ಮಧ್ಯಾಹ್ನ ಸುಮಾರು ೨ ಗಂಟೆಯ ವರೆಗೆ ಯಾರಿಗೂ ಅವಕಾಶವಿರಲಿಲ್ಲ

ಮಧ್ಯಾಹ್ನ ೧ ಗಂಟೆ ಸಮಯದಲ್ಲಿ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಅವರುಗಳನ್ನು ಜೈಲುವಶದಲ್ಲಿ ಸೆಪ್ಟೆಂಬರ್ ೧೨ ರವರೆಗೆ ಇಡಲು ರಿಮಾಂಡ್ ಕೇಳಿದರು. ಆದರೆ ಅಪಾದಿತರ ಪರ ವಕೀಲರುಗಳಾದ ಶ್ರೀ ದೊರೆಸ್ವಾಮಿ, ಜಿ ಆರ್ ತಿ. ರಾಜುಲುನಾಯಡು ಮತ್ತು ಶ್ರೀ ನಿಟ್ಟೂರು ಶ್ರೀನಿವಾಸರಾಯರು ಅಪಾದಿತರುಗಳ ಮೇಲೆ ಇರುವ ಅಪಾದನೆಯ ಸ್ವರೂಪವನ್ನೂ ಮತ್ತು ರಿಮ್ಯಾಂಡಿನ ಅವಶ್ಯವನ್ನೂ ಪ್ರಾಸಿಕ್ಯೂಷನ್ನು ತಿಳಿಸಬೇಕೆಂದೂ ಹೇಳಿದರು. ಮೇಲಾಗಿ, ರಿಮಾಂಡನ್ನು ಕೇಳುವಾಗ ಅಪಾದಿತರುಗಳನ್ನು ಕೋರ್ಟಿನಲ್ಲಿ ಹಾಜರ್ಪಡಿಸಬೇಕೆಂದೂ ಹೇಳಿದರು. ತಮ್ಮ ಕಕ್ಷಿದಾರರೊಡನೆ ತಾವು ಮಾತಾಡಬೇಕಾಗುವುದಕ್ಕೆ ಇದು ಅನುಕೂಲವಾಗುವುದೆಂದರು

ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರು ತನಿಖೆಯು ಇನ್ನೂ ಮುಗಿದಿಲ್ಲವೆಂದೂ, ಅಲ್ಲಿಯವರೆಗೆ ಅವರುಗಳು ಜೈಲುವಶದಲ್ಲಿರಬೇಕಾಗುವುದೆಂದೂ ಹೇಳಿದರು. ಈ ಸಮಯಕ್ಕೆ [ಸಿ] ಡಿವಿಜನ್ ಇನ್ಸ್‌ಪೆಕ್ಟರು ಬಂದು ಚಾರ್ಜು ಷೀಟುಗಳನ್ನು ಈ ದಿನವೇ ಹಾಕಲಾಗುವುದೆಂದು ತಿಳಿಸಿದರು.

ಮಧ್ಯಾಹ್ನ ೩-೪೫ ಗಂಟೆ ಸಮಯದಲ್ಲಿ ಅಪಾದಿತರುಗಳು ಕೋರ್ಟಿನ ಮುಂದೆ ಹಾಜರಾದರು ಆಗ ಕೋರ್ಟು ಹಾಲಿನಲ್ಲಿ ಪತ್ರಿಕೋದ್ಯೋಗಿಗಳೂ ಲಾಯರುಗಳೂ ಇತರರೂ ತುಂಬಿದ್ದರು ಅಪಾದಿತರುಗಳು ಕೋರ್ಟು ಹಾಲಿಗೆ ಬಂದ ಮೇಲೆ ಕುರ್ಚಿಗಳಲ್ಲಿ ಕುಳಿತುಕೊಂಡರು

ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರು ಅಪಾದಿತರುಗಳ ಮೇಲೆ ಪ್ರತ್ಯೇಕ ಚಾರ್ಜುಷೀಟುಗಳನ್ನು ಹಾಜರುಪಡಿಸಿದರು. ಅವು ಒಂದೇ ರೀತಿಯವು ೧೯೪೨ನೇ ಆಗಸ್ಟ್ ೧೦ರಲ್ಲಿ ಹೊರಡಿಸಲ್ಪಟ್ಟ ೭೮೨ ಸಿ ಬಿ. ನೋಟಿಫಿಕೇಷನ್‌ಗೆ ವಿರೋಧವಾಗಿ ಎ ಐ ಸಿ ಸಿ ಮತ್ತು ಮೈಸೂರು ಕಾಂಗ್ರೆಸು ಜಾರಿಮಾಡಿರುವ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಸುದ್ದಿ ಮತ್ತು ವರದಿಗಳನ್ನು ಹಾಗೂ ಸರಕಾರವು ಆಜ್ಞೆಗಳಿಗೆ ವಿರೋಧವಾಗಿ ಕೈಕೊಂಡ ಕ್ರಮಗಳಿಗೆ ಸಂಬಂಧಪಟ್ಟ ಸುದ್ದಿ ಮತ್ತು ವರದಿಗಳನ್ನು ಪ್ರಸಿದ್ಧಿಸಿದರೆಂಬುದೇ ಅಪಾದನೆ ಸೆಪ್ಟೆಂಬರ್ ೧ರಿಂದ ೮ರವರೆಗೆ ಪತ್ರಿಕೆಗಳಲ್ಲಿ ಬಂದ ಕೆಲವು ವರದಿಗಳನ್ನು ಅಪಾದನೆಯ ಸಮರ್ಥನೆಗಾಗಿ ಸೂಚಿಸಲಾಗಿದೆ.

ಅಪಾದಿತರುಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂದು ಶ್ರೀ ನಿಟ್ಟೂರು ಶ್ರೀನಿವಾಸರಾಯರು ಪ್ರಾರ್ಥಿಸಿದರು.

ಡಿಫೆನ್ಸ್ ಆಫ್ ಇಂಡಿಯಾ ಆಕ್ಟ್ ೧೩೦(ಎ) ಸೆಕ್ಷನಿನ ಪ್ರಕಾರ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರು ಇದನ್ನು ವಿರೋಧಿಸುತ್ತ ತಾವು ಸಲಹೆಗಳನ್ನು ಪಡೆಯಬೇಕಾಗಿರುವುದರಿಂದ ಸ್ವಲ್ಪ ಕಾಲಾವಕಾಶ ಬೇಕು ಎಂದು ಕೇಳಿದರು.

ಶ್ರೀ ನಿಟ್ಟೂರು ಶ್ರೀನಿವಾಸರಾಯರು ಮಾತನಾಡುತ್ತ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರು ತಿಳಿಸಿದ ಸೆಕ್ಷನು ಜಾಮೀನು ಅರ್ಜಿಯನ್ನು ವಿರೋಧಿಸುವುದಕ್ಕಾಗಿ ಇದೆಯೆಂದೂ ಆದರೆ ಕಾಲಾವಕಾಶವನ್ನು ಕೇಳಲು ಅದರಲ್ಲಿ ಅವಕಾಶವಿಲ್ಲವೆಂದೂ ತಿಳಿಸಿದರು.

ಪ್ರಾ॥ ಇ॥—ಜಾಮೀನಿಗಾಗಿ ಕೇಳುವುದಕ್ಕೆ ಯಾವ ಆಧಾರವಿದೆಯೆಂಬುದನ್ನು ನಾನು ತಿಳಿಯಬೇಡವೆ?

ಶ್ರೀ ನಿಟ್ಟೂರು—ಈಗಾಗಲೇ ಚಾರ್ಜ್‌ಷೀಟುಗಳನ್ನು ಇಡಲಾಗಿದೆ, ಅಂದಮೇಲೆ ಹೆಚ್ಚಿನ ತನಿಖೆಗೆ ಅವಕಾಶವಿಲ್ಲ. ಅಪಾದಿತರುಗಳು ಪತ್ರಿಕೆಗಳನ್ನು ನಡೆಸುತ್ತಿರುವವರು. ಅವರು ಓಡಿಹೋಗುವ ಸಂಭವವೇನೂ ಇಲ್ಲ ಅವರನ್ನು ಜಾಮೀನಿನ ಮೇಲೆ ಬಿಟ್ಟರೆ ಪ್ರಾಸಿಕ್ಯೂಷನ್ನಿಗೆ ಏನೊಂದೂ ತೊಂದರೆಯಾಗುವುದಿಲ್ಲ.

ಶ್ರೀ ಎಂ ಪಿ ಸೋಮಶೇಖರರಾಯರು ಮಾತನಾಡುತ್ತ ಈಗ ಹಾಕಲಾಗಿರುವ ಚಾರ್ಜ್ ಷೀಟುಗಳು ಬಹಳ ಅಸ್ಪಷ್ಟವಾಗಿವೆ ಎಂದು ಹೇಳಿದರು "ಆಗಸ್ಟ್ ೧೦ನೇ ತಾರೀಖಿನ ನೋಟಿಫಿಕೇಷನನ್ನು ಅಪಾದಿತರು ಉಲ್ಲಂಘಿಸಿದ್ದಾರೆ ಎಂದಿಷ್ಟು ಮಾತ್ರ ಅದರಲ್ಲಿ ತಿಳಿಸಿದೆ. ಆ ನೋಟಿಫಿಕೇಷನ್ ಪ್ರಕಾರ ಸಮಾಚಾರಗಳನ್ನು ಕಳ.

ಹಿಸುವ ಮುಖ್ಯ ಅಧಿಕಾರಿಗಳ ಪರಿಶೀಲನೆಯೂ ಪಡೆಯಬೇಕೆಂಬುದೂ ಮತ್ತು ಬಾತ್ಮೀದಾರರುಗಳನ್ನು ರಿಜಿಸ್ಟರ್ ಮಾಡಿಸಬೇಕೆಂಬುದೂ ಎರಡು ನಿಯಮಗಳಿವೆ. ಸಮಾಚಾರಗಳನ್ನು ಅಧಿಕಾರಿಗಳಿಗೆ ಮೊದಲು ತೋರಿಸಿ ಪ್ರಕಟಿಸಬೇಕೆಂಬ ನಿಯಮದ ಬಗ್ಗೆ ಅಪಾದಿತರುಗಳು ಸರಕಾರದೊಡನೆ ಸಂಧಾನ ನಡೆಸಿದುದರ ಫಲವಾಗಿ ಆ ನೋಟಿಫಿಕೇಷನಿನಲ್ಲಿ ಮಾರ್ಪಾಟಾಗಿದೆ. ಮಾರ್ಪಾಟೆಂದರೆ ಆ ನಿಯಮವನ್ನೇ ತೆಗೆದುಹಾಕಲಾಗಿದೆ. ಇನ್ನು ಬಾತ್ಮೀದಾರರುಗಳನ್ನು ರಿಜಿಸ್ಟರ್ ಮಾಡಿಸಿಕೊಳ್ಳುವ ವಿಷಯ. ಬಾತ್ಮೀದಾರರುಗಳು ಇಂತಹವರು ಎಂದು ಗುರುತಿಸುವುದೇ ಈ ರಿಜಿಸ್ಟ್ರೇಷನ್ನಿನ ಉದ್ದೇಶವೆಂಬುದಾಗಿ ಸರಕಾರವು ತಿಳಿಸಿದೆ. ಈ ಎರಡು ಅಂಶಗಳಲ್ಲಿಯೂ ಆಗಸ್ಟ್ ೨೨ನೇ ತಾರೀಖು ಸರಕಾರದ ಚೀಫ್ ಸೆಕ್ರೆಟರಿಯವರಿಂದ ಅಪಾದಿತರುಗಳಿಗೆ ಬಂದ ಪತ್ರದಲ್ಲಿ ಸ್ಪಷ್ಟವಾಗಿದೆ" ಎಂದು ಶ್ರೀ ಸೋಮಶೇಖರರಾಯರು ತಿಳಿಸಿದರು.

ಶ್ರೀ ನಿಟ್ಟೂರು ಶ್ರೀನಿವಾಸರಾಯರು ಪುನಃ ಮಾತನಾಡುತ್ತಾ "ಅಪಾದಿತರಲ್ಲಿ ಒಬ್ಬರಾದ ಶ್ರೀ ಟಿ ಟಿ ಶರ್ಮರವರು ವಿಶ್ವಕರ್ನಾಟಕ ಪತ್ರಿಕೆಯ ಸಂಪಾದಕರಾಗಲೀ ಮುದ್ರಣಕಾರರಾಗಲೀ ಅಥವಾ ಪ್ರಕಟಣಕಾರರಾಗಲೀ ಅಲ್ಲ. ಶ್ರೀ ಶರ್ಮರವರ ಮೇಲೆ ಯಾವ ಅಪಾದನೆ ಇದೆ ಎಂಬುದನ್ನು ನಾವು ಪ್ರಾಸಿಕ್ಯೂಷನ್ನಿನವರನ್ನು ಕೇಳಬಯಸುತ್ತೇವೆ" ಎಂದು ಕೇಳಿದರು.

ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರು ಉತ್ತರ ಕೊಡುತ್ತಾ ಶ್ರೀ ಎಸ್. ಕೃಷ್ಣಶರ್ಮರು ಆ ಪತ್ರಿಕೆಯ ಸಂಪಾದಕರೂ ಮುದ್ರಣಕಾರರೂ ಮತ್ತು ಪ್ರಕಟಣಕಾರರೂ ಆದರೂ ಶ್ರೀ ಟಿ ಟಿ ಶರ್ಮರವರೇ ಪತ್ರಿಕೆಯ ಮ್ಯಾನೇಜಿಂಗ್ ಡೈರೆಕ್ಟರ್ (ಪ್ರಧಾನ ಸಂಚಾಲಕರು) ಆಗಿದ್ದಾರೆ ಎಂದು ಹೇಳಿದರು.

ಮಧ್ಯಾಹ್ನ ೨-೩೦ ಘಂಟೆಯಾಗಿದ್ದರೂ ಇನ್ನೂ ಅಪಾದಿತರಿಗೆ ಊಟವನ್ನು ಕೊಟ್ಟಿಲ್ಲವೆಂತಲೂ ಅವರಿಗೆ ಇನ್ನು ಮುಂದೆ ಕಾಲಕ್ಕೆ ಸರಿಯಾಗಿ ಆಹಾರವನ್ನು ಕೊಡಬೇಕೆಂತಲೂ ಶ್ರೀಯುತರಾದ ಎಂ ಪಿ ಸೋಮಶೇಖರರಾವ್ ಮತ್ತು ನಿಟ್ಟೂರು ಶ್ರೀನಿವಾಸರಾಯರು ತಿಳಿಸಿದರು.

ಮ್ಯಾಜಿಸ್ಟ್ರೇಟರ ಮುಂದೆ ಅಪಾದಿತರನ್ನು ಕರೆತರದೆ ಪ್ರಾಸಿಕ್ಯೂಷನ್ನಿನವರು ಅಪಾದಿತರನ್ನು ಜೈಲು ಕಸ್ಟಡಿಗೆ ರಿಮ್ಯಾಂಡ್ ಅಜ್ಞೆ ನಡೆಯಲು ಯತ್ನಿಸಿದರು ಎಂದು ಅವರು ತಿಳಿಸಿದರು.

ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರು ಉತ್ತರ ಕೊಡುತ್ತಾ "ನಾವು ಅರ್ಜಿಯನ್ನು ಮ್ಯಾಜಿಸ್ಟ್ರೇಟಿಗೆ ಕೊಟ್ಟಾಗ ಕೋರ್ಟಿನ ಮುಂದೆ ಅಪಾದಿತರನ್ನು ಕರೆತರಬೇಕೆಂದು ನಾವು ಇನ್ಸ್‌ಪೆಕ್ಟರಿಗೆ ತಿಳಿಸಿದ್ದೆ. ಅಪಾದಿತರನ್ನು ಕರೆತಂದ ಮೇಲೆಯೇ ಮ್ಯಾಜಿಸ್ಟ್ರೇಟರು ಆರ್ಡರ್ ಕೊಡುತ್ತಿದ್ದರು. ಆದರೆ ಆಗ ಅಪಾದಿತರು ಮಾತನಾಡುತ್ತಿದ್ದುದರಿಂದ ಅವರನ್ನು ಕೂಡಲೇ ಕರೆತರಲಾಗಲಿಲ್ಲ" ಎಂದು ಹೇಳಿದರು.

ನಾಳೆ ಒಂದು ಘಂಟೆಗೆ ಜಾಮೀನಿನ ಅರ್ಜಿಯ ವಿಷಯವನ್ನು ಇತ್ಯರ್ಥಪಡಿಸಲು ಮೊಕದ್ದಮೆಯನ್ನು ಮುಂದೆ ಹಾಕಿದೆ.

ಸಂಪಾದಕರುಗಳ ಮೇಲಿನ ಮೊಕದ್ದಮೆ

ಜಾಮೀನು ಅರ್ಜಿ ಬಗ್ಗೆ ವಾದವಿವಾದ

ನಾಳೆ ತೀರ್ಪು ಕೊಡಲಾಗುವುದು

[ತಾಯಿನಾಡು ರ|| ಬಾತ್ಮೀದಾರರಿಂದ]

ಬೆಂಗಳೂರು ಸೆ ೧

ಶ್ರೀ ಪಿ ಆರ್ ರಾಮಯ್ಯ, ಶ್ರೀ ಪಿ ಬಿ. ಶ್ರೀನಿವಾಸನ್, ಶ್ರೀ ಟಿ ಟಿ. ಶರ್ಮ, ಶ್ರೀ ಎಸ್ ಕೃಷ್ಣಶರ್ಮ ಮತ್ತು ಶ್ರೀ ಬಿ. ಎನ್. ಗುಪ್ತ ಇವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವ ಬಗ್ಗೆ ಅರ್ಜಿಗಳ ಮೇಲೆ ಈ ಮಧ್ಯಾಹ್ನ ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ವಾದ ನಡೆಯಿತು.

ಅಪಾದಿತರ ಪರ ಶ್ರೀ ಎಲ್ ಎಸ್. ರಾಜುರವರು ಎ ಐ ಸಿ ಸಿ ಯಾಗಲೀ, ಮೈಸೂರು ಕಾಂಗ್ರೆಸ್ಸಾಗಲೀ ಚಳುವಳಿಯನ್ನು ಹೂಡಿರುವುದೆನ್ನುವುದಕ್ಕೆ ತಕ್ಕ ರುಜುವಾತಿಲ್ಲವೆಂದರು. ಇದೇ ಕಾರಣದ ಮೇಲೆ ಶ್ರೀ ದೇವದಾಸ್ ಗಾಂಧಿಯವರ ಮೇಲಿದ್ದ ಮೊಕದ್ದಮೆಯು ಬಿದ್ದುಹೋಯಿತು. ಆಗಸ್ಟ್ ೧೧ರ ನೋಟಿಫಿಕೇಷನ್ನು ಈ ರೀತಿ ಒಂದು ಕಾಂಗ್ರೆಸ್ ಚಳವಳಿಯಿದೆ ಎಂದು ಭಾವಿಸಿಕೊಂಡಿದೆ ಮತ್ತು ಅದರ ಆಧಾರದ ಮೇಲೆ ಪ್ರತಿಬಂಧಕವೇರ್ಪಟ್ಟಿದೆ. ಬಾತ್ಮೀದಾರರನ್ನು ರಿಜಿಸ್ಟರ್ ಮಾಡಿಸಿಕೊಳ್ಳಬೇಕೆಂಬುದೇ ನೋಟಿಫಿಕೇಷನ್ನು ಸೂಚಿಸುವುದಾದರೂ, ಹಾಗೆ ರಿಜಿಸ್ಟರ್ ಮಾಡಿಸಿಕೊಳ್ಳದಿದ್ದರೆ ಅಪರಾಧವು ವಿಪರೀತವೆಂದು ಸರ್ಕಾರದ ಚೀಫ್ ಸೆಕ್ರೆಟರಿಯವರು ಈ ಅಪಾದಿತರುಗಳಿಗೆ ಬರೆದಿರುವ ಆಗಸ್ಟ್ ೨೨ರ ಪತ್ರದ ದೃಷ್ಟಿಯಲ್ಲಿ ಅರ್ಥವಾಗುವುದು. ರಿಜಿಸ್ಟರ್ ಮಾಡಿಸಿಕೊಳ್ಳುವುದು ಕೇವಲ ಗುರುತಿಗಾಗಿ. ಡಿಫೆನ್ಸ್ ಆಕ್ಟಿನ ಪ್ರಕಾರ ಕೆಲವು ಅಪಾದನೆಗಳ ಬಗ್ಗೆ ಜಾಮೀನಿಗೂ ಅವಕಾಶವಿದೆ. ಮೈಸೂರು ಕಾಂಗ್ರೆಸ್ಸಿನವರಾದ ಶ್ರೀ ಎಸ್. ರಂಗರಾಮಯ್ಯನವರನ್ನು ಮೈಸೂರು ಕೋರ್ಟು ಜಾಮೀನಿನ ಮೇಲೆ ಬಿಟ್ಟಿತು.

ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರವರು ಡಿಫೆನ್ಸ್ ಆಕ್ಟಿನ ಪ್ರಕಾರದ ಅಪಾದನೆಗಳಲ್ಲಿ ಯಾವ ಯಾವುದರಲ್ಲಿ ಜಾಮೀನಿನ ಮೇಲೆ ಬಿಡುಗಡೆ ಮಾಡಲು ಅವಕಾಶವಿದೆಯೋ ಆ ಬಗ್ಗೆ ಜಾಮೀನಿನ ಮೇಲೆ ಬಿಡುಗಡೆಯನ್ನು ವಿರೋಧಿಸಲು ಪ್ರಾಸಿಕ್ಯೂಷನ್ನಿಗೆ ಅವಕಾಶವಿದೆಯೆಂದರು. ರಿಜಿಸ್ಟರ್ ಬಾತ್ಮೀದಾರರಿಂದ ಎಂದು ತಮ್ಮ ಪತ್ರಿಕೆಗಳಲ್ಲಿ ಬಂದ ವರದಿಗಳ ಬಗ್ಗೆ ಸೂಚಿಸಲ್ಲದಿರುವುದೇ ಅಪಾದಿತರುಗಳ ಮೇಲಿನ ಅಪಾದನೆ.

ಶ್ರೀ ಎಲ್. ಎಸ್. ರಾಜುರವರು ಪ್ರತಿವಾದದಲ್ಲಿ ಸರ್ಕಾರವು ಪ್ರಜೆಗಳಿಗೆ ಸೇವೆ ಸಲ್ಲಿಸುವುದಾದರೆ, ಪತ್ರಿಕಾ ಸಂಪಾದಕರು ಪ್ರಜೆಗಳಿಗೂ, ಸರ್ಕಾರಕ್ಕೂ ಸೇವೆ ಸಲ್ಲಿಸುವರೆಂಬುದನ್ನು ಗಮನಿಸಬೇಕೆಂದರು. ಅಂತಹ ಜವಾಬ್ದಾರಿಯುಳ್ಳವರನ್ನು ಜಾಮೀನಿನ ಮೇಲೆ ಬಿಡಬೇಕೆಂದರು.

ಈ ಜಾಮೀನಿನ ಮೇಲೆ ಬಿಡಬೇಕೆಂಬ ಅರ್ಜಿಗಳ ಬಗ್ಗೆ ನಾಳೆ ಮಧ್ಯಾಹ್ನ ತೀರ್ಪು ಕೊಡುವುದಾಗಿ ಮ್ಯಾಜಿಸ್ಟ್ರೇಟರು ಹೇಳಿದರು.

ಜಾಮೀನು ಅರ್ಜಿ ತಿರಸ್ಕರಿಸಲ್ಪಟ್ಟಿತು

ಬೆಂಗಳೂರು ಸಂಪಾದಕರುಗಳ ಮೇಲೆ ಮೊಕದ್ದಮೆ

೧೬ನೇ ತಾರೀಖಿಗೆ ವಿಚಾರಣೆಗೆ ಮುಂದುಹಾಕಿದೆ

[ತಾಯಿನಾಡು ರಿ|| ಬಾತ್ಮೀದಾರರಿಂದ]

ಬೆಂಗಳೂರು ಸೆ ೧೧

ಬೆಂಗಳೂರು ಸಂಪಾದಕರುಗಳ ಮೇಲಿನ ಮೊಕದ್ದಮೆಯಲ್ಲಿ ಅಪಾದಿತರುಗಳಾದ ಶ್ರೀ ಪಿ. ಆರ್. ರಾಮಯ್ಯ, ಶ್ರೀ ಪಿ ಬಿ ಶ್ರೀನಿವಾಸನ್, ಟಿ ಟಿ ಶರ್ಮ, ಸಿದ್ದವನಹಳ್ಳಿ ಕೃಷ್ಣಶರ್ಮ ಮತ್ತು ಬಿ. ಎನ್ ಗುಪ್ತ ಇವರುಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂದು ಇಟ್ಟ ಅರ್ಜಿಯನ್ನು ಸಿಟಿ ಮ್ಯಾಜಿಸ್ಟ್ರೇಟರು ಈ ದಿನ ತಿರಸ್ಕರಿಸಿದರು

ವಾದವಿವಾದಗಳನ್ನು ಕೇಳಿದ ಮ್ಯಾಜಿಸ್ಟ್ರೇಟರು ತೀರ್ಮಾನಿಸುತ್ತ, "ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳಿಗೆ ಆಧಾರವನ್ನು ಪ್ರಕಟಿಸಿಲ್ಲವಾದುದರಿಂದಲೂ, ಅಖಿಲ ಭಾರತ ಕಾಂಗ್ರೆಸ್ ಮತ್ತು ಮೈಸೂರು ಕಾಂಗ್ರೆಸ್ಸಿನಿಂದ ಹೊರಡಿಸಲ್ಪಟ್ಟ ಚಳುವಳಿಗೆ ಸಂಬಂಧಪಟ್ಟ ಸುದ್ದಿಗಳು ಅವು ಆದುದರಿಂದಲೂ ಅವುಗಳ ಪ್ರಕಟನೆಯು ಆಗಸ್ಟ್ ೧೦ನೇ ತಾರೀಖಿನ ನೋಟಿಫಿಕೇಷನಿಗೆ ವಿರುದ್ಧವಾಗಿದೆ ಎಂದು ಮೇಲುನೋಟಕ್ಕೆ ಕಾಣುತ್ತದೆ. ಮೈಸೂರಿಗೆ ಅನ್ವಯಿಸುವಂತೆ ಡಿಫೆನ್ಸ್ ಆಫ್ ಇಂಡಿಯಾ ಆಕ್ಟ್ ಪ್ರಕಾರ [illegible] ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ೧೩೦ (೨) ರೂಲು ವಿರುದ್ಧವಾಗಿರುವುದು. ಆದುದರಿಂದ ಜಾಮೀನಿನ ಮೇಲೆ ಬಿಡಬೇಕೆಂದು ಬಂದಿರುವ ಅರ್ಜಿಯನ್ನು ನಿರಾಕರಿಸಲಾಗಿದೆ' ಎಂದು ತಿಳಿಸಿದರು

ಮೊಕದ್ದಮೆಯನ್ನು ಸೆಪ್ಟೆಂಬರ್ ೧೬ನೇ ತಾರೀಖಿಗೆ ಮುಂದೂಡಲಾಗಿದೆ.

ಈ ಜಾಮೀನಿನ ಅರ್ಜಿಯ [illegible] ಅಪಾದಿತರು ಸೆಷನ್ಸ್ ಕೋರ್ಟಿಗೆ ಅಪೀಲು ಹೋಗುವರೆಂದು ಗೊತ್ತಾಗಿದೆ

ಜಾಮೀನು ಅರ್ಜಿಯ ನಿರಾಕರಣೆ

ಸಿಟಿ ಮ್ಯಾಜಿಸ್ಟ್ರೇಟರ ಆರ್ಡರು

ಪತ್ರಿಕಾ ಸಂಪಾದಕರ ಮೇಲಿನ ಮೊಕದ್ದಮೆ

[ತಾಯಿನಾಡು ರಿ|| ಬಾತ್ಮೀದಾರರಿಂದ]

ಬೆಂಗಳೂರು ಸೆ ೧೨

"ಡೈಲಿ ಪೋಸ್ಟ್" ಸಂಪಾದಕರಾದ ಶ್ರೀ ಪಿ ಆರ್. ರಾಮಯ್ಯ, "ತಾಯಿನಾಡು" ಸಂಪಾದಕರಾದ ಶ್ರೀ ಪಿ. ಬಿ. ಶ್ರೀನಿವಾಸನ್, "ವಿಶ್ವಕರ್ನಾಟಕ" ಸಂಪಾದಕರಾದ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ, "ಜನವಾಣಿ" ಸಂಪಾದಕರಾದ ಶ್ರೀ ಬಿ ಎನ್. ಗುಪ್ತ ಮತ್ತು "ಡೆಕ್ಕನ್ ಹೆರಾಲ್ಡ್" ಪತ್ರಿಕೆಯ ಪ್ರಧಾನ ಸಂಪಾದಕರಾದ ಶ್ರೀ ಟಿ ಟಿ ಶರ್ಮ ಇವರುಗಳನ್ನು ಜಾಮೀನು ಮೇಲೆ ಬಿಡುಗಡೆ ಮಾಡಲು ಸಾಧ್ಯವಿಲ್ಲವೆಂದು ಸಿಟಿ ಮ್ಯಾಜಿಸ್ಟ್ರೇಟರಾದ ಶ್ರೀ ಸಿ. ರಾಮಚಂದ್ರರಾಯರು ಇಂದು ಮಧ್ಯಾಹ್ನ 'ಆರ್ಡರ್' ಇತ್ತು ಜಾಮೀನಿನ ಅರ್ಜಿಗಳನ್ನು ನಿರಾಕರಿಸಿದರು.

ಸಂಪಾದಕರುಗಳನ್ನು ಕೋರ್ಟಿಗೆ ಹಾಜರು ಮಾಡಲಿಲ್ಲ. ಸಮಯ ೩-೨೫ [illegible] ಬಾಗಿಲು ತೆರೆಯಿತು. ಅದರೊಳಗೆ ಕೋರ್ಟಿನ ಹಾಲು ಕಿಕ್ಕಿರಿದಿತ್ತು. ಕೋರ್ಟ್ ಭವನದ [illegible] ಪತ್ರಿಕೋದ್ಯೋಗಿಗಳಿಂದಲೂ, ವಕೀಲರಿಂದಲೂ, ವಿದ್ಯಾರ್ಥಿಗಳಿಂದಲೂ, ಇತರ ಪ್ರೇಕ್ಷಕರಿಂದಲೂ ತುಂಬಿಹೋಗಿತ್ತು. ಸಂಪಾದಕರುಗಳ ಮೇಲೆ ಇದ್ದ ನಾಲ್ಕು ಮೊಕದ್ದಮೆಗಳಿಗೂ ಮ್ಯಾಜಿಸ್ಟ್ರೇಟರು ಒಂದೇ ಬಗೆಯ 'ಆರ್ಡರ'ನ್ನು ನಾಲ್ಕು ಮಾಡಿದರೂ ಬೇರೆ ಬೇರೆಯಾಗಿ ಬರೆದಿದ್ದರು. ಆ ಆರ್ಡರು ಒಂದೇ ಬಗೆಯಾಗಿದ್ದುದರಿಂದ ಒಂದನ್ನು ಕೋರ್ಟಿನಲ್ಲಿ ಓದಿದರು

ಆರ್ಡರು

ಮ್ಯಾಜಿಸ್ಟ್ರೇಟರ ಆರ್ಡರು ಈ ರೀತಿ ಇದೆ:

"ಅಪಾದಿತರ ಪರವಾಗಿ ಜಾಮೀನು ಅರ್ಜಿಯನ್ನು ಆ ಮೊಕದ್ದಮೆಯಲ್ಲಿ ಸಲ್ಲಿಸಲಾಗಿದೆ. ಶ್ರೀ ಎಲ್. ಎಸ್. ರಾಜುರವರೂ, ಶ್ರೀ ಭಟ್ಟರು ಶ್ರೀ ಶಿವಶಂಕರರಾವ್ ಮತ್ತು ಶ್ರೀ ಎಂ ಪಿ ಸೋಮಶೇಖರರಾಯರ ಸಹಾಯದೊಡನೆ ಸಂಪಾದಕರುಗಳೆಲ್ಲರ ಪರವಾಗಿ ಒಂದೇ ವಿಧವಾದ ವಾದವನ್ನು ಹೂಡಿದರು. ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರವರು ಜಾಮೀನು ಅರ್ಜಿಯನ್ನು ನಿರಾಕರಿಸಿ, ಸರ್ಕಾರದ ಪರವಾಗಿ ವಾದ ಮಾಡಿದರು. ಇಂಡಿಯಾ ರಕ್ಷಣೆ ಶಾಸನದ ೧೩೦ [೨] ವಿಧಿ ಪ್ರಕಾರ ಮೈಸೂರಿಗೆ ಅನ್ವಯವಾಗುತ್ತಿರುವುದರಿಂದ ಈ ಜಾಮೀನು ಅರ್ಜಿಯನ್ನು ವಿರೋಧಿಸಿದರು.

"ಅಪರಾಧಿಗಳ ಮೇಲೆ ಹೊರಿಸಿರುವ ಅಪಾದನೆ ಈ ರೀತಿ ಇದೆ:-ಪತ್ರಿಕೆಯ ಸಂಪಾದಕರಾದ ಇವರುಗಳು ಇಂಡಿಯಾ ಸರ್ಕಾರದವರು ಹೊರಡಿಸಿರುವ ಮತ್ತು ಮೈಸೂರಿಗೆ ಅನ್ವಯಿಸುವ ಇಂಡಿಯಾ ರಕ್ಷಣೆ ಶಾಸನದ ೪೧ನೇ ಸಬ್ ರೂಲ್ ೧ನೇ ವಿಧಿ ಪ್ರಕಾರ ದತ್ತವಾಗಿರುವ ಅಧಿಕಾರದ ಬಲದಿಂದ ತಾ|| ೧೦-೨-೪೨ ರಲ್ಲಿ ಹೊರಡಿಸಿದ ನಂ. ೭೪೨ ಸಿಟಿ ನೋಟಿಫಿಕೇಷನನ್ನು ವಿರೋಧವಾಗಿ ನಡೆಸಿ, ಎ ಐ ಸಿ ಸಿ ಸಭೆಯು ಮಂಜೂರು ಮಾಡಿದ ಠರಾವಿನ ಚಳುವಳಿಗೆ ಸಂಬಂಧಪಟ್ಟ ವರದಿಗಳನ್ನು ಆ ಪತ್ರಿಕೆಗಳಲ್ಲಿ ಪ್ರಕಟಿಸಿ ಮತ್ತು ಸರ್ಕಾರದವರು ಕೈಕೊಂಡ ಕಾರ್ಯಕ್ರಮದ ವಿವರಗಳನ್ನು ಪ್ರಕಟಿಸಿದರೆಂಬುದೇ ಆ ಅಪಾದನೆ.

ವರದಿಯು ಚಳುವಳಿಯದಲ್ಲವೇ?

"ಅಪಾದಿತರ ಪರವಾಗಿ ವಕಾಲತ್ತು ವಹಿಸಿದ ಶ್ರೀ ರಾಜು ಮೊದಲಾದ ವಕೀಲರು ವಾದಿಸುತ್ತ, ಇಂಡಿಯಾ ಸರ್ಕಾರದವರು ೧೯೩೯ ರಲ್ಲಿ ಹೊರಡಿಸಿದ ಇಂಡಿಯಾ ರಕ್ಷಣೆ ಶಾಸನವು ಮೈಸೂರಿಗೆ ಅನ್ವಯವಾಗುತ್ತದೆಂಬುದನ್ನು ಒಪ್ಪಿಕೊಂಡು ತಾ|| ೪-೯-೩೯ ರಲ್ಲಿ ಮೈಸೂರು ಸರ್ಕಾರದವರು ಒಂದು ನೋಟಿಫಿಕೇಷನನ್ನು ಹೊರಡಿಸಿ, [ಪಿ ೧೩೭೧ ಲೆಜಿಸ್ಲೆ. ೨೦-೩೪-೨] ಆ ಶಾಸನವು ಹಾಗೆಯೇ ಮೈಸೂರಿಗೂ ಅನ್ವಯವಾಗುವುದೆಂದು ಪ್ರಕಟಿಸಿದ್ದರೂ ಇಂಡಿಯಾ ಸರ್ಕಾರದವರು ಇತ್ತೀಚೆಗೆ ಹೊರಡಿಸಿದ ೧೩೦ [೨] ವಿಧಿಯು ಮೈಸೂರಿಗೂ ಕೂಡ ಅನ್ವಯವಾಗುವುದೆಂಬುದಕ್ಕೆ ಯಾವ ಆಧಾರವೂ ಇಲ್ಲವೆಂದು ವಾದಿಸಿದರು ಎ ಐ

ಸಿ ಸಿ ಸಭೆಯು ಮುಂಬೂರು ಮಾಡಿದ ಶಾಸನ ಭಂಗ ಚಳುವಳಿಗೆ ಸಂಬಂಧಪಟ್ಟ ಮತ್ತು ಅದನ್ನು ಹುಟ್ಟಡಗಿಸಲು ಸರ್ಕಾರದವರು ಕೈಗೊಂಡ ಕಾರ್ಯಕ್ರಮಗಳ ವರದಿಯನ್ನು ಪ್ರಕಟಿಸುವುದನ್ನಾಗಲಿ ತಡೆಯುವ ಅಧಿಕಾರ ಮೇಲೆ ಹೊರಿಸಿದ ಅಪಾದನೆಯೆಂದೂ, ಆದರೆ ಎ ಐ ಸಿ ಸಿ ಸಭೆಯ ಆ ಚಳುವಳಿಯನ್ನು ಹೂಡಿದೆಂಬುದಕ್ಕೆ ಆಧಾರವೇ ಇಲ್ಲವೆಂದೂ ಶ್ರೀ ರಾಜರವರ ವಾದವು, ಶಾಸನ ಭಂಗ ಚಳುವಳಿಯನ್ನು ಹೂಡುವುದಕ್ಕೆ ಮೊದಲು ವೈಸರಾಯರೊಡನೆ ಮಾತುಕತೆಗಳನ್ನು ನಡೆಸುವುದಾಗಿಯೂ, ಅಲ್ಲಿಯವರೆವಿಗೂ ಸತ್ಯಾಗ್ರಹವನ್ನು ಹೂಡುವುದಿಲ್ಲವೆಂದೂ ಮಹಾತ್ಮ ಗಾಂಧಿಯವರ ಹೇಳಿಕೆಯೆಂದೂ, ಅದು ಪತ್ರಿಕೆಗಳಲ್ಲಿ ಪ್ರಕಟವಾಗಿದೆಯೆಂದೂ, ಆದುದರಿಂದ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳು ಶಾಸನ ಭಂಗ ಚಳುವಳಿಗೆ ಸಂಬಂಧಪಟ್ಟ ಸುದ್ದಿಗಳಲ್ಲವೆಂದೂ ಶ್ರೀ ರಾಜುರವರು ವಾದಿಸಿದರು.

ದೇವದಾಸ್ ಗಾಂಧಿ ಮೊಕದ್ದಮೆ

"ಮೈಸೂರು ಸರ್ಕಾರದವರು ತಾ|| ೧೦-೮-೪೨ರಲ್ಲಿ ಪ್ರಕಟಿಸಿದ ಆಜ್ಞೆಯಂತೆಯೇ, ಇಂಡಿಯಾ ಸರ್ಕಾರದವರೂ ೮-೮-೪೨ರಲ್ಲಿ ಬ್ರಿಟಿಷ್ ಭಾರತದಲ್ಲೂ ಪ್ರಕಟಿಸಿ ಆಚರಣೆಗೆ ತಂದರೆಂದೂ ಆ ಆಜ್ಞೆಯ ಪ್ರಕಾರ ಶ್ರೀ ದೇವದಾಸ್ ಗಾಂಧಿಯವರ ಮೇಲೆ ಒಂದು ಮೊಕದ್ದಮೆಯನ್ನು ಹೂಡಲಾಯಿತೆಂದೂ, ಆದರೆ ಎ ಐ ಸಿ ಸಿ ಸಭೆಯು ಮುಂಬೂರು ಮಾಡಿದ ಶಾಸನ ಭಂಗ ಚಳುವಳಿ ಇದೆಂಬುದನ್ನು ರುಜುವಾತು ಮಾಡಿಲ್ಲದೆ ಹೋದ ಪ್ರಯತ್ನವೂ, ಆ ಕೆಲವು ಸಭೆಗಳಿಗೂ ಎ ಐ ಸಿ ಸಿ ಯಿಂದ ಮುಂಬೂರಾದ ಶಾಸನಭಂಗ ಚಳುವಳಿಗೂ ಸಂಬಂಧವುಂಟೆಂದು ತೋರಿಸಲು ಹೋದ ಪ್ರಯತ್ನವೂ ಮ್ಯಾಜಿಸ್ಟ್ರೇಟರು ಅವರನ್ನು ಬಿಡುಗಡೆ ಮಾಡಿದರೆಂದೂ, ಇದರ ಪರಿಣಾಮವಾಗಿ ಬ್ರಿಟಿಷ್ ಭಾರತದಲ್ಲಿ ಅದೇ ಆರ್ಡಿನೆನ್ಸ್ ಪ್ರಕಟನೆಯನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತೆಂದೂ ಶ್ರೀ ರಾಜುರವರು ಕೋರ್ಟಿಗೆ ಅರಿಕೆ ಮಾಡಿಕೊಂಡರು. ಶಾಸನಭಂಗ ಸತ್ಯಾಗ್ರಹ ಚಳುವಳಿಗೆ ಸಂಬಂಧಪಟ್ಟ ಸುದ್ದಿಯನ್ನು ತಾ|| ೧೦-೮-೪೨ರಲ್ಲಿ 'ಹಿಂದೂ' ಪತ್ರಿಕೆಯು ೪ನೇ ಪುಟದಲ್ಲಿ ಪ್ರಕಟಿಸಿರುವುದೂ, ದೇವದಾಸ್ ಗಾಂಧಿಯವರು ಬಿಡುಗಡೆಯಾದ ಸುದ್ದಿಯು ತಾ|| ೩೦-೮-೪೨ರಲ್ಲಿ 'ಹಿಂದೂ' ಪತ್ರಿಕೆಯ ೪ನೇ ಪುಟದಲ್ಲಿ ಪ್ರಕಟವಾಗಿರುವುದೂ, 'ನವದೆಹಲಿಯಲ್ಲಿ ಹೊಸ ಪತ್ರಿಕಾ ಶಾಸನ' ಎಂಬ ಶಿರೋನಾಮೆಯೊಳಗೆ 'ಹಿಂದೂ' ಪತ್ರಿಕೆಯಲ್ಲಿ ತಾ|| ೧-೯-೪೨ರಲ್ಲಿ ಪ್ರಕಟವಾಗಿರುವುದೂ ಎಲ್ಲರ ಮನಸ್ಸಿಗೆ ತಾಕುತ್ತದೆ.

"ಇನ್ನೂ ಉಗ್ರವಾದ ಅಪಾದನೆಗಳಿಗೆ ಅಂದರೆ ಇಂಡಿಯಾ ರಕ್ಷಣಾ ಶಾಸನದ ೩೮ [a] [೧]ನೇ ವಿಧಿ ಮತ್ತು ೩೪ [೬] [a] [೧] [j] ವಿಧಿಗಳ ಪ್ರಕಾರ ಅಪಾದನೆಗಳಿಗೆ ಗುರಿಯಾಗಿದ್ದ ಶ್ರೀ ರಂಗರಾಮಯ್ಯನವರನ್ನು ಮೈಸೂರಿನ ಸಿಟಿ ಮ್ಯಾಜಿಸ್ಟ್ರೇಟರು ಜಾಮೀನಿನ ಮೇಲೆ ಬಿಡುಗಡೆ ಮಾಡಿದ ವಿಚಾರವನ್ನೂ, ಅದು "ವಿಶ್ವಕರ್ನಾಟಕ" ಪತ್ರಿಕೆಯ ತಾ|| ೩-೧ ೪೨ರ ಸಂಚಿಕೆಯಲ್ಲಿ ಪ್ರಕಟವಾಗಿರುವುದನ್ನೂ ಅವರ ಪಕ್ಷದಲ್ಲಿ ಶ್ರೀ ರಾಜುರವರು ದ. ಜಾಮೀನಿನ ಮೇಲೆ ಬಿಡುಗಡೆಯಾದ ಸುದ್ದಿಯನ್ನು ಒತ್ತಿ ಹೇಳಿದ್ದಾರೆ

ಸರ್ಕಾರದ ಆಗಸ್ಟ್ ೨೨ರ ಪತ್ರ

"ತಾ|| ೧೦-೮-೪೨ರಲ್ಲಿ ಪ್ರಕಟವಾದ ನೋಟೀಫಿಕೇಷನ್ನಿಗೆ ವಿರೋಧವಾಗಿ ವರ್ತಿಸಿ, ಎ ಐ ಸಿ ಸಿ ಸಭೆಯಲ್ಲಿ ಮುಂಬೂರಾದ ಶಾಸನ ಭಂಗ ಚಳುವಳಿಯ ಸುದ್ದಿಗಳನ್ನು ಪ್ರಕಟಿಸಿದರೆಂಬ ಅಪಾದನೆ ಸ್ಥಿರವಾಗುವುದಿಲ್ಲವೆಂದೂ, ಏಕೆಂದರೆ ಆ ಚಳುವಳಿಯನ್ನು ಎ ಐ ಸಿ ಸಿ ಸಭೆಯು ಮುಂಬೂರು ಮಾಡಿತೆಂಬುದಕ್ಕೆ ಆಧಾರವೇ ಇಲ್ಲದೆಂದೂ ವಾದಿಸಲಾಗಿದೆ. ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳು ಎ ಐ ಸಿ ಸಿ ಮುಂಬೂರು ಮಾಡಿದ ಕಾರ್ಯಕ್ರಮಕ್ಕೆ ಸಂಬಂಧಪಟ್ಟವಲ್ಲವೆಂದು ವಾದಿಸಲಾಗಿದೆ. ಸರ್ಕಾರದ ಮೂಲಕ, ಅಲ್ಲದೇ ಅಸೋಸಿಯೇಟೆಡ್ ಪ್ರೆಸ್, ಯುನೈಟೆಡ್ ಪ್ರೆಸ್ ಆಫ್ ಇಂಡಿಯಾ ಈ ಸಂಸ್ಥೆಗಳ ಮೂಲಕ ಮತ್ತು ರಿಜಿಸ್ಟರ್ ಸುದ್ದಿಗಳ ಮೂಲಕವೇ ಬಂದ ಸುದ್ದಿಗಳನ್ನು ಮಾತ್ರ ಪ್ರಕಟಿಸಲಾಗಿದೆಂಬುದೇ ಇರುವ ಅಪಾದನೆಯೆಂದು ವಾದಿಸಲಾಗಿದೆ. ಸುದ್ದಿಗಳನ್ನು ಮುಂಚೆಯೇ 'ಸೆನ್ಸಾರ್' ಮಾಡುವ ವಿಚಾರದಲ್ಲಿಯೂ, ಸುದ್ದಿಗಾರರು ಹೆಸರುಗಳನ್ನು ರಿಜಿಸ್ಟರ್ ಮಾಡಿರುವ ವಿಚಾರದಲ್ಲಿಯೂ ಮೈಸೂರು ಸರ್ಕಾರದವರು ಉದಾರವಾದ ರೀತಿಯಲ್ಲಿ ವರ್ತಿಸಿ, ತಾ|| ೨೨-೮-೪೨ರಲ್ಲಿ ಒಂದು ಪತ್ರವನ್ನು ಕೆಲವು ಸಂಪಾದಕರಿಗೆ ಬರೆದು, 'ಹೆಸರು ವಿಳಾಸಗಳನ್ನು ಸುದ್ದಿಗಾರರು ಕೊಡುವುದು ಅವರನ್ನು ಗುರ್ತಿಸುವುದಕ್ಕೆ ಮಾತ್ರ' ಎಂದು ಸೂಚಿಸಿದ್ದಾರೆ ಆದುದರಿಂದ ಸುದ್ದಿಗಾರರು ಯಾರೆಂಬುದನ್ನು ಪ್ರಕಟಿಸದೆ ಸುದ್ದಿಯನ್ನು ಪ್ರಕಟಿಸಿರುವುದು ಟೆಕ್ನಿಕಲ್ ಅಪರಾಧ ಮಾತ್ರ. ಅದಷ್ಟು ಉಗ್ರವಾದ ಅಪರಾಧವಲ್ಲ. ಆದುದರಿಂದ ಅಪಾದಿತರನ್ನು ಜಾಮೀನು ಮೇಲೆ ಬಿಡುಗಡೆ ಮಾಡಬೇಕು ಏಕೆಂದರೆ ಅವರು ಸರ್ಕಾರದ ಮತ್ತು ಪ್ರಜೆಗಳ ಸೇವೆ ಮಾಡುತ್ತಿದ್ದಾರೆ. ಅವರ ಮೇಲೆ ಹೊರಿಸಿರುವ ಅಪಾದನೆಗಳಿಗೆ ಸಂಬಂಧಪಟ್ಟಂತೆ "[illegible]"ವು ಇದಿದೆ ಅಲ್ಲದೆ ಅಪಾದಿತರು ಓಡಿಹೋಗುವರೆಂದು ಭಾವಿಸುವುದಕ್ಕೆ ಕಾರಣವಿಲ್ಲ ಇದು ಶ್ರೀ ರಾಜುರವರ ವಾದ

ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರ ವಿರೋಧ

"ಪಬ್ಲಿಕ್ ಪ್ರಾಸಿಕ್ಯೂಟರವರು ಜಾಮೀನು ಅರ್ಜಿಯನ್ನು ವಿರೋಧಿಸುತ್ತಾ, ಬೆಂಗಳೂರು ನಗರದಲ್ಲಿಯೂ, ಮೈಸೂರು ಸಂಸ್ಥಾನದಲ್ಲಿಯೂ ನಡೆದ ಗಲಭೆಗಳಿಗೆ ಸಂಬಂಧಪಟ್ಟ ಮತ್ತು ಆ ಗಲಭೆಗಳನ್ನು ಅಡಗಿಸಲು ಸರಕಾರದವರು ಕೈಗೊಂಡ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಸುದ್ದಿಗಳನ್ನು ಪ್ರಕಟಿಸಿದ ಅಪರಾಧಕ್ಕೆ ಅಪಾದಿತರು ಗುರಿಯಾಗಿದ್ದಾರೆಂದೂ, ಈ ಕೆಲವು ಗಲಭೆಗಳು ಎ ಐ ಸಿ ಸಿ ಮತ್ತು ಮೈಸೂರು ಕಾಂಗ್ರೆಸ್ಸಿನವರು ಮುಂಬೂರು ಮಾಡಿದ ಶಾಸನ ಭಂಗ ಚಳುವಳಿಯು ಬೆಳೆಯಿಂದ ಉಂಟಾದ ಗಲಭೆಗಳೆಂದೂ ಸುದ್ದಿಗಾರರ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿಕೊಂಡಿಲ್ಲವೆಂದೂ ಮತ್ತು ಆ ಸುದ್ದಿಗಳನ್ನು ಪ್ರಕಟಿಸುವಾಗ, ಆ ಮೂಲಗಳನ್ನು ತಿಳಿಸಿಲ್ಲವೆಂದೂ ಸೂಚಿಸಿದ್ದಾರೆ ಇಂಡಿಯಾ ರಕ್ಷಣಾ ಶಾಸನದ ಪ್ರಕಾರ ಮಾಡಿದ ಅಪರಾಧಗಳೆಲ್ಲವೂ "ನಾನ್ ಬೇಲಬಲ್" [ಜಾಮೀನು ಮೇಲೆ ಬಿಡುಗಡೆ ಮಾಡತಕ್ಕ ಅಪರಾಧಗಳು] ಎಂಬುದಾಗಿ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರು ವಾದಿಸಿದ್ದಾರೆ. ೧೩೦ [೨] ವಿಧಿ ಪ್ರಕಾರ ಅಪಾದಿತರನ್ನು ಜಾಮೀನು ಮೇಲೆ ಬಿಡುಗಡೆ ಮಾಡಬೇಕಾದರೆ ಕೆಲವು ಗೊತ್ತಾದ ವಿಧಿಗಳನ್ನು ಉಲ್ಲಂಘಿಸಬೇಕು. ಆ ವಿಧಿಗಳನ್ನು ಸರ್ಕಾರದವರು ನೋಟಿಫೈ ಮಾಡಬೇಕು ಆದರೆ ಆ ರೀತಿ ಪಟ್ಟಿ ಮಾಡಿ ನೋಟಿಫಿಕೇಷನ್ ಹೊರಡಿಸಿಲ್ಲ ಎಂಬುದಾಗಿ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರು ವಾದಿಸಿದ್ದಾರೆ. ಕ್ರಿಮಿನಲ್ ಲಾ ಜರ್ನಲ್ [೪೩] ೪೭೭ನೇ ಪುಟದ ಪ್ರಕಟವಾಗಿರುವ ತೀರ್ಪನ್ನು ಓದಿದ್ದಾರೆ. ಅದು ೧೩೦ [೨]ವಿಧಿಯ ವ್ಯಾಪ್ತಿಗೆ ಸಂಬಂಧಪಟ್ಟ ತೀರ್ಪು

ಡಿಫೆನ್ಸ್ ಆಕ್ಟಿನ ರೂಲ್ ೧೩೦ (ಎ)

"ಇ. ಡಿ. ರ ಸರ್ಕಾರವು ಮೈಸೂರು ಸಂಸ್ಥಾನಕ್ಕೂ ಹಾಗೆಯೇ ಅನ್ವಯವಾಗುವುದೆಂದು ೪-೯-೩೯ ನೇ ತಾರೀಖಿನ ದಿನ ಮೈಸೂರು ಸರ್ಕಾರದವರು ನಂಬರ್ ಪಿ ೯೩೩೧ ಲೆಜಿಸ್ ೨೦-೩೯-೨ ನೇ ಪ್ರಕಟನೆಯನ್ನು ಹೊರಡಿಸಿ ಸೂಚಿಸಿದ್ದಾರೆ. ಅಲ್ಲದೆ ೨೨-೧೧-೩೯ ನೇ ತಾರೀಖಿನ ದಿನ ಸಿ ೩೪೪೦ ಲೆಜಿಸ್ ೨೮-೩೯-೭ ನೇ ನಂಬರ್ ಪ್ರಕಟನೆಯನ್ನು ಹೊರಡಿಸಿ ಮೊದಲ ಪ್ರಕಟನೆಯ ವ್ಯಾಪ್ತಿಯನ್ನು ಸ್ವಲ್ಪ ವಿಸ್ತರಗೊಳಿಸಿದ್ದಾರೆ. ಇಂಡಿಯಾ ರಕ್ಷಣೆ ಶಾಸನದ ವಿಧಿ ನಿಯಮಗಳನ್ನು ಬ್ರಿಟಿಷ್ ಭಾರತದಲ್ಲಿ ಆಗಿಂದಾಗ್ಗೆ ತಿದ್ದುಪಡಿ ಮಾಡಿದ್ದಾರೆ. ಆ ತಿದ್ದುಪಡಿಗಳೂ ಕೂಡ ಮೈಸೂರು ಸಂಸ್ಥಾನಕ್ಕೆ ಅನ್ವಯಿಸುವುವೆಂದು ಪ್ರಕಟನೆ ಹೊರಡಿಸಿದ್ದಾರೆ. ೧೯೪೧ ನೇ ಇಸವಿಯ ಅಕ್ಟೋಬರ್ ತಿಂಗಳವರೆಗೂ ತಿದ್ದುಪಡಿ ಮಾಡಲ್ಪಟ್ಟಿರುವ ಇಂಡಿಯಾ ರಕ್ಷಣೆ ಶಾಸನದ ಒಂದು ಪ್ರತಿಯನ್ನು ಕೋರ್ಟಿಗೆ ಕೊಡಲಾಗಿದೆ. ಬ್ರಿಟಿಷ್ ಭಾರತಕ್ಕೂ ಆಚರಣೆಗೆ ತರುವ ತಿದ್ದುಪಡಿಗಳನ್ನು ಕ್ರಮವಾಗಿ ಮೈಸೂರಿನಲ್ಲಿಯೂ ಗೆಜೆಟ್‌ನಲ್ಲಿ ಪ್ರಕಟನೆ ಹೊರಡಿಸಿ ಆಚರಣೆಗೆ ತರುತ್ತಿರಲಾಗಿದೆ. ಇಂಡಿಯಾ ರಕ್ಷಣೆ ಶಾಸನವನ್ನು ಹೇಗೆ ಮೈಸೂರಿಗೂ ಅನ್ವಯಿಸಲಾಗಿದೆಯೋ ಹಾಗೆಯೇ ಅದಕ್ಕೆ ತರುವ ತಿದ್ದುಪಡಿಗಳನ್ನೂ ಕೂಡ ಮೈಸೂರಿನಲ್ಲಿ ಆಚರಣೆಗೆ ತರಲಾಗುವುದೆಂದು ೨೨-೧೧-೩೯ ನೇ ತಾರೀಖಿನ ದಿನದ ನಂಬರ್ ಪಿ ೩೪೪೦ ಲೆಜಿಸ್ ೨೦-೩೯-೭ ನೇ ಪ್ರಕಟನೆಯಲ್ಲಿ ಸೂಚಿಸಲಾಗಿದೆ. ಅಪ್ಪಾತ ಪತ್ರದಲ್ಲಿ ೧೩೦ [ಎ] ವಿಧಿಯೂ ಅಡಕವಾಗಿದೆ.

"ಇಂಡಿಯಾ ರಕ್ಷಣೆ ಶಾಸನದ ೧೩೦ [ಎ] ವಿಧಿಯು ಆ ಶಾಸನಕ್ಕೆ ವಿರೋಧವಾಗಿ ಯಾರು ತಪ್ಪು ಮಾಡುವರೋ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವ ವಿಚಾರಕ್ಕೂ ಸಂಬಂಧಪಟ್ಟ ವಿಧಿ. ಆ ವಿಧಿಯ ಪ್ರಕಾರ ಈ ಶಾಸನಕ್ಕೆ ವಿರೋಧವಾಗಿ ವರ್ತಿಸಿ ಅಪರಾಧ ಮಾಡಿದವರು ಬಂಧಿಸಲ್ಪಟ್ಟಿದ್ದಾರೆ. ಅವರನ್ನು ಜಾಮೀನಿನ ಮೇಲಾಗಲೀ ಸ್ವಂತ ಬಾಂಡಿನ ಮೇಲಾಗಲೀ ಬಿಡುವುದಕ್ಕಿಂತ ಮುಂಚಿತವಾಗಿ, ೧] ಅಂತಹ ಬಿಡುಗಡೆಯನ್ನು ವಿರೋಧಿಸುವುದಕ್ಕೆ ಪ್ರಾಸಿಕ್ಯೂಷನ್ನಿನವರಿಗೆ ಅವಕಾಶವನ್ನು ಕಲ್ಪಿಸಬೇಕು. ೨] ಅಂತಹ ಜಾಮೀನು ಅರ್ಜಿಯನ್ನು ಪ್ರಾಸಿಕ್ಯೂಷನ್ನಿನವರು ವಿರೋಧಿಸಿದಾಗ ಮಾತ್ರ ಮಾಡಿದ ಅಪರಾಧವು ಸೆಂಟ್ರಲ್ ಸರ್ಕಾರದವರು ಪಟ್ಟಿ ಮಾಡಿ ಹೊರಡಿಸುವ ಪಟ್ಟಿಯೊಳಗೆ ಸೇರಿಸಲ್ಪಟ್ಟ ಅಪರಾಧವೆಂದು ಕಂಡುಬಂದಾಗ ಜಾಮೀನು ಕೊಡುವುದಕ್ಕೆ ಮೊದಲು ಕೋರ್ಟಿಗೆ ಆಪಾದಿತರು ಅಂತಹ ತಪ್ಪನ್ನು ಮಾಡಿಲ್ಲವೆಂಬುದಕ್ಕೆ ಕಾರಣವು ಗೊತ್ತಾಗಬೇಕು.

ಆದುದರಿಂದ ಇಂಡಿಯಾ ರಕ್ಷಣೆ ಶಾಸನದ ವ್ಯಾಪ್ತಿಯೊಳಗೆ ಬರುವ ಅಪರಾಧಗಳೆಲ್ಲವೂ ಜಾಮೀನಿನಿಂದ ಬಿಡುಗಡೆ ಹೊಂದದೆ ಇರುವಂತಹ ಅಪರಾಧಗಳು. ಸರ್ಕಾರದವರು 'ನೋಟಿಫೈ' ಮಾಡಿರುವ ಪಟ್ಟಿಯೊಳಗೆ ಅಡಕವಾಗಿರುವ ಸಮಯದಲ್ಲಿ ಅಂತಹ ಸಂದರ್ಭಗಳಲ್ಲಿ ಮಾತ್ರ ಜಾಮೀನಿನ ಮೇಲೆ ಕೋರ್ಟು ಬಿಡಬಹುದು. ಮೈಸೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಶ್ರೀ ರಂಗರಾಮುಲು,ರವರನ್ನು ಬಿಡುಗಡೆ ಮಾಡಿದ ಕಾಲ[illegible] ಒಂದು ಸಂಪ್ರದಾಯವನ್ನು ಸ್ಥಾಪಿಸಿದಂತಾಗಲಿಲ್ಲ. ಆ ಕೋರ್ಟಿನ ಮುಂದೆ ೧೩೦ [ಎ] ವಿಧಿಯನ್ನು ಗಮನಕ್ಕೆ ತರಲಾಯಿತೇ ಇಲ್ಲವೇ ಎಂಬುದು ಸ್ಪಷ್ಟವಿಲ್ಲ ಮತ್ತು ಆ ವಿಧಿಯು ಅನ್ವಯಿಸುತ್ತದೆಯೋ ಇಲ್ಲವೇ ಎಂಬುದನ್ನು ಕೋರ್ಟು ಪರಿಶೀಲಿಸಿತೋ ಇಲ್ಲವೋ ಎಂಬುದು ಕೂಡ ಗೊತ್ತಿಲ್ಲ

ಸಾಮೂಹಿಕ ಸತ್ಯಾಗ್ರಹಕ್ಕೆ ಸಂಬಂಧಿಸಿದ ಸುದ್ದಿಯೋ ಅಲ್ಲವೇ?

ಅಖಿಲಭಾರತ ಕಾಂಗ್ರೆಸ್ ಸಮಿತಿಯು ಮತ್ತು ಮೈಸೂರು ಕಾಂಗ್ರೆಸ್ಸಿನವರಿಂದ ಮಂಜೂರಾದ ಸಾಮೂಹಿಕ ಸತ್ಯಾಗ್ರಹಕ್ಕೆ ಸಂಬಂಧಪಡದೇ ಇದ್ದ ಸುದ್ದಿಗಳೆಂದು ಶ್ರೀ ರಾಮಾರಾವ್ ವಾದಿಸಿದ್ದಾರೆ. ಮೈಸೂರಿಗೆ ಅನ್ವಯವಾಗುವಂತಹ ಇಂಡಿಯಾ ರಕ್ಷಣೆ ಶಾಸನದ ೪೧ ನೇ ವಿಧಿಯ [೧] ನೇ ಉಪವಿಧಿ ನಿಬಂಧನೆ ಪ್ರಕಾರ ದತ್ತವಾದ ಅಧಿಕಾರ ಬಲದಿಂದ ಮೈಸೂರು ಸರ್ಕಾರದವರು ೧೦-೮-೪೨ನೆ ತಾರೀಖಿನ ದಿನ ಹೊರಡಿಸಿದ ನಂ. ೭೪೨-ಸಿ ಬಿ ಪ್ರಕಟನೆಯನ್ನು ಉಲ್ಲಂಘಿಸಿದರೆಂಬುದೇ ಹೊರಿಸಿರುವ ಆಪಾದನೆ. ಆ ಪ್ರಕಟನೆಯಲ್ಲಿ ಮೈಸೂರು ಸರ್ಕಾರದವರು ಅಖಿಲ ಭಾರತ ಕಾಂಗ್ರೆಸ್‌ನವರು ಮಂಜೂರು ಮಾಡಿರುವ ಸಾಮೂಹಿಕ ಚಳುವಳಿಗೆ ಸಂಬಂಧಪಟ್ಟ ಸುದ್ದಿಗಳನ್ನು (ಇವುಗಳಲ್ಲಿ ಈ ಚಳುವಳಿಗೆ ಸಂಬಂಧಪಟ್ಟ ಹೇಳಿಕೆಗಳೂ ಭಾಷಣಗಳೂ ಸೇರಿವೆ) ಆಜ್ಞೆಗಳಿಗೆ ವಿರೋಧವಾಗಿ ಇಂಡಿಯಾ ಸರ್ಕಾರದವರು, ಪ್ರಾಂತಿಕ ಸರ್ಕಾರದವರೂ ದೇಶೀಯ ಸಂಸ್ಥಾನಗಳ ಸರ್ಕಾರದವರೂ ಕೈಗೊಳ್ಳುವ ಕಾರ್ಯಕ್ರಮಗಳನ್ನು ಈ ಕೆಳಗೆ ಕಂಡ ಮೂಲಗಳಿಂದ ಬಂದ ಸಂದರ್ಭಗಳ ವಿನಹ ಇನ್ನುಳಿದ ಸಂದರ್ಭಗಳಲ್ಲಿ ಯಾವ ಪತ್ರಿಕಾ ಸಂಪಾದಕರೂ ಪ್ರಕಾಶಕರೂ ಮುದ್ರಣಕಾರರೂ ಪ್ರಕಟಿಸಬಾರದು. ಆ ಮೂಲಗಳಿವು ೧ ಅಧಿಕಾರಯುತವಾದ ಸುದ್ದಿಗಳು ೨ ಅಸೋಸಿಯೇಟೆಡ್ ಪ್ರೆಸ್ ವಾರ್ತಾ ಸಂಸ್ಥೆ ಯುನೈಟೆಡ್ ಪ್ರೆಸ್ ಆಫ್ ಇಂಡಿಯಾ ಸಂಸ್ಥೆ ೩ ಮತ್ತು ಒಂದು ಪತ್ರಿಕಾ ಕಛೇರಿಯು ಕ್ರಮವಾಗಿ ನಿಯಮಿಸಿಕೊಂಡಿರುವ ಸುದ್ದಿಕಾರರು ಆ ಜಿಲ್ಲೆಯ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಬಳಿ ರಿಜಿಸ್ಟರ್ ಮಾಡಿಸಿಕೊಂಡಿದ್ದರೆ ಅಂತಹವರು

ಸರ್ಕಾರದ ನೋಟಿಫಿಕೇಷನ್ನಿನ ಪ್ರಕಾರ ಸಾಮೂಹಿಕ ಚಳವಳಿಗೆ ಸಂಬಂಧಪಟ್ಟ ಸುದ್ದಿಗಳನ್ನು ಪ್ರಕಟಿಸಬೇಕಾದ ಅಧಿಕಾರ ಮೂಲಗಳಿಂದ ತಿಳಿದುಬಂದವುಗಳಾಗಿರಬೇಕು ಇಲ್ಲವೇ. ಅಸೋಸಿಯೇಟೆಡ್ ಪ್ರೆಸ್ ಮತ್ತು ಯುನೈಟೆಡ್ ಪ್ರೆಸ್ ವಾರ್ತಾ ಸಂಸ್ಥೆಗಳ ಮೂಲಕ ಬಂದವುಗಳಾಗಿರಬೇಕು. ಇಲ್ಲವೇ ರಿಜಿಸ್ಟರ್ಡ್ ಸುದ್ದಿಗಾರರ ಮೂಲಕ ಬಂ[illegible]ಗಿರಬೇಕು ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳ 'ಕಟಿಂಗ್'ಗಳನ್ನು ನೋಡಿದರೆ, ಯಾವ ಮೂಲಗಳಿಂದ ಸುದ್ದಿ ಬಂದಿರುವುದನ್ನು ತಿಳಿಸಿಲ್ಲ. ಆದುದರಿಂದ ೧೦-೮-೪೨ನೇ ತಾರೀಖಿನ ದಿನ ಪ್ರಕಟವಾದ ೭೪೨ನೆ ನಂಬರ್ ನೋಟಿಫಿಕೇಷನ್ನನ್ನು ಉಲ್ಲಂಘಿಸಿದ್ದಾರೆಂಬುದನ್ನು ಸ್ಪಷ್ಟವಾಗಿ ಹೇಳಬಹುದಾಗಿದೆ. ಚಾರ್ಜ್‌ಷೀಟನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಮತ್ತು ಮೈಸೂರು ಕಾಂಗ್ರೆಸ್ ಸಂಸ್ಥೆಗಳಿಂದ ಪ್ರಾರಂಭಿಸಲ್ಪಟ್ಟ ಸಾಮೂಹಿಕ ಚಳುವಳಿಗೆ ಸಂಬಂಧಪಟ್ಟ ಸುದ್ದಿಗಳೆಂದು ಸೂಚಿಸಲಾಗಿದೆ. ಆದುದರಿಂದ ಪ್ರಕಟವಾಗಿರುವ ಸುದ್ದಿಗಳು ಅಖಿಲ ಭಾರತ ಕಾಂಗ್ರೆಸ್ ಮತ್ತು ಮೈಸೂರು ಕಾಂಗ್ರೆಸ್ ಸಂಸ್ಥೆಗಳು ಹೂಡಿರುವ ಸತ್ಯಾಗ್ರಹ ಚಳುವಳಿಗೆ ಸಂಬಂಧಪಟ್ಟವುಗಳೇ ಮತ್ತು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳು ಕೂಡ ಆ ಚಳುವಳಿಯನ್ನು ಮಟ್ಟಹಾಕುವಂತಹವುಗಳೇ ಎಂಬುದನ್ನು ರುಜುವಾತು ಮಾಡಿಕೊಡಬೇಕಾಗಿದೆ ಅದಕ್ಕೆ 'ಎವಿಡೆನ್ಸ್' ಬರಬೇಕು ಅದಕ್ಕೆ ರುಜುವಾತು ಇರುವುದೇ ಇಲ್ಲವೇ ಎಂಬುದನ್ನು ಈಗಲೇ ಹೇಳುವುದಕ್ಕೆ ಸಾಧ್ಯವಿಲ್ಲ.

ಇಂಡಿಯಾ ಸರ್ಕಾರವು ನೋಟಿಫಿಕೇಷನ್ ಹಿಂದಕ್ಕೆ ತೆಗೆದುಕೊಂಡಿಲ್ಲ

ಕೇಂದ್ರ ಸರ್ಕಾರದವರು ೮-೮-೪೨ನೆ ತಾರೀಖಿನ ದಿನ ಪ್ರಕಟಗೊಳಿಸಿದ ನೋಟಿಫಿಕೇಷನ್ನನ್ನು ಮೈಸೂರು ಸರ್ಕಾರದವರು ೧೦-೮-೪೨ನೆ ತಾರೀಖಿನ ದಿನ ತಮ್ಮ ೭೪೨ನೆ ನಂಬರ್ ನೋಟಿಫಿಕೇಷನ್ನನ್ನು ಪ್ರಕಟಗೊಳಿಸಿ ಅಮಲಿಗೆ ತಂದಿದ್ದರಷ್ಟೆ. ಅದನ್ನು ಇಂಡಿಯಾ ಸರ್ಕಾರದವರು ಈಗ ರದ್ದುಗೊಳಿಸಬೇಕೆಂದು ನೋಟಿಫಿಕೇಷನ್ನನ್ನು ಹೊರಡಿಸಿರುವರೆಂತಲೂ ಆದ್ದರಿಂದ ಇಂಡಿಯಾ ರಕ್ಷಣಾಶಾಸನವು ಮೈಸೂರಿಗೂ ಹಾಗೆಯೇ ಅನ್ವಯವಾಗುವುದೆಂದು ಹೇಳುವ ವಾದಕ್ಕೆ ೧೦ನೇ ತಾರೀಖು ಪ್ರಕಟವಾದ ನೋಟಿಫಿಕೇಷನ್ ರದ್ದುಗೊಳಿಸಲ್ಪಟ್ಟು ಆ ಹೊಸ ನೋಟಿಫಿಕೇಷನ್ ಅಮಲಿಗೆ ಬಂದಿರಬೇಕೆಂದೂ ಶ್ರೀ ರಾಮರವರು ವಾದಿಸಿದ್ದಾರೆ. ಭಾರತ ರಕ್ಷಣಾ ಶಾಸನವು ಅನ್ವಯಿಸಿಯೇ ಅನ್ವಯಿಸುತ್ತದೆ ಮತ್ತು ೪೧ (೧) [ಬಿ] ವಿಧಿಯನ್ನು ಹಿಂದಕ್ಕೆ ತೆಗೆದುಕೊಂಡಿಲ್ಲ ಆ ವಿಧಿಯ ಪ್ರಕಾರ ಹೊರಡಿಸಲ್ಪಟ್ಟ ಪ್ರಕಟಣೆಯೆಂದು ಮಾತ್ರ ಹಿಂದಕ್ಕೆ ತೆಗೆದುಕೊಳ್ಳಲ್ಪಟ್ಟಿತೆಂದು ಹೇಳಲಾಗಿದೆ. ಅದೂ ಕೂಡ ದೆಹಲಿ ಪ್ರಾಂತದಲ್ಲಿ ಮಾತ್ರ ಹಿಂದಕ್ಕೆ ತೆಗೆದುಕೊಳ್ಳಲ್ಪಟ್ಟಿದೆ. ಆದ್ದರಿಂದ ತಾ|| ೧೦-೮-೪೨ನೇ ತಾರೀಖಿನ ೭೪೨ನೇ ನಂಬರಿನ ಪ್ರಕಟಣೆಯು ಅಮಲಿನಲ್ಲಿದ್ದಂತೆ ಭಾವಿಸಬೇಕಾಗಿದೆ.

ಒತ್ತಿ ಹೇಳಲಾದ ಮತ್ತೊಂದು ಅಂಶವೆಂದರೆ ಇದು: ತಾಯಿನಾಡು ಮತ್ತು ವಿಶ್ವಕರ್ನಾಟಕ ಸಂಪಾದಕರು ಭರವಸೆ ಕೊಟ್ಟಿರುವುದಲ್ಲದೆ ಮತ್ತು ಮೈಸೂರಿನ ಪತ್ರಿಕೆಗಳು ೧೨-೮-೪೨ನೇ ತಾರೀಖಿನ ೭೪೨ನೇ ನಂಬರು ಪ್ರಕಟಣೆಯ ಉದ್ದೇಶದಂತೆ ನಡೆದುಕೊಳ್ಳುವುದಾಗಿ ಒಪ್ಪಿಕೊಟ್ಟಿರುವುದರಿಂದಲೂ ಸರ್ಕಾರದವರು ೨೨-೮-೪೨ನೇ ತಾರೀಖಿನ ದಿನ ಆ ಸಂಪಾದಕರಿಗೆ ಪತ್ರ ಬರೆಯುತ್ತಾ ತಾವು (ಸರ್ಕಾರದವರು) ಜಿಲ್ಲಾ ಮ್ಯಾಜಿಸ್ಟ್ರೇಟರುಗಳಿಗೆ ಪತ್ರ ಬರೆದಿರುವುದಾಗಿಯೂ ಮೈಸೂರಿಗೆ ಅನ್ವಯಿಸುವಂತಹ ಭಾರತ ರಕ್ಷಣಾ ನಿಯಮಗಳ ೪೧ (ಎ) ವಿಧಿಯಂತೆ ಸಂಪಾದಕರುಗಳು ಸುದ್ದಿಗಳನ್ನು ಪ್ರಕಟಿಸುವ ಮುನ್ನ ಅವುಗಳನ್ನು "ಸೆನ್ಸಾರ್"ಗೆ ಒಪ್ಪಿಸಬೇಕೆಂದು ಬರೆದಿದ್ದ ಪತ್ರಗಳನ್ನು ಜಿಲ್ಲಾ ಮ್ಯಾಜಿಸ್ಟ್ರೇಟರುಗಳು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಸಲಹೆ ಮಾಡಿರುವುದಾಗಿಯೂ ತಿಳಿಸಿದರು. ಮತ್ತು ಪತ್ರಿಕೆಗಳು ಕ್ರಮಪ್ರಕಾರವಾಗಿ ನೇಮಿಸಿಕೊಂಡಿರುವ ಸುದ್ದಿಗಾರರಿಗೆ ಮತ್ತು ಅವರು ಯಾವ ಜಿಲ್ಲೆಯಲ್ಲಿ ಕೆಲಸ ಮಾಡುವರೋ ಆ ಜಿಲ್ಲೆಯ ಮ್ಯಾಜಿಸ್ಟ್ರೇಟರಲ್ಲಿ ತಮ್ಮ ಹೆಸರುಗಳನ್ನು ರಿಜಿಸ್ಟರು ಮಾಡಿಸಿಕೊಳ್ಳುವುದಕ್ಕೆ ಸಂಬಂಧಪಟ್ಟಂತೆ ಆಗಸ್ಟ್ ೧೦ನೇ ತಾರೀಖಿನ ಪ್ರಕಟನೆಯಲ್ಲಿ ತಿಳಿಸಿರುವುದಕ್ಕೆ ಅಧಿಕೃತವಾದ ಸುದ್ದಿಗಾರರು ಯಾರೆಂಬುದನ್ನು ತಿಳಿಸಲು ಮಾತ್ರವೇ ಅವರ ಹೆಸರು ವಿಳಾಸಗಳನ್ನು ರಿಜಿಸ್ಟರ್ ಮಾಡಿಕೊಳ್ಳಬೇಕೆಂಬ ಅರ್ಥ ಕೊಡಬೇಕೆಂದೂ ಅಂಥಹ ಸುದ್ದಿಗಾರರು ತಮ್ಮ ವರದಿಗಳನ್ನು ಕಳುಹಿಸುವ ಮುನ್ನ ಅವುಗಳನ್ನು ಸ್ಥಳೀಯ ಮ್ಯಾಜಿಸ್ಟ್ರೇಟರುಗಳ ಅವಗಾಹನೆಗೆ ಒಪ್ಪಿಸಬೇಕೆಂದಾಗಲಿ ಅಂಥಹ ರಿಜಿಸ್ಟ್ರೇಷನನ್ನು ರದ್ದುಪಡಿಸುವುದಾಗಲಿ ಅದರ ಉದ್ದೇಶವಲ್ಲವೆಂದೂ ಸರ್ಕಾರದವರು ಸಂಪಾದಕರುಗಳಿಗೆ ತಿಳಿಸಿದರೆಂದು ಹೇಳಲಾಯಿತು. ಅಂದರೆ ಸುದ್ದಿಗಾರರ ಹೆಸರುಗಳನ್ನು ರಿಜಿಸ್ಟರ್ ಮಾಡಿಸುವಂತೆ ಸರ್ಕಾರದವರು ಒತ್ತಾಯ ಮಾಡುತ್ತಿದ್ದರೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ತಾಯಿನಾಡು ಪತ್ರಿಕೆಯ '[illegible]'ನಲ್ಲಿ ಆ ಪತ್ರಿಕೆಗಳು ಎಲ್ಲಿಂದ ಬಂದವೆಂಬುದನ್ನು ತಿಳಿಸಿಲ್ಲ. ಆ ಪತ್ರಿಕೆಗಳು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಹಾಗೂ ಮೈಸೂರು ಕಾಂಗ್ರೆಸ್ಸಿನವರೂ ಹೊರಡಿಸಿದ ಕರಪತ್ರಗಳಿಗೆ ಸಂಬಂಧಪಟ್ಟವುಗಳೆಂದು ಜಾಮೀನು ನಿರಾಕರಣೆಯಲ್ಲಿ ತಿಳಿಸಲಾಗಿದೆ. ಅವುಗಳನ್ನು ಪ್ರಕಟಿಸಿದ್ದು ೧೨-೮-೪೨ನೇ ತಾರೀಖಿನ ೭೪೨ನೇ ನಂಬರಿನ ಪ್ರಕಟಣೆ ವಿರುದ್ಧವಾಗಿದೆಯೆಂದು ಹೇಳಲಾಗಿದೆ. ಇದು ಮೈಸೂರಿಗೆ ಅನ್ವಯಿಸುವಂತಹ ಭಾರತ ರಕ್ಷಣಾ ಶಾಸನದಂತೆ ಮಾಡಲ್ಪಟ್ಟ ಅಪರಾಧವಾಗಿರುವುದರಿಂದಲೂ ಮತ್ತು [illegible] ಅಪರಾಧಿಗಳನ್ನು ಬಿಡುಗಡೆ ಮಾಡಲು ೧೩೭ (ಎ) ವಿಧಿಯ ಅನ್ವಯ ಅವಕಾಶವಿಲ್ಲವೆಂದೂ ಜಾಮೀನಿನ ಪ್ರಾರ್ಥನೆ ನಿರಾಕರಿಸಲಾಗಿದೆ.

ಸೆಷನ್ಸ್ ಜಡ್ಜರಲ್ಲಿ ಅರ್ಜಿ ಸಲ್ಲಿಸಲಾಯಿತು

ಸೆಪ್ಟೆಂಬರ್ ೧೫ರಲ್ಲಿ ವಾದವಿವಾದ

ಸಂಪಾದಕರುಗಳ ಮೊಕದ್ದಮೆಯ ಜಾಮೀನು ಅರ್ಜಿ ಪ್ರಶ್ನೆ

[ತಾಯಿನಾಡು ಸ್ವ. ಬಾತ್ಮೀದಾರರಿಂದ]

ಬೆಂಗಳೂರು ಸೆ ೧೨

ಶ್ರೀಗಳಾದ ಪಿ. ಆರ್. ರಾಮಯ್ಯ, ಪಿ. ಬಿ. ಶ್ರೀನಿವಾಸನ್, ಟಿ. ಟಿ. ಶರ್ಮ, ಎಸ್. ಕೃಷ್ಣಶರ್ಮ ಮತ್ತು ಬಿ. ಎನ್. ಗುಪ್ತರವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂದು ಪ್ರಾರ್ಥನೆ ಮಾಡಿ ಸಲ್ಲಿಸಿದ್ದ ಅರ್ಜಿಗಳನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ತಿರಸ್ಕರಿಸಿ ಹುಕುಂ ಕೊಟ್ಟ ಅನಂತರ ಪುನಃ ಅರ್ಜಿಗಳನ್ನು ಜಿಲ್ಲಾ ಮತ್ತು ಸೆಷನ್ಸ್ ಜಡ್ಜರಾದ ಶ್ರೀ ಎ. ಸಂಪತ್ಕುಮಾರಾಚಾರ್ಯರವರ ಮುಂದೆ ೧೨-೯ರಂದು ಸಲ್ಲಿಸಲಾಯಿತು.

ಪಬ್ಲಿಕ್ ಪ್ರಾಸಿಕ್ಯೂಟರ ಪರವಾಗಿ ಶ್ರೀ ಎಸ್. ಪಿ. ರಾಮಸ್ವಾಮಿಯವರು ನೋಟೀಸನ್ನು ಪಡೆದರು.

ವಿಚಾರಣೆಯನ್ನು ಈ ಮಧ್ಯಾಹ್ನ ೪ ಗಂಟೆಗೆ ತೆಗೆದುಕೊಳ್ಳಬೇಕೆಂದು ಅರ್ಜಿದಾರರ ವಕೀಲರಾದ ಶ್ರೀ ಎಲ್. ಎಸ್. ರಾಜುರವರು ಕೋರಿದರು. ಆದರೆ ಶ್ರೀ ಎಸ್. ಪಿ. ರಾಮಸ್ವಾಮಿಯವರು ತಮಗೆ 'ಡಿಫೆನ್ಸ್ ಡ್ಯೂಟಿ' ಇರಬೇಕಾಗಿದೆಯೆಂದೂ, ನಾಳೆ ಮತ್ತು ನಾಳಿದ್ದು ರಜಾ ದಿನಗಳಾದುದರಿಂದ ಇದು ಸಾಧ್ಯವಾಗದೆಂದೂ, ಆದುದರಿಂದ ಸೆ ೧೫ರ ಅನಂತರ ವಾದವನ್ನು ನಡೆಸಲು ಗೊತ್ತುಮಾಡಬಹುದೆಂದೂ ಹೇಳಿದರು.

ಜಡ್ಜರು ಸೆಪ್ಟೆಂಬರ್ ೧೫ನೇ ಮಂಗಳವಾರಕ್ಕೆ ಗೊತ್ತುಮಾಡಿದರು.

ಸಂಪಾದಕರ ಮೇಲಿನ ಮೊಕದ್ದಮೆ

ಜಾಮೀನು ಅರ್ಜಿಗಳ ಬಗ್ಗೆ ಸೆಷನ್ಸ್ ಕೋರ್ಟಿನಲ್ಲಿ ವಾದವಿವಾದ

[ತಾಯಿನಾಡು ೮|| ಬಾತ್ಮೀದಾರರಿಂದ]

ಬೆಂಗಳೂರು ಸೆ ೧೫

ಬೆಂಗಳೂರಿನ ಪತ್ರಿಕಾ ಸಂಪಾದಕರುಗಳಾದ ಶ್ರೀಯುತರಾದ ಪಿ. ಆರ್. ರಾಮಯ್ಯ, ಪಿ. ಬಿ. ಶ್ರೀನಿವಾಸನ್, ಟಿ ಟಿ ಶರ್ಮ, ಎಸ್ ಕೃಷ್ಣಶರ್ಮ ಮತ್ತು ಬಿ ಎನ್. ಗುಪ್ತರವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗುವುದಿಲ್ಲವೆಂದು ಸಿಟಿ ಮ್ಯಾಜಿಸ್ಟ್ರೇಟರು ಕೊಟ್ಟ ಆರ್ಡರಿನ ಮೇಲೆ ಇವರುಗಳು ಹಾಕಿಕೊಂಡಿದ್ದ ಅರ್ಜಿಗಳ ಮೇಲೆ ಜಿಲ್ಲಾ ಮತ್ತು ಸೆಷನ್ಸ್ ಜಡ್ಜರಾದ ಶ್ರೀ ಎ. ಸುಂದರರಾಜಾಚಾರ್ಯರ ಮುಂದೆ ಈ ಬೆಳಗ್ಗೆ ವಾದವಿವಾದ ನಡೆಯಿತು.

ಕೋರ್ಟು ಹಾಲು ಪತ್ರಿಕೋದ್ಯೋಗಿಗಳಿಂದಲೂ, ವಕೀಲರಿಂದಲೂ, ಇತರರಿಂದಲೂ ತುಂಬಿತ್ತು

ಅರ್ಜಿದಾರರ ಪರ ಅಡ್ವೋಕೇಟರಾದ ಶ್ರೀ ಎಲ್ ಎಸ್ ರಾಜುರವರ ಪ್ರಶ್ನೆಗೆ ಉತ್ತರವಾಗಿ ಪಬ್ಲಿಕ್ ಪ್ರಾಸಿಕ್ಯೂಟರಾದ ಶ್ರೀ ಜಿ ಎಸ್ ದೊರೆಸ್ವಾಮಯ್ಯಂಗಾರ್‌ರವರು ತಾವು ಈಗ ಕೊಡಲಾಗುವ ಕಾರಣಗಳಿಗೆ ಅನುಗುಣವಾಗಿ ಜಾಮೀನು ಅರ್ಜಿಯನ್ನು ವಿರೋಧಿಸುವುದಾಗಿ ಕೋರ್ಟಿಗೆ ತಿಳಿಸಿದರು.

ಶ್ರೀ ರಾಜುರವರ ವಾದ

ಶ್ರೀ ರಾಜುರವರು ವಾದವನ್ನು ಆರಂಭಿಸುತ್ತ ಮೈಸೂರು ಸರ್ಕಾರವು ೧೯೪೨ನೇ ಆಗಸ್ಟ್ ೧೦ರಲ್ಲಿ ಮೈಸೂರಿಗೆ ಅನ್ವಯವಾಗಿರುವ ಡಿಫೆನ್ಸ್ ಆಫ್ ಇಂಡಿಯಾ ರೂಲಿನ ಪೈಕಿ ೪೧ [೧] [ಬಿ] ರೂಲ್ ಪ್ರಕಾರ ಒಂದು ನೋಟಿಫಿಕೇಷನ್ನನ್ನು ಜಾರಿ ಮಾಡಿದರೆಂದೂ, ಈ ನೋಟಿಫಿಕೇಷನ್ನನ್ನು ಉಲ್ಲಂಘಿಸಿದರೆಂದು ಅರ್ಜಿದಾರರುಗಳು ಆಪಾದಿತರಾಗಿರುವರೆಂದೂ ಹೇಳಿದರು. ಸರ್ಕಾರದ ನೋಟಿಫಿಕೇಷನ್ ಪ್ರಕಾರ, 'ಎ ಐ ಸಿ ಸಿ ಯು ಮತ್ತು ಮೈಸೂರು ಕಾಂಗ್ರೆಸು ಜಾರಿ ಮಾಡಿರುವ ಸಾಮೂಹಿಕ ಚಳುವಳಿ'' ಗೆ ಸಂಬಂಧಪಟ್ಟ ವರದಿಗಳು ಅಧಿಕೃತ, ಎ ಪಿ ಐ ಅಥವಾ ಯು ಪಿ ಐ ಮತ್ತು ರಿಜಿಸ್ಟರ್ಡ್ ಬಾತ್ಮೀದಾರರಿಂದ ಮೂಲಕವೇ ಪತ್ರಿಕೆಗಳಿಗೆ ಬರಬೇಕು ಮತ್ತು ಹಾಗೆ ಬಂದ ವರದಿಗಳನ್ನು ಯಥಾರೀತಿ ಬಂದಂಥದನ್ನು ಪತ್ರಿಕೆಗಳಲ್ಲಿ ವರದಿಗಳ ಜೊತೆಗೆ ಪ್ರಕಟಿಸಬೇಕು. ಅರ್ಜಿದಾರರು ತಾವು ಪ್ರಕಟಿಸಿದ ವರದಿಗಳ ಜೊತೆಯಲ್ಲಿ ಅವು ಯಾವ ಮೂಲಕ ಬಂದಂಥದನ್ನು ಪ್ರಕಟಿಸಿಲ್ಲವೆಂದೂ ಆರೋಪಿತರಾಗಿದ್ದಾರೆ.

ಜಡ್ಜ್:–ಸಿಟಿ ಮ್ಯಾಜಿಸ್ಟ್ರೇಟರು ತಮ್ಮ ಆರ್ಡರಿನಲ್ಲಿ ಜಾಮೀನಿನ ಪ್ರಶ್ನೆಯಿಂದಲೂ ಮುಂದೆ ಹೋಗಿ ಚರ್ಚಿಸಿದ್ದಾರೆ. ಅವರು ಆಪಾದನೆಗಳ ಯೋಗ್ಯತೆಯನ್ನೂ ಚರ್ಚಿಸಿದ್ದಾರೆ. ಆದರೆ ಅರ್ಜಿದಾರರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವ ಪ್ರಶ್ನೆ ಮುಂದಿರುವುದು. ಅದಕ್ಕೆ ಸಂಬಂಧಪಟ್ಟಂತೆ ಮಾತ್ರ ವಾದ ಮಾಡಬಹುದು.

೧೩೦ (ಎ) ರೂಲು ಮೈಸೂರಿಗೆ ಅನ್ವಯಿಸುವದೆ ?

ಶ್ರೀ ರಾಜುರವರು ಅರ್ಜಿದಾರರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದೇ ಅಥವಾ ಇಲ್ಲವೇ ಎಂಬುದನ್ನು ಡಿಫೆನ್ಸ್ ಆಫ್ ಇಂಡಿಯಾ ರೂಲುಗಳ ಪೈಕಿ ಇರುವ ೧೩೦ (ಎ) ರೂಲು ನಿರ್ಧರಿಸುವುದೆಂದರು. ೧೯೪೧ನೇ ಫೆಬ್ರವರಿ ೧೫ರಲ್ಲಿ ಈ ರೂಲು ಬ್ರಿಟಿಷ್ ಇಂಡಿಯಾದಲ್ಲಿ ಜಾರಿಗೆ ಬಂತು. ಡಿಫೆನ್ಸ್ ಆಫ್ ಇಂಡಿಯಾ ರೂಲುಗಳನ್ನು ಮೈಸೂರಿನಲ್ಲಿಯೂ ಜಾರಿಗೆ ತರಬೇಕಾದರೆ ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ೨ನೇ ಸೆಕ್ಷನ್ ಪ್ರಕಾರ ಮೈಸೂರು ಸರ್ಕಾರವು ಮೈಸೂರು ಗೆಜೆಟ್ಟಿನಲ್ಲಿ ಪ್ರಕಟನೆ ಹೊರಡಿಸಬೇಕು. ಬ್ರಿಟಿಷ್ ಇಂಡಿಯಾದಲ್ಲಿ ಜಾರಿಗೆ ಬಂದ ತಿದ್ದುಪಡಿಗಳನ್ನು ಮೈಸೂರಿನಲ್ಲಿಯೂ ಜಾರಿಗೆ ತರಲು ಅಂತಹ ಪ್ರಕಟನೆಯೂ ಹೊರಡಬೇಕಿದೆ. ಆದರೆ ೧೩೦ (ಎ) ರೂಲನ್ನು ಮೈಸೂರಿನಲ್ಲಿಯೂ ಜಾರಿಗೆ ತಂದಿರುವುದಾಗಿ ಮೈಸೂರು ಗೆಜೆಟ್ಟಿನಲ್ಲಿ ಇಲ್ಲಿಯವರೆಗೆ ಪ್ರಕಟನೆ ಹೊರಟಿರುವುದು ನಮಗೆ ಗೊತ್ತಾಗಿಲ್ಲವೆಂದು ಶ್ರೀ ರಾಜುರವರು ಹೇಳಿದರು. ಆದರೆ ಬ್ರಿಟಿಷ್ ಇಂಡಿಯಾದಲ್ಲಿ ೧೩೦ [ಎ] ರೂಲನ್ನು ಜಾರಿಗೆ ತರಲಾಗಿದೆ ಎಂಬ ವಿಷಯವನ್ನು ಸಂಪಾದಕರ ಗಮನಕ್ಕೆ ತರಲು ಮೈಸೂರು ಗೆಜೆಟ್ಟಿನಲ್ಲಿ ಆ ರೂಲನ್ನು ಪ್ರಕಟಿಸಲಾಗಿದೆ. ಆದರೆ ಆ ರೂಲನ್ನು ಮೈಸೂರಿನಲ್ಲಿಯೂ ಜಾರಿಗೆ ತಂದಿರುವುದಾಗಿ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟನೆಯಿಲ್ಲ. ಬ್ರಿಟಿಷ್ ಇಂಡಿಯಾದಲ್ಲಿ ಹಾಗೆ ಬಂದ ಡಿಫೆನ್ಸ್ ಆಕ್ಟ್ ನಿಬಂಧನೆಗಳು ಅಥವಾ ತಿದ್ದುಪಡಿಗಳು ಇಲ್ಲಿಯೂ ಒಡನೆಯೇ ಜಾರಿಗೆ ಮೈಸೂರು ಸರ್ಕಾರವು ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿಸದಿದ್ದರೂ ಮೈಸೂರಿನಲ್ಲಿ ಜಾರಿಗೆ ಬರುವುದೆಂದು ವಾದಿಸಿದರೆ ಅದು ಡಿಫೆನ್ಸ್ ಆಕ್ಟಿನ ೨ನೇ ಸೆಕ್ಷನ್ನಿಗೆ ವಿರೋಧವಾಗುತ್ತದೆ. ಈ ಸೆಕ್ಷನ್ನಿನ ಪ್ರಕಾರ ನಿಬಂಧನೆಗಳನ್ನು ಜಾರಿ ಮಾಡುವ ಅಧಿಕಾರ ಮೈಸೂರು ಸರ್ಕಾರಕ್ಕೇ ಇದೆ. ಈ ಸೆಕ್ಷನ್ ಪ್ರಕಾರ ಮೈಸೂರು ಸರ್ಕಾರವು ೧೩೦ [ಎ] ರೂಲನ್ನು ಮೈಸೂರಿನಲ್ಲಿಯೂ ಜಾರಿಗೆ ತಂದಿರುವುದಾಗಿ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿಸುವವರೆಗೆ ಅದು ಜಾರಿಯಲ್ಲಿಲ್ಲವೆಂದೇ ತಿಳಿಯಬೇಕು. ಮತ್ತು ೧೩೦ [ಎ] ರೂಲು ಸಾಮಾನ್ಯ ಅರ್ಥದಲ್ಲಿ ತಿದ್ದುಪಡಿಯುಲ್ಲ. ಅದು ಹೊಸ ರೂಲು. ೧೩೦ನೇ ರೂಲಿಗೆ ಹೊಸದಾಗಿ ೧೩೦ [ಎ] ಎಂದು ಸೇರಿಸಿದೆ.

ಮುಂದುವರಿಯುತ್ತ ಶ್ರೀ ಎಲ್. ಎಸ್ ರಾಜುರವರು ೧೩೦ [ಎ] ರೂಲನ್ನು ಮ್ಯಾಜಿಸ್ಟ್ರೇಟರು ಸರಿಯಾಗಿ ಅರ್ಥ ಮಾಡಿಲ್ಲವೆಂದರು. ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಪ್ರಕಾರ ಯಾವ ಆಪಾದನೆ ಬಗ್ಗೆಯಾದರೂ ಸಾಮಾನ್ಯವಾಗಿ ಜಾಮೀನಿನ ಮೇಲೆ ಬಿಡುಗಡೆ ಮಾಡಕೂಡದೆಂದು ಮ್ಯಾಜಿಸ್ಟ್ರೇಟರು ಅರ್ಥ ಮಾಡಿದರು. ಆದರೆ ಯಾವ ಯಾವ ಸಂದರ್ಭಗಳಲ್ಲಿ ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದೋ ಆಯಾ ಸಂದರ್ಭಗಳಲ್ಲಿ ಪ್ರಾಸಿಕ್ಯೂಷನ್ನಿಗೆ ಜಾಮೀನು ಅರ್ಜಿಯನ್ನು ವಿರೋಧಿಸಲು ಅಧಿಕಾರವಿದೆ. ಹಾಗೆ ವಿರೋಧಿಸಿದ ಮೇಲೆ ಕೋರ್ಟು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕಾದರೆ ಆಪಾದಿತರು ಕೋರ್ಟಿಗೆ ಆ ಆಪಾದನೆಯ ಬಗ್ಗೆ ತಪ್ಪಿತಸ್ಥರಲ್ಲವೆಂದು ಸಕಾರಣವಾಗಿ ತಿಳಿಯಬೇಕು. ಪ್ರಸ್ತುತ ಸಂದರ್ಭದಲ್ಲಿ, ೪೧ನೇ ರೂಲು ಪ್ರಕಾರದ ತಪ್ಪಿಗೆ ಆಪಾದಿತರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಕೂಡದೆಂದು ಸರ್ಕಾರದ ಪ್ರಕಟನೆಯಿಲ್ಲ

ಮೈಸೂರಿನಲ್ಲಿ ಏಕೆ ನೋಟಿಫೈ ಮಾಡಿಲ್ಲ?

ಜಡ್ಜ್:–೧೩೦ (ಎ) ರೂಲನ್ನು ಯಾಕೆ ಮೈಸೂರಿನಲ್ಲಿ ನೋಟಿಫೈ ಮಾಡಲಿಲ್ಲವೆನ್ನುವುದಕ್ಕೆ ಏನಾದರೂ ವಿಶೇಷ ಕಾರಣಗಳಿದೆಯೋ?

ಪಬ್ಲಿಕ್ ಪ್ರಾಸಿಕ್ಯೂಟರ್:-ನನಗೆ ಗೊತ್ತಿಲ್ಲ

ಪಬ್ಲಿಕ್ ಪ್ರಾಸಿಕ್ಯೂಟರು:, ಡಿಫೆನ್ಸ್ ಆಫ್ ಇಂಡಿಯಾ ನಿಬಂಧನೆಗಳಿಗೆ ತಿದ್ದುಪಡಿಗಳು ಬರುತ್ತಲೇ ಇರುತ್ತವೆ ಆದಕಾರಣ ಇಲ್ಲಿಯವ

ರಿಗೆ ವಿಶೇಷ ಶಿಕ್ಷೆ ವಿಧಿಸಲು ಬಂದಿದೆಯೆಂದು ನಿರ್ಧಾರವಾಗಿ ಹೇಳುವುದು ಕಷ್ಟ.

ಶ್ರೀ ಎಲ್. ಎಸ್ ರಾಜು:- ಈ ವಿಷಯ ಅವಶ್ಯವಾಗಿ ಅವಲೋಕಿಸಬೇಕಾಗಿದೆ. ಏತಕ್ಕೆಂದರೆ, ಡಿಫೆನ್ಸ್ ಆಫ್ ಇಂಡಿಯಾ ಆಕ್ಟೇ ಈಗ ಅತ್ಯಂತ ಹೆಚ್ಚು ಜಾರಿಯಲ್ಲಿರುವುದು.

ಪಬ್ಲಿಕ್ ಪ್ರಾಸಿಕ್ಯೂಟರ್—ಬ್ರಿಟಿಷ್ ಇಂಡಿಯಾದಲ್ಲಿ ಯಾವ ಡಿಫೆನ್ಸ್ ಆಫ್ ಇಂಡಿಯಾ ನಿಬಂಧನೆಗಳು ಜಾರಿಯಲ್ಲಿರುವುವೋ ಅವೆಲ್ಲವೂ ಮೈಸೂರಿನಲ್ಲಿಯೂ ಜಾರಿಯಲ್ಲಿದೆಯೆಂದೆ ಅರ್ಥ ಮಾಡಿಕೊಳ್ಳಬೇಕು. ಮೈಸೂರು ಸರ್ಕಾರವು ೧೯೩೯ನೇ ಸೆಪ್ಟೆಂಬರಿನಲ್ಲಿ ಹೊರಡಿಸಿದ ನೋಟಿಫಿಕೇಷನನ್ನು ಹೀಗೆಯೇ ಅರ್ಥ ಮಾಡಿಕೊಳ್ಳಬೇಕು.

ಜಡ್ಜ್:- ಬ್ರಿಟಿಷ್ ಇಂಡಿಯಾದಲ್ಲಿ ಯಾವ ತಿದ್ದುಪಡಿಗಳು ಯಾವಾಗ ಜಾರಿಗೆ ಬಂದವು ಎಂಬುದನ್ನು ಮೈಸೂರಿನಲ್ಲಿ ತಿಳಿಯುವುದು ಹೇಗೆ?

ಪಬ್ಲಿಕ್ ಪ್ರಾಸಿಕ್ಯೂಟರ್:- ಆ ತಿದ್ದುಪಡಿಗಳನ್ನು ಮೈಸೂರು ಗೆಜೆಟ್ಟಿನಲ್ಲಿಯೂ ಜಾರಿಗೆ ತಂದ ಬಗ್ಗೆ ಪ್ರಕಟಿಸಬೇಕೆಂಬುದನ್ನು ಒಪ್ಪುತ್ತೇನೆ. ಆದರೆ, ಶಾಸನದ ದೃಷ್ಟಿಯಲ್ಲಿ, ಬ್ರಿಟಿಷ್ ಇಂಡಿಯಾದಲ್ಲಿ ತಿದ್ದುಪಡಿಗಳು ಜಾರಿಗೆ ಬಂದೊಡನೆಯೇ ಅವು ಇಲ್ಲಿಯೂ ಜಾರಿಗೆ ಬಂದವೆಂದು ಮೈಸೂರು ಸರ್ಕಾರವು ಹೇಳಬಹುದು. ಆ ದೃಷ್ಟಿಯಲ್ಲಿ ೧೩೦ (ಎ) ರೂಲು ಮೈಸೂರಿನಲ್ಲಿ ಜಾರಿಯಲ್ಲಿದೆಯೆಂದೇ ತಿಳಿಯಬೇಕು. ಪಬ್ಲಿಕ್ ಪ್ರಾಸಿಕ್ಯೂಟರು ೧೩೦ [ಎ] ರೂಲು ತಿದ್ದುಪಡಿಯೆಂದೇ ಹೇಳಿದರು. ಅದು ಹೊಸ ನಿಬಂಧನೆಯಾಗಿರಬಹುದು. ಆದರೆ ಅದು ಡಿಫೆನ್ಸ್ ಆಫ್ ಇಂಡಿಯಾ ನಿಬಂಧನೆಗಳ ರಚನೆಗೆ ತಿದ್ದುಪಡಿಯಾಗಿದೆ. ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಪ್ರಕಾರದ ಅಪರಾಧಗಳ ಬಗ್ಗೆ ಜಾಮೀನಿನ ಮೇಲೆ ಬಿಡುವುದೇ ಸಾಧ್ಯವಾಗಿಲ್ಲವೆಂದು ಪಬ್ಲಿಕ್ ಪ್ರಾಸಿಕ್ಯೂಟರು ಕೂಡ ಹೇಳಿದರು. ಕೆಲವು ಗೊತ್ತಾದ ಅಪರಾಧಗಳ ಬಗ್ಗೆ ಜಾಮೀನಿನ ಮೇಲೆ ಬಿಡುವುದನ್ನು ಮನಾಯಿಸಬಹುದು. ಆದರೆ ಆ ಅಪರಾಧಗಳು ಯಾವುವೆಂದು ಸರ್ಕಾರವು ತಿಳಿಸಬೇಕು. ಅರ್ಜಿದಾರರ ಅಪರಾಧವು ಅಂತಹುದಲ್ಲ.

ಆಕ್ಟಿನ ೧೬ (೧) ನೇ ಸೆಕ್ಷನ್

ಪಬ್ಲಿಕ್ ಪ್ರಾಸಿಕ್ಯೂಟರು:—೧೩೦ [ಎ] ರೂಲಿನ ಅರ್ಥವನ್ನು ಮದ್ರಾಸ್ ಹೈಕೋರ್ಟು ಚರ್ಚಿಸಿದೆಯೆಂತಲೂ, ಅದು ೧೯೪೨ ಎ ಐ ಆರ್ ೨೨೯ ರಲ್ಲಿ ಪ್ರಕಟವಾಗಿದೆಯೆಂತಲೂ ಹೇಳಿದರು. ಈ ಅರ್ಥದ ಪ್ರಕಾರ ಈ ರೂಲಿನ ಪ್ರಕಾರ ಜಾಮೀನಿನ ಮೇಲೆ ಬಿಡುವುದೆ ಇಲ್ಲವೆಂತರು. ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ೧೬ [೧] ಸೆಕ್ಷನ್ ಪ್ರಕಾರ, ಆಕ್ಟಿನ ಪ್ರಕಾರ ಮಾಡಲಾಗುವ ಯಾವ ಆಜ್ಞೆಯ ಬಗ್ಗೆಯೂ ಯಾವ ಕೋರ್ಟು ಆಕ್ಷೇಪಣೆ ಮಾಡುವಂತಿಲ್ಲ. ಆದ್ದರಿಂದ ಕೋರ್ಟು ಜಾಮೀನಿನ ಮೇಲೆ ಅರ್ಜಿದಾರರನ್ನು ಬಿಡುವಂತಿಲ್ಲ.

ಶ್ರೀ ಎಲ್ ಎಸ್ ರಾಜುರವರು ಪಬ್ಲಿಕ್ ಪ್ರಾಸಿಕ್ಯೂಟರ ವಾದಕ್ಕೆ ಉತ್ತರವೀಯುತ್ತ ಮದರಾಸ್ ಹೈಕೋರ್ಟಿನ ತೀರ್ಪು ಒಂದು ತೀವ್ರ ಅಪರಾಧಕ್ಕೆ ಸಂಬಂಧಪಟ್ಟದ್ದೆಂದೂ, ಅಂದರೆ ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿಗೆ ವಿರೋಧವಾಗಿ ಘಟಿಸಿದ ಅಪರಾಧವೆಂದೂ ಇದರಲ್ಲಿ ಅಂಥ ಅಪರಾಧವೇನೂ ಇಲ್ಲವೆಂದೂ ಹೇಳಿದರು.

ಆಮೇಲೆ ಮಧ್ಯಾಹ್ನ ೪ ಘಂಟೆಗೆ ಆರ್ಡರ್ ಹೇಳುವುದಾಗಿ ತಿಳಿಸಿದರು.

ಜಾಮೀನು ಅಪೀಲು ಅರ್ಜಿ ನಿರಾಕರಣೆ

ಸಂಪಾದಕರುಗಳ ಮೇಲಿನ ಮೊಕದ್ದಮೆಯಲ್ಲಿ

ಸೆಷನ್ಸ್ ಜಡ್ಜರ ಆರ್ಡರ್

[ನಮ್ಮ ಖಾಸಗಿ ಬಾತ್ಮೀದಾರರಿಂದ]

ಬೆಂಗಳೂರು ಸೆ ೧೮

ಡಿಫೆನ್ಸ್ ಆಫ್ ಇಂಡಿಯಾ ರೂಲ್ಸಿನ ೪೧ (೧) (ಬಿ) ರೂಲ್ ಪ್ರಕಾರ ಮೈಸೂರು ಸರ್ಕಾರದಿಂದ ಕಳೆದ ಆಗಸ್ಟ್ ೧೦ನೇ ತಾರೀಖು ಹೊರಡಿಸಲ್ಪಟ್ಟ ಪ್ರಕಟಣೆಯನ್ನು ಉಲ್ಲಂಘಿಸಿದರೆಂಬ ಅಪಾದನೆ ಮೇಲೆ ಪತ್ರಿಕಾ ಸಂಪಾದಕರುಗಳಾದ ಶ್ರೀಯುತರಾದ ಪಿ ಆರ್ ರಾಮಯ್ಯ, ಟಿ ಟಿ. ಶ್ರೀನಿವಾಸನ್, ಎಸ್ ಕೃಷ್ಣಶರ್ಮ, ಬಿ ಎನ್. ಗುಪ್ತರವರ ಮೇಲೂ ಮತ್ತು ಶ್ರೀ ಟಿ. ಟಿ ಶರ್ಮರವರ ಮೇಲೂ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಹೂಡಲಾಗಿರುವ ಮೊಕದ್ದಮೆಯಲ್ಲಿ ಅಪಾದಿತರ ಪರವಾಗಿ ಬಂದ ಜಾಮೀನು ಅರ್ಜಿಗಳನ್ನು ಸಿಟಿ ಮ್ಯಾಜಿಸ್ಟ್ರೇಟರು ನಿರಾಕರಿಸಿ ಹೊರಡಿಸಿದ್ದ ಆಜ್ಞೆಯ ಮೇಲೆ ಬಂದ ಅಪೀಲು ಅರ್ಜಿಗಳ ಮೇಲೆ ಈ ದಿನ ಬೆಂಗಳೂರು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಎ. ಸುಂದರರಾಜಾಚಾರಯರು ಆರ್ಡರಿತ್ತು ಜಾಮೀನಿನ ಮೇಲೆ ಅಪಾದಿತರನ್ನು ಬಿಡಲು ಸಾಧ್ಯವಿಲ್ಲವೆಂದು ತಿಳಿಸಿ, ಅರ್ಜಿಗಳನ್ನು ವಜಾ ಮಾಡಿದರು.

ನ್ಯಾಯಾಧೀಶರು ತಮ್ಮ ಆರ್ಡರಿನಲ್ಲಿ ಅಭಿಪ್ರಾಯಪಟ್ಟರು. ಬ್ರಿಟಿಷ್ ಭಾರತದಲ್ಲಿ ಜಾರಿಗೆ ತರಲ್ಪಟ್ಟ ಡಿಫೆನ್ಸ್ ಆಫ್ ಇಂಡಿಯಾ ರೂಲ್ಸಿಗೆ ಸಂಬಂಧಪಟ್ಟ ತಿದ್ದುಪಡಿಗಳೆಲ್ಲವೂ ಹಾಗೆಯೇ ಮೈಸೂರಿಗೂ ಅನ್ವಯಿಸುತ್ತವೆಯೆಂತಲೂ ಆದ ಕಾರಣ ರೂಲ್ ೧೩೦ [ಎ] ಮೈಸೂರಿನಲ್ಲಿ ಜಾರಿಯಲ್ಲಿರುವುದೆಂದೂ ತಿಳಿಸಿದ್ದಾರೆ.

ನ್ಯಾಯಾಧೀಶರು ಮುಂದುವರಿದು ಹೀಗೆಂದಿದ್ದಾರೆ.—"ರೂಲ್ ೪೧ [ಬಿ] ಪ್ರಕಾರ ಕ್ಲಾಸ್ [ಬಿ]ಯಲ್ಲಿ ಸೂಚಿಸಲಾಗಿರುವ ನಿಯಮಗಳ ಮೇಲೆ ನಮ್ಮದೇ ಜಾಮೀನಿನ ಮೇಲೆ ಬಿಡುವುದಕ್ಕಾಗಿ ... ಸರ್ಕಾರವು ಈ ಸಂಬಂಧದಲ್ಲಿ ಪ್ರಕಟಿಸಲಾಗಿರುವ ಆರ್ಡರಿನ ಮೂಲಕ ನಿರ್ದಿಷ್ಟಗೊಳಿಸಲ್ಪಟ್ಟ ಸೂಚನೆಗಳಿಗೆ ಅನ್ವಯಿಸುವಂಥ ರೀತಿಯಲ್ಲಿ ರೂಲಿನ ಉಲ್ಲಂಘನೆಯು ಇದ್ದ ಪಕ್ಷದಲ್ಲಿ ಮಾತ್ರ ಅಂತಹ ಉಲ್ಲಂಘನೆಗೆ ಅಪಾದಿತರು ತಪ್ಪಿತಸ್ಥರಲ್ಲವೆಂದು ನಂಬಲು ಸಕಾರಣವಾದ ಆಧಾರಗಳಿವೆಯೆಂದು ಕೋರ್ಟು ತಿಳಿಯುವುದಾದರೆ ಮಾತ್ರವೇ ಹಾಗೆ ಮಾಡಲು ಸಾಧ್ಯವಿದೆ. ರೂಲ್ ೪೧[ಬಿ]ಯಲ್ಲಿ ಹೇಳಲಾಗಿರುವಂತೆ ರೂಲಿನ ಉಲ್ಲಂಘನೆಯು ಯಾವುದೆಂದು ನಿರ್ದಿಷ್ಟ ಆರ್ಡರಿನಲ್ಲಿ ಪ್ರಕಟಿಸಲ್ಪಟ್ಟ ತಪ್ಪುಗಳಲ್ಲೊಂದಾಗಿಲ್ಲ. ೧೩೦ [ಎ] ರೂಲಿನ [ಬಿ] ಕ್ಲಾಸಿನಲ್ಲಿ ಹೇಳಲಾಗಿರುವಂತೆ ಅಪಾದಿತರ ಮೇಲೆ ಬಂದಿರುವ ತಪ್ಪುಗಳು ಅಪಾದನೆಯು ಪ್ರಕಟಿಸಲ್ಪಟ್ಟ ತಪ್ಪುಗಳಲ್ಲೊಂದಲ್ಲದೆಂದ ಹೇಳಲ್ಪಡುವುದಾದರೂ ಕೂಡ, ಅಂತಹ ಉಲ್ಲಂಘನೆಗೆ ಅಪಾದಿತರು ತಪ್ಪಿತಸ್ಥರಲ್ಲವೆಂದು ನಂಬಲು ಸಕಾರಣವಾದ ಆಧಾರಗಳಿವೆಯೆಂದು ಕೋರ್ಟಿಗೆ ತೃಪ್ತಿಯುಂಟಾಗಬೇಕು.

"ಜವಾಬ್ದಾರಿಯುತರಾದ ಪೋಲೀಸ್ ಅಧಿಕಾರಿಗಳಿಂದ ಅಪಾದಿತರ ಮೇಲೆ ಕೆಲವು ಅಪಾದನೆಗಳನ್ನು ಮಾಡಲಾಗಿದೆ ಮತ್ತು ಅಪಾದಿತರು ರೂಲುಗಳ ಉಲ್ಲಂಘನೆಗೆ ತಪ್ಪಿತಸ್ಥರಲ್ಲವೆಂದು ನಂಬುವುದಕ್ಕೆ ಸಕಾರಣವಾದ ಆಧಾರಗಳಿವೆಯೆಂದು ಈ ಸಮಯದಲ್ಲಿ ನನಗೆ ತೃಪ್ತಿಯುಂಟಾಗಲು ಸಾಧ್ಯವಿಲ್ಲದೆ ಆದಕಾರಣ ಅರ್ಜಿದಾರರನ್ನು (ಅಪಾದಿತರನ್ನು) ಜಾಮೀನಿನ ಮೇಲೆ ಬಿಡುಗಡೆ ಮಾಡಬಾರದೆಂಬ ಈ ಸಂದರ್ಭದ ತೀರ್ಮಾನದಂತೆ ಈ ಅರ್ಜಿಗಳನ್ನು ವಜಾ ಮಾಡಲಾಗಿದೆ"

ಜಾಮೀನು ಬಗ್ಗೆ ಹೈಕೋರ್ಟಿನಲ್ಲಿ ಪಿಟಿಷನ್

ಬೆಂಗಳೂರು ಸಂಪಾದಕರುಗಳ ಮೇಲಿನ ಮೊಕದ್ದಮೆ

(ತಾ ರಿ ಡಾ) ಬೆಂಗಳೂರು ಸೆ ೧೬

ಬೆಂಗಳೂರು ಪತ್ರಿಕಾ ಸಂಪಾದಕರುಗಳ ಮೇಲಿನ ಮೊಕದ್ದಮೆಯಲ್ಲಿ ಅಪಾದಿತರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂಬುದಾಗಿ ಹಾಕಿದ್ದ ಅಪೀಲು ಅರ್ಜಿಯನ್ನು ಸೆಷನ್ಸ್ ಜಡ್ಜರು ತಿರಸ್ಕರಿಸಿದುದರಿಂದ ಅವರ ಪರ ವಕೀಲರಾದ ಶ್ರೀ ಎಲ್. ಎಸ್. ರಾಜುರವರು ಈ ಬಗ್ಗೆ ಹೈಕೋರ್ಟಿನಲ್ಲಿ ಜ|| ಟಿ ಸಿಂಗಾರವೇಲು ಮೊದಲಿಯಾರರ ಮುಂದೆ ರಿವಿಷನ್ ಪಿಟಿಷನನ್ನು ಸಲ್ಲಿಸಿದ್ದಾರೆ.

ಮಧ್ಯಾಹ್ನ ಶ್ರೀ ರಾಜುರವರು ಮೊಕದ್ದಮೆಯ ವಿಷಯವನ್ನು ವಿವರಿಸಿ, ತಮಗೆ ವಾದಮಾಡಲು ಸುಮಾರು ೧|| ಗಂಟೆ ಬೇಕಾಗಬಹುದೆಂದರು. ಅಡ್ವೊಕೇಟ್ ಜನರಲ್ಲರು (ಶ್ರೀ ಮಿರ್ಜಾ ಲಕ್ಷ್ಮೀನಾರಣಪ್ಪ) ಚಾರ್ಜ್‌ಷೀಟಿನ ಪ್ರಕಾರ ಈ ಮೊಕದ್ದಮೆಯಲ್ಲಿ ಕೇವಲ ಮೂರು ಪ್ರಾಸಿಕ್ಯೂಷನ್ ಸಾಕ್ಷಿಗಳು ಮಾತ್ರವಿದೆ ಆದ್ದರಿಂದ ಈ ಅರ್ಜಿಗಳ ಬಗ್ಗೆ ತೆಗೆದುಕೊಳ್ಳಬಹುದಾದ ೧|| ಗಂಟೆ ಅವಧಿಯಲ್ಲಿ ಮೊಕದ್ದಮೆಯ ವಿಚಾರಣೆಯೇ ಮುಗಿಯಬಹುದೆಂದರು.

ಜಡ್ಜ್:—ಇದು ಮ್ಯಾಜಿಸ್ಟ್ರೇಟಿಗೆ ಸಂಬಂಧಪಟ್ಟ ವಿಷಯ.

ಜಾಮೀನು ಅರ್ಜಿಗಳನ್ನು ನಾಳೆ ಒಬ್ಬರು ಜಡ್ಜರ ಪರಿಶೀಲನೆಗೆ ಹಾಕಲಾಗಿದೆಯೆಂದು ಜಡ್ಜರು ತಿಳಿಸಿದರು.

ಸಂಪಾದಕರುಗಳ ಮೇಲಿನ ಮೊಕದ್ದಮೆ

ಸೆಪ್ಟೆಂಬರ್ ೨೨ರಿಂದ ವಿಚಾರಣೆಗೆ ಆರಂಭ

[ತಾ. ರಿ. ಡಾ] ಬೆಂಗಳೂರು ಸೆ ೧೬

ಸಂಪಾದಕರುಗಳ ಮೇಲಿನ ಮೊಕದ್ದಮೆಯು ಈ ದಿನ ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ಬಂದು ಸೆಪ್ಟೆಂಬರ್ ೨೨ನೇ ಮಂಗಳವಾರ ೨ ಗಂಟೆಗೆ ಪುನಃ ತೆಗೆದುಕೊಳ್ಳುವಂತೆ ಮುಂದಕ್ಕೆ ಹಾಕಲ್ಪಟ್ಟಿತು. ಪಬ್ಲಿಕ್ ಪ್ರಾಸಿಕ್ಯೂಟರ್‌ರಾದ ಶ್ರೀ ಜಿ. ಎಸ್. ದೊರೆಸ್ವಾಮಿ ಅಯ್ಯಂಗಾರರವರು ಪ್ರಾಸಿಕ್ಯೂಷನ್ ಪರವಾಗಿ ಮೊಕದ್ದಮೆ ನಡೆಸುವುದಾಗಿ ತಿಳಿಸಿದರು.

ಸೆಪ್ಟೆಂಬರ್ ೨೨ನೇ ತಾರೀಖಿನಿಂದ ಮುಂದೆ ದಿನದಿನವೂ ಈ ಮೊಕದ್ದಮೆಯನ್ನು ನಡೆಸಬಹುದೆಂದು ಮ್ಯಾಜಿಸ್ಟ್ರೇಟರು ತಿಳಿಸಿದರು.

ಪ್ರಾಸಿಕ್ಯೂಷನ್ ಪರ ಇನ್ನೂ ಕೆಲವು ಸಾಕ್ಷಿಗಳ ವಿಚಾರಣೆ ಬಗ್ಗೆ ಸಪ್ಲಿಮೆಂಟರಿ ಲಿಸ್ಟನ್ನು ಹಾಜರುಪಡಿಸಿರುವುದಾಗಿ ಪಬ್ಲಿಕ್ ಪ್ರಾಸಿಕ್ಯೂಟರು ತಿಳಿಸಿದರು.

ಹೈಕೋರ್ಟಿನಲ್ಲಿ ಜಾಮೀನು ಅರ್ಜಿ

ಸಂಪಾದಕರುಗಳ ಮೇಲಿನ ಮೊಕದ್ದಮೆಯಲ್ಲಿ

[ತಾಯಿನಾಡು ಖಾ|| ಬಾತ್ಮೀದಾರರಿಂದ]

ಬೆಂಗಳೂರು ಸೆ ೧೬

ಬೆಂಗಳೂರಿನ ಸಂಪಾದಕರ ಪರವಾಗಿ ಅಡ್ವೋಕೇಟರಾದ ಶ್ರೀ ಎಲ್. ಎಸ್. ರಾಜುರವರು ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವ ಅರ್ಜಿಗಳನ್ನು ಈ ದಿನ ಬೆಳಗ್ಗೆ ೧೧-೩೦ ಗಂಟೆಗೆ ಹೈಕೋರ್ಟಿನಲ್ಲಿ ಮಿ|| ಜಸ್ಟಿಸ್ ಸಿಂಗಾರವೇಲು ಮೊದಲಿಯಾರ್‌ರವರ ಮುಂದೆ ದಾಖಲ್ಮಾಡಿದರು. ನ್ಯಾಯಾಧೀಶರು ಅರ್ಜಿಗಳನ್ನು ಅಂಗೀಕರಿಸಿ ರಿಕಾರ್ಡುಗಳನ್ನು ತರಿಸಲು ಅಪ್ಪಣೆ ಮಾಡಿದರು. ಮತ್ತು ಅಡ್ವೋಕೇಟ್ ಜನರಲ್‌ರವರಿಗೆ ನೋಟೀಸು ಕೊಡಲಾಯಿತು.

ಈ ಅರ್ಜಿಗಳ ಬಗ್ಗೆ ವಾದವಿವಾದಗಳು ಮಧ್ಯಾಹ್ನ ೩ ಗಂಟೆಗೆ ಆರಂಭವಾಯಿತು. ಕೋರ್ಟಿನ ಹಾಲು ತುಂಬಾ ಪತ್ರಿಕೆಯವರಿಂದಲೂ ಲಾಯರುಗಳಿಂದಲೂ ತುಂಬಿತ್ತು.

ಶ್ರೀ ರಾಜುರವರು ಕೇಸಿನ ವಿವರವನ್ನು ತಿಳಿಸಿ ಅರ್ಜಿಗಳಲ್ಲಿರುವ ವಿಷಯಗಳನ್ನು ವಿವರಿಸಿದರು. ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ೪೧ ನೇ ರೂಲ್ ೧ ಕ್ಲಾಸ್ [ಬಿ] ಪ್ರಕಾರ ೧೯೪೨ನೇ ಆಗಸ್ಟ್ ೧೦ನೇ ತಾ|| ಮೈಸೂರು ಸರ್ಕಾರದ ನೋಟಿಫಿಕೇಷನ್ನು ಕೋರ್ಟಿನ ಗಮನಕ್ಕೆ ತಂದರು. ಮತ್ತು ಅಲ್ಲಿಂದೀಚೆಗೆ ಬ್ರಿಟಿಷ್ ಇಂಡಿಯಾದಲ್ಲಿ ಆ ರೂಲನ್ನು ತಿದ್ದುಪಡಿ ಮಾಡಿದ್ದನ್ನು ಅಂಶವನ್ನೂ ಸಹ ತಿಳಿಸಿದರು.

ನ್ಯಾಯಾಧೀಶರು—ಮಿ|| ರಾಜುರವರೇ, ತಮ್ಮ ಪ್ರತಿಯಲ್ಲಿ ತಿದ್ದುಪಡಿ ಕಾಣುವುದಿಲ್ಲ.

ಮಿ|| ರಾಜು-ಈಗಿರುವ ಪ್ರತಿಗಳು ಅಪ್ಟುಡೇಟ್ ಆಗಿರುವುದಿಲ್ಲ ಮತ್ತು ಸರ್ಕಾರಿ ಬುಕ್ ಡಿಪೋವಿನಲ್ಲಿ ಅಪ್ಟುಡೇಟಾಗಿರುವ ಡಿಫೆನ್ಸ್ ಆಫ್ ಇಂಡಿಯಾ ರೂಲ್ಸಿನ ಪುಸ್ತಕವು ಸಿಕ್ಕುವುದಿಲ್ಲ. ಇದರಿಂದ ನಮಗೆಲ್ಲರಿಗೂ ತೊಂದರೆಯಾಗಿದೆ. ಕೆಳಕೋರ್ಟಿನಲ್ಲಿ ನನ್ನ ಅರ್ಜಿಯಲ್ಲಿ ಈ ಕಾರಣವನ್ನು ನಮೂದಿಸಿದ್ದೇನೆ.

೧೯೪೦ನೇ ಡಿಸೆಂಬರ್ ಮೈಸೂರು ಗೆಜೆಟ್‌ನ ೪ನೇ ಭಾಗವನ್ನು ನೋಡಿದರೆ ೪೧ನೇ ನಿಬಂಧನೆಗೆ ಸಂಬಂಧಪಟ್ಟ ಇಂಡಿಯಾ ಸರ್ಕಾರದ ತಿದ್ದುಪಡಿಯು ಪುನಃ ಪ್ರಕಟಿಸಲ್ಪಟ್ಟಿರುವುದು ವ್ಯಕ್ತವಾಗುತ್ತದೆಯೆಂದು ಶ್ರೀ ರಾಜುರವರು ತಿಳಿಸಿದರು. ೪೧ [ಬಿ] ನೇ ನಿಬಂಧನೆಗೆ ವ್ಯತಿರಿಕ್ತವಾಗಿದ್ದೆಂದು ಹೇಳಲಾಗಿರುವ ಲೇಖನಗಳು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ಮಂಜೂರು ಮಾಡಿರುವ ಸಾರ್ವಜನಿಕ ಚಳುವಳಿ ಸಂಬಂಧ ಅಥವಾ ಆ ಚಳುವಳಿಯ ಬಗ್ಗೆ ಸರಕಾರದವರು ಕೈಕೊಳ್ಳತಕ್ಕ ಕಾರ್ಯಕ್ರಮದ ಬಗ್ಗೆ ಎಂಬುದನ್ನು ಪ್ರಾಸಿಕ್ಯೂಷನ್‌ನವರು ರುಜುವಾತುಪಡಿಸಬೇಕೆಂಬುದಾಗಿ ಶ್ರೀ ರಾಜುರವರು ತಿಳಿಸಿದರು. ಚಾರ್ಜ್‌ಷೀಟಿನಲ್ಲಿ ನಮೂದಿಸಿರುವುದರ ಪ್ರಕಾರ ಇಂತಹ ರುಜುವಾತುಗಳು ತೋರಿಸತಕ್ಕ ಗುರುತು ಏನೂ ಇಲ್ಲವೆಂದು ಗೊತ್ತಾಗಿದೆ.

ಶ್ರೀ ರಾಜುರವರು ಅನಂತರ ಡಿಫೆನ್ಸ್ ಆಫ್ ಇಂಡಿಯಾ ರೂಲ್ಸಿನ ತಿದ್ದುಪಡಿಗಳನ್ನೂ ಮೈಸೂರು ಸರ್ಕಾರದ ನೋಟಿಫಿಕೇಷನುಗಳನ್ನೂ ಕೋರ್ಟಿನ ಗಮನಕ್ಕೆ ತಂದರು. ಮತ್ತು ಬ್ರಿಟಿಷ್ ಇಂಡಿಯಾದಲ್ಲಾಗತಕ್ಕ ಎಲ್ಲ ತಿದ್ದುಪಡಿಗಳೂ ಸ್ವಯಂ ಮೈಸೂರಿನಲ್ಲಿ ಸಹ ಅನ್ವಯಿಸುತ್ತವೆಂದು ೧೯೪೧ನೇ ಡಿಸೆಂಬರ್ ೨೨ನೇ ತಾ|| ನಲ್ಲಿ ಮೈಸೂರು ಸರ್ಕಾರದವರು ಹೊರಡಿಸಿದ ನೋಟಿಫಿಕೇಷನ್ನು ಈ ನೋಟಿಫಿಕೇಷನ್ ಯಾವ ಕಾನೂನಿನ ಪ್ರಕಾರ ಹೊರಡಿಸಲ್ಪಟ್ಟಿತೋ ಆ ಡಿಫೆನ್ಸ್ ಆಫ್ ಇಂಡಿಯಾ ಆಕ್ಟ್ ವಿರುದ್ಧವೆಂದೂ ವಾದಿಸಿದರು.

ಕೇಸು ಮುಂದಿನ ವಾದವಿವಾದಗಳಿಗಾಗಿ ೧೭-೯-೪೨ಕ್ಕೆ ಮುಂದುವರಿಸಲಾಯಿತು.

ಸಂಪಾದಕರ ಜಾಮೀನು ಅರ್ಜಿ

ಹೈ ಕೋರ್ಟಿನಲ್ಲಿ ಶ್ರೀ ರಾಜಾರವರ ವಾದ

[ಸಂಯುಕ್ತ [illegible] ವರದಿಗಾರರಿಂದ]

ಬೆಂಗಳೂರು ಸೆ ೧೭

ಡಿಫೆನ್ಸ್ ಆಫ್ ಇಂಡಿಯಾ ರೂಲ್ ೮೧ [ಬಿ] ಪ್ರಕಾರ [illegible] ಬೆಂಗಳೂರು ಪತ್ರಿಕೆಗಳ ಸಂಪಾದಕರಾದ ಶ್ರೀಯುತರಾದ ಪಿ ಆರ್ ರಾಮಯ್ಯ, ಪಿ ಬಿ ಶ್ರೀನಿವಾಸನ್, [illegible] ಎಸ್ ಕೃಷ್ಣಶರ್ಮ ಮತ್ತು ಬಿ.ಎಸ್. [illegible] ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂದು [illegible] ಅರ್ಜಿಗಳ ಬಗ್ಗೆ ಮೈಸೂರು ಹೈಕೋರ್ಟಿನಲ್ಲಿ ಶ್ರೀ ಜಸ್ಟಿಸ್ [illegible] ಅವರ ಸಮಕ್ಷಮ ವಾದ ಮುಂದುವರಿಯಿತು.

ಕೋರ್ಟು ಹಾಲು [illegible] ವಕೀಲರು, ಅಡ್ವೋಕೇಟುಗಳು, ಪತ್ರಿಕೋದ್ಯೋಗಿಗಳು [illegible] ತುಂಬಿತ್ತು.

ಶ್ರೀ ಎಲ್. ಎಸ್. ರಾಜುರವರು, ಅರ್ಜಿದಾರರ ಪರ, ವಾದ ಮಾಡುತ್ತಾ, ಮೈಸೂರು [illegible] ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ [illegible] ಪ್ರಕಾರ [illegible] ಬ್ರಿಟಿಷ್ ಇಂಡಿಯಾದಲ್ಲಿ [illegible] ಮೈಸೂರು [illegible] ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ [illegible] ಮೈಸೂರು ಸರ್ಕಾರಕ್ಕೆ [illegible] ಪ್ರಕಾರ [illegible]

ಇದೆ, ಮೈಸೂರು ಸರ್ಕಾರಕ್ಕೆ ಆ ನಿಬಂಧನೆಗಳನ್ನು ಮೈಸೂರು ಸಂಸ್ಥಾನದಲ್ಲಿ [illegible] ಸ್ಪಷ್ಟವಾಗಿ ತಿಳಿಸಬೇಕು. ಅಷ್ಟರಿಂದ, ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ [illegible] ಪ್ರಕಾರ, ಮೈಸೂರು ಸರ್ಕಾರ [illegible] ನೋಟಿಫಿಕೇಷನು [illegible] ಎಂದು ಶ್ರೀ ರಾಜುರವರು ಹೇಳಿದರು.

ರೂಲ್ ೧೩೦ (ಎ)

ಒಂದು ವೇಳೆ, ಆ ನೋಟಿಫಿಕೇಷನ್ನು [illegible] ಡಿಫೆನ್ಸ್ ಆಫ್ ಇಂಡಿಯಾ ರೂಲ್ ೧೩೦ (ಎ) [illegible] ಎಂದು ಶ್ರೀ ರಾಜುರವರು ಹೇಳಿದರು. ಈ ರೂಲನ್ನು ಬ್ರಿಟಿಷ್ ಇಂಡಿಯಾದಲ್ಲಿ [illegible] ರೂಲ್ ೧೩೦ [ಎ] [illegible] ಸಂಬಂಧಿಸಿದುದು [illegible] ಬಿಡುಗಡೆ ಮಾಡಲು [illegible] ಅರ್ಜಿದಾರರು ರೂಲ್ ೧೩೦ [ಎ] ಕ್ಲಾಸ್ [ಬಿ] [illegible] ಡಿಫೆನ್ಸ್ ಆಫ್ ಇಂಡಿಯಾ ರೂಲ್ ೮೧ ರ ಬಗ್ಗೆ [illegible] ಡಿಫೆನ್ಸ್ ಆಫ್ ಇಂಡಿಯಾ ರೂಲ್ ೧೩೦ [ಎ] [illegible] ಅರ್ಜಿದಾರರು [illegible] ಶ್ರೀ ರಾಜುರವರು [illegible] ಅರ್ಜಿದಾರರು [illegible] ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕು [illegible] ಎಂದರು.

ಅಡ್ವೋಕೇಟ್ ಜನರಲ್ಲರ ಸೂಚನೆ

ಅಡ್ವೋಕೇಟ್ ಜನರಲ್ಲರು (ಶ್ರೀ [illegible] ಎಸ್. [illegible]) [illegible] ಅವರ ಅಡ್ವೋಕೇಟ್ ಜನರಲ್ಲರು [illegible] ಈ ದಿನ ಕೋರ್ಟಿನ ಸಂಜೆ ೫ ೩೦ ಘಂಟೆಗೆ [illegible] ಎಂದೂ, ಅಂದರೆ ವಾದವು ಈ ದಿನ ಮುಗಿಯುವುದಿಲ್ಲವೆಂದು ತಿಳಿದಿದ್ದರೆಂದೂ ಹೇಳಿದರು.

ಅಡ್ವೋಕೇಟರನ್ನು ಈ ದಿನವೇ ಮುಗಿಸಬೇಕೆಂದಿದ್ದ ವಿಚಾರಣೆಯನ್ನು ಅಲ್ಲಿಯೇ ನಿಲ್ಲಿಸಿಕೊಳ್ಳಬೇಕಾಯಿತು.

ಆಬಳಿಕ [illegible] ಕೋರ್ಟಿನಲ್ಲಿ ವಿಚಾರಣೆಯನ್ನು ಸೆಪ್ಟೆಂಬರ್ ೨೨ ಕ್ಕೆ ಮುಂದುವರಿಸಲಾಗಿದೆ ಎಂದು [illegible] ತಿಳಿಸಲಾಯಿತು.

ಅಡ್ವೋಕೇಟ್ ಜನರಲ್ಲರು [illegible] ದಿನ [illegible] ತಿಳಿಸಿಕೊಳ್ಳಬಹುದೆಂದೂ ಸೂಚಿಸಿದರು. ಅದೇ ರೀತಿ [illegible] ಮುಂದುವರಿಸಲಾಯಿತು.

ಪ್ಯೂರಿಟಿಗಳ ಮೇಲೆ ಬಿಡುಗಡೆ

ಸಂಪಾದಕರ ಜಾಮೀನು ಅರ್ಜಿಗಳ ಬಗ್ಗೆ ಹೈ ಕೋರ್ಟಿನ ತೀರ್ಪು

[ತಾ ೦ ಬಾ] ಬೆಂಗಳೂರು ಸೆ ೧೮

ತಲಾ ೫೦೦ ರೂಪಾಯಿ [illegible] ಶ್ಯೂರಿಟಿಗಳು ಮತ್ತು [illegible] ವಿಚಾರಣೆ [illegible] ಈ ದಿನ ಸಾಯಂಕಾಲ ಬೆಂಗಳೂರು ಸಂಪಾದಕರುಗಳ ಜಾಮೀನು ಅರ್ಜಿಗಳ ವಿಚಾರಣೆಯಲ್ಲಿ ಮೈಸೂರು ಹೈ ಕೋರ್ಟಿನವರು ತೀರ್ಪು ಕೊಟ್ಟರು.

ಜಾಮೀನಿನ ಮೇಲೆ ಸಂಪಾದಕರ ಬಿಡುಗಡೆ

ಶ್ರೀ ಜಸ್ಟಿಸ್ ಸಿಂಗಾರವೇಲು ಮೊದಲಿಯಾರರ ಆರ್ಡರು

ರಾತ್ರಿಯೇ ಜೈಲಿನಿಂದ ಬಿಡುಗಡೆಯಾದರು

[ತಾ ೧ ಬಾ] ಬೆಂಗಳೂರು ೬ ೧೯

ಶ್ರೀಯುತರಾದ ಟಿ. ಆರ್. ರಾಮಯ್ಯ, ಟಿ. ಬಿ. ಶ್ರೀನಿವಾಸನ್, ಟಿ. ಟಿ. ಶರ್ಮ, ಬಿ. ಎನ್. ಗುಪ್ತ ಮತ್ತು ಸಿದ್ಧವನಹಳ್ಳಿ ಕೃಷ್ಣಶರ್ಮ ಇವರುಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದೆಂದು ನಿನ್ನೆ ಸಂಜೆ ಮೈಸೂರು ಹೈಕೋರ್ಟಿನಲ್ಲಿ ರಾಜಧರ್ಮಾಧ್ಯಕ್ಷ ಶ್ರೀ ಜಸ್ಟಿಸ್ ಟಿ. ಸಿಂಗಾರವೇಲು ಮೊದಲಿಯಾರ್‌ರವರು ತೀರ್ಪು ಕೊಟ್ಟರು.

ಕೋರ್ಟು ಹಾಲು ಪತ್ರಿಕೋದ್ಯೋಗಿಗಳಿಂದಲೂ, ಲಾಯರುಗಳಿಂದಲೂ ಮತ್ತು ಪ್ರೇಕ್ಷಕರಿಂದಲೂ ತುಂಬಿತ್ತು.

ಅಡ್ವೊಕೇಟ್ ಜನರಲ್‌ರವರಾದ ಶ್ರೀ ಮಿಸ್ಟರ್ ಎನ್. ಲಕ್ಷ್ಮೀನಾರಾಯಣರವರು ತಮ್ಮ ವಾದವನ್ನು ಸುಮಾರು ಒಂದೂವರೆ ಗಂಟೆ ಕಾಲ ಮಾಡಿದರು.

ಅನಂತರ ಶ್ರೀ ಎಲ್. ಎಸ್. ರಾಜುರವರು ಅದಕ್ಕೆ ಪ್ರತ್ಯುತ್ತರ ಕೊಟ್ಟರು.

ಜಡ್ಜರ ತೀರ್ಪು

ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ಈ ರೀತಿ ಅಭಿಪ್ರಾಯಪಟ್ಟಿದ್ದಾರೆ:—

ಶ್ರೀಯುತರಾದ ಟಿ. ಬಿ. ಶ್ರೀನಿವಾಸನ್, ಟಿ. ಟಿ. ಶರ್ಮ, ಸಿದ್ಧವನಹಳ್ಳಿ ಕೃಷ್ಣಶರ್ಮ, ಬಿ. ಎನ್. ಗುಪ್ತ ಮತ್ತು ಟಿ. ಆರ್. ರಾಮಯ್ಯ ಇವರುಗಳು ಡಿಫೆನ್ಸ್ ಆಫ್ ಇಂಡಿಯಾ ಕಾನೂನಿನ ೪೧ (೧) (ಬಿ) ಪ್ರಕಾರ ಶಿಕ್ಷೆಗೆ ಗುರಿಯಾಗತಕ್ಕ ಅಪರಾಧದ ಮೇಲೆ ಬೆಂಗಳೂರು ನಗರದ ಪೋಲೀಸರು ಮೈಸೂರಿಗೆ ಅನ್ವಯಿಸುವ ಡಿಫೆನ್ಸ್ ಆಫ್ ಇಂಡಿಯಾ ರೂಲ್ ೪೧ (೧) (ಬಿ) ಪ್ರಕಾರ ಅಪಾದನೆ ಮಾಡಿದ್ದಾರೆ. ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರೂ ಮತ್ತು ಸೆಷನ್ಸ್ ಜಡ್ಜರೂ ಜಾಮೀನಿನ ಮೇಲೆ ಬಿಡುಗಡೆ ಮಾಡಲಿಲ್ಲ. ಅವರುಗಳು ಹೈಕೋರ್ಟಿಗೆ ಅರ್ಜಿ ಹಾಕಿಕೊಂಡಿದ್ದಾರೆ. ಅರ್ಜಿಯನ್ನು ವಿರೋಧಿಸಲು ಅಡ್ವೊಕೇಟ್ ಜನರಲ್‌ರವರಿಗೆ ತಿಳಿಸಲಾಗಿತ್ತು.

ಅಕ್ಟಿನ ಸೆಕ್ಷನ್ ೨ ಮತ್ತು ರೂಲ್ ೧೩೦ (ಎ)

ಅಪಾದಿತರುಗಳ ಮೇಲೆ ಹೊರಿಸಿರುವ ಅಪರಾಧಗಳು ಕ್ರಿಮಿನಲ್ ಪ್ರೊಸೀಜರ್ ಕೋಡಿನ ಒಳಪಟ್ಟಿರುವುದರಿಂದ, ಕ್ರಿಮಿನಲ್ ಪ್ರೊಸೀಜರ್ ಕೋಡ್ ೪೯೬ನೇ ಸೆಕ್ಷನ್ ಪ್ರಕಾರ ಅರ್ಜಿಯು ಸರಿಯಾಗಿದೆಯೆಂದು ಅರ್ಜಿದಾರರ ಪರವಾಗಿ ಶ್ರೀ ಎಲ್. ಎಸ್. ರಾಜುರವರು ಅಭಿಪ್ರಾಯಪಟ್ಟಿರುವರು. ಆದರೆ ಡಿಫೆನ್ಸ್ ಆಫ್ ಇಂಡಿಯಾ ರೂಲ್ ೧೩೦ (ಎ) ಕ್ರಿಮಿನಲ್ ಪ್ರೊಸೀಜರ್ ಕೋಡ್ ೪೯೬ನೇ ಸೆಕ್ಷನ್ ಪ್ರಕಾರ ಅರ್ಜಿದಾರರನ್ನು ಬಿಡುಗಡೆ ಮಾಡಲು ಕೋರ್ಟಿಗೆ ಅಧಿಕಾರ ಕೊಡುವುದಿಲ್ಲವೆಂದು ಅಭಿಪ್ರಾಯವನ್ನು ಅಡ್ವೊಕೇಟ್ ಜನರಲ್‌ರವರು ಸೂಚಿಸಿದರು. ರೂಲು ೧೩೦ (ಎ) ಯು ಮೈಸೂರಿನಲ್ಲಿ ಜಾರಿಯಲ್ಲಿಲ್ಲವೆಂಬುದು ಶ್ರೀ ಎಲ್. ಎಸ್. ರಾಜುರವರ ಮುಖ್ಯ ವಾದ. ೧೩೦ [ಎ] ರೂಲು ಜಿ. ಓ. ೪೬೨೨. ೨-೪೨-೬೭ ತಾರೀಖು ೮-೩-೪೧ ನೇ ನೋಟಿಫಿಕೇಷನ್ ಎಂಬ ಪ್ರಕಾರ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟವಾಗಿದೆ. ಈ ನಿಯಮವು ಬ್ರಿಟಿಷ್ ಇಂಡಿಯಾದಲ್ಲಿ ಆ ರೂಲನ್ನು ಜಾರಿಗೆ ತಂದಿದೆ ಎಂದು ತೋರುತ್ತದೆ. ಅಂದರೆ, ಇಂಡಿಯಾ ಸರ್ಕಾರದ ನೋಟಿಫಿಕೇಷನನ್ನು ಇಲ್ಲಿ ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟಿಸಿದೆ. ಅದರಿಂದ ಅದು ಮೈಸೂರಿನಲ್ಲಿ ಜಾರಿಯಲ್ಲಿಲ್ಲವೆಂದು ಶ್ರೀ ಎಲ್. ಎಸ್. ರಾಜುರವರ ಅಭಿಪ್ರಾಯವು. ಅವರ ವಾದದ ಪ್ರಕಾರ ಡಿಫೆನ್ಸ್ ಆಫ್ ಇಂಡಿಯಾ ಅಕ್ಟಿನ ೨ನೇ ಸೆಕ್ಷನ್ನಿನ ಪ್ರಕಾರ ನಿಬಂಧನೆಗಳನ್ನು ಮಾಡಲು ಮೈಸೂರು ಸರ್ಕಾರಕ್ಕೆ ಅಧಿಕಾರವಿದೆ

೧೯೩೯ನೇ ನವೆಂಬರ್ ನೋಟಿಫಿಕೇಷನ್

ಸೆಕ್ಷನ್ ೧೮ ರ ಪ್ರಕಾರ ೧೯೩೯ನೆಯ ಡಿಫೆನ್ಸ್ ಆಫ್ ಇಂಡಿಯಾ ಕಾನೂನು ಬ್ರಿಟಿಷ್ ಇಂಡಿಯಾದಲ್ಲಿ ಜಾರಿಯಲ್ಲಿರುವುದನ್ನು ಕಾಣುತ್ತೇವೆ. ಅನ್ವಯಿಸಿದ್ದರೂ ಅದು ಮೈಸೂರಿನಲ್ಲಿ ಜಾರಿಗೆ ಬರುವುದು ಸೆಕ್ಷನ್ ೩ರ ಪ್ರಕಾರ ಮೇಲೆ ತಿಳಿಸಿದ ಈ ಅಕ್ಟು ಅದರ ಜೊತೆಗೆ ಸೇರಿರುವ ಷೆಡ್ಯೂಲ್‌ನಲ್ಲಿ ತಿಳಿಸಿರುವ ಬದಲಾವಣೆಗಳಿಗೆ ಅನ್ವಯಿಸುವಂತೆ ಜಾರಿಯಲ್ಲಿರಬೇಕು.

ಸರ್ಕಾರದವರು ತಮಗೆ ಸೆಕ್ಷನ್ ೨ರ ಪ್ರಕಾರ ಇರುವ ಅಧಿಕಾರವನ್ನು ಉಪಯೋಗಿಸಿ ನಿಬಂಧನೆಗಳನ್ನು ಮಾಡುವವರೆಗೂ ಅವು ಮೈಸೂರಿನಲ್ಲಿ ಜಾರಿಗೆ ಬರುವುದಿಲ್ಲವೆಂಬುದು ಶ್ರೀ ಎಲ್. ಎಸ್. ರಾಜುರವರ ವಾದದಿಂದ ವ್ಯಕ್ತವಾಗುವುದು. ೧೩೦ [ಎ] ನಿಬಂಧನೆಯು ತಿಳಿಸಿರುವ ನೋಟಿಫಿಕೇಷನಿನಲ್ಲಿ ಡಿಫೆನ್ಸ್ ಆಫ್ ಇಂಡಿಯಾ ಅಕ್ಟಿನ ಪ್ರಸ್ತಾಪವಿಲ್ಲ. ಆದರೆ ಆ ನೋಟಿಫಿಕೇಷನ್ ಪ್ರಕಾರ ೧೩೦ [ಎ] ನಿಬಂಧನೆಯು ಮೈಸೂರಿನಲ್ಲಿ ಜಾರಿಯಾಗಿದೆ ಎಂದು ಅಡ್ವೊಕೇಟ್ ಜನರಲ್‌ರವರು ವಾದ ಮಾಡಿದರು. ಅವರು ತಮ್ಮ ವಾದವನ್ನು ಸಮರ್ಥಿಸಲು ಜಿ. ಓ. ೧೩೬೧ ೨೦-೩೯-೨೮ ೧೯೩೯ ನೇ ಸೆಪ್ಟೆಂಬರ್ ೪ರ ಹೋಂ ನೋಟಿಫಿಕೇಷನ್ ಮತ್ತು ಜಿ. ಓ. ೪೪೦ ೧೯೩೯ನೇ ನವೆಂಬರ್ ೨೨ರಲ್ಲಿ ಹೊರಟ ನೋಟಿಫಿಕೇಷನನ್ನು ಆಧಾರವಾಗಿಟ್ಟುಕೊಂಡರು.

ಮೈಸೂರಿನ ನಿಬಂಧನೆಗಳು

೧೯೩೯ರ ಡಿಫೆನ್ಸ್ ಆಫ್ ಇಂಡಿಯಾ ಆರ್ಡಿನೆನ್ಸ್ ಪ್ರಕಾರ ಮಾಡಿದ ನಿಬಂಧನೆಗಳು ಈಗ ಮೈಸೂರಿನಲ್ಲಿ ಜಾರಿಯಲ್ಲಿವೆ. ೧೯೩೯ರಲ್ಲಿ ಡಿಫೆನ್ಸ್ ಆಫ್ ಇಂಡಿಯಾ ಆಕ್ಟು ಮೈಸೂರಿನಲ್ಲಿ ೮-೧೧-೧೯೩೯ರಲ್ಲಿ ಜಾರಿಗೆ ತರಲ್ಪಟ್ಟಿತು. ಅದು ಡಿಫೆನ್ಸ್ ಆಫ್ ಇಂಡಿಯಾ ಅಕ್ಟಿನ ೮ನೇ ಸೆಕ್ಷನ್ ಪ್ರಕಾರ ಆ ನಿಬಂಧನೆಗಳು ಮುಂದುವರಿಯುವುವು.

ಡಿಫೆನ್ಸ್ ಆಫ್ ಇಂಡಿಯಾ ಅಕ್ಟಿನ ೨ ನೇ ಸೆಕ್ಷನಿನ ಪ್ರಕಾರ ನಿಬಂಧನೆಗಳನ್ನು ರಚಿಸಲು ಮೈಸೂರು ಸರ್ಕಾರಕ್ಕೆ ಅಧಿಕಾರವಿರುವುದರಲ್ಲಿ ಸಂದೇಹವಿಲ್ಲ. ಆದರೆ ಆ ಅಧಿಕಾರದ ಪ್ರಕಾರ ಬ್ರಿಟಿಷ್ ಇಂಡಿಯಾದಲ್ಲಿ ಜಾರಿಯಲ್ಲಿರುವ ತಿದ್ದುಪಡಿಗಳು ಕೂಡ ಈ ನಿಬಂಧನೆಗಳಿಗೆ ಅನ್ವಯವಾಗುವುವೇ ಎಂಬುದು ಪ್ರಶ್ನೆ. ಅಡ್ವೊಕೇಟ್ ಜನರಲ್ಲರು ಹಾಗೆ ಅನ್ವಯವಾಗುವುದೆಂದು ವಾದ ಮತ್ತು ಈ ಸಂಬಂಧವಾಗಿ ಮೈಸೂರಿಗೆ ಅನ್ವಯವಾಗುವ ಡಿಫೆನ್ಸ್ ಆಫ್ ಇಂಡಿಯಾ ಅಕ್ಟಿನ ೫ ನೇ ಸೆಕ್ಷನನ್ನು ಮತ್ತು ಅದೇ ಅಕ್ಟಿನ ೨೧ ಸೆಕ್ಷನನ್ನು ಆಧಾರವಾಗಿ ತೋರಿಸಿದರು. ಅದರ ಪ್ರಕಾರ, ಡಿಫೆನ್ಸ್ ಆಫ್ ಇಂಡಿಯಾ ಆರ್ಡಿನೆನ್ಸ್ ಪ್ರಕಾರ ನಿಬಂಧನೆಗಳನ್ನು ಸೆಕ್ಷನ್ ೨೧ ರ ಪ್ರಕಾರ ರಚಿಸಬೇಕು. ಈ ಸೆಕ್ಷನು ಪ್ರಕಾರ, ಮೈಸೂರು ಸರ್ಕಾರವು ಆ ಸೆಕ್ಷನನ್ನು ಜಾರಿ ಮಾಡಿದ ಸಮಯದಲ್ಲಿದ್ದ ನಿಬಂಧನೆಗಳನ್ನು ಜಾರಿಗೆ ತರಬಹುದೇ ಅಲ್ಲದೆ ಅಲ್ಲಿಂದೀಚೆಗೆ ಆಗಿರುವ ಮತ್ತು ಮುಂದೆ ಆಗುವ ತಿದ್ದುಪಡಿಗಳನ್ನೂ ಮೈಸೂರಿಗೆ ಅನ್ವಯಿಸಬಹುದು. ಅದರಿಂದ ಹೊಸದಾಗಿ ಜಾರಿಯಾಗಬೇಕು.

೧೯೩೯ ನೇ ನವೆಂಬರ್ ೨೨ ನೇ ನೋಟಿಫಿಕೇಷನ್ನಿನಲ್ಲಿ "ಬ್ರಿಟಿಷ್ ಇಂಡಿಯಾದಲ್ಲಿ ಸಧ್ಯ ಇರುವ ತಿದ್ದುಪಡಿಗಳಿಗೆ ಒಳಗಾಗಿರುವ ನಿಬಂಧನೆಗಳಿಗೆ ಒಳಗಾಗಿ" ಎಂದಿರುವುದು "ಡಿಫೆನ್ಸ್

ಆಫ್ ಇಂಡಿಯಾ ಕಾನೂನಿಗೆ ವಿರೋಧವಾಗಿದ್ದ ವೆಂಬುದು ಅಡ್ವೋಕೇಟ್ ಜನರಲ್ಲರು ಹೇಳುತ್ತಾರೆ ಆದರೆ, ನನ್ನ ಅಭಿಪ್ರಾಯದಲ್ಲಿ ಸೆಕ್ಷನ್ ೫ ಅರ್ಥ ವಿವರಿಸುವ ಸೆಕ್ಷನ್ನು ಅದನ್ನು ಅನ್ವಯಿಸುವು ದರ ಬಗ್ಗೆ ಸ್ವಲ್ಪ ಗೊಂದಲವಿದೆ. ಆದರೂ ಪ್ರಕೃತದಲ್ಲಿ ಅರ್ಜಿದಾರರು ಅವಲಂಬಿಸಿದ ಶ್ರೀ ರಾಜ ರವರು ಸೂಚಿಸಿದಂತೆ, ಮೈಸೂರಿಗೆ ಅನ್ವಯವಾಗಿದ್ದ ಡಿಫೆನ್ಸ್ ಆಫ್ ಇಂಡಿಯಾ ಆರ್ಡಿನೆನ್ಸ್ ಪ್ರಕಾರ ಮಾಡಲ್ಪಟ್ಟ ನಿಬಂಧನೆಗಳು ಮುಂದೆ ಮೈಸೂರಿಗೆ ಅನ್ವಯವಾದ ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಪ್ರಕಾರದ ನಿಯಮ ನಿಬಂಧನೆಗಳು ಆದುದರಿಂದ ಮೈಸೂರು ಸರಕಾರಕ್ಕೆ ನಿಬಂಧನೆ ಮಾಡುವ ಅಧಿಕಾರ ಕೊಡುವ ಆಕ್ಟಿನ ಸೆಕ್ಷನ್ನು ಬ್ರಿಟಿಷ್ ಇಂಡಿಯಾದಲ್ಲಿ ಮುಂದೆ ಜಾರಿಗೆ ತರಲ್ಪಡುವ ತಿದ್ದುಪಡಿ. ಇವುಗಳು ಮೈಸೂರಿಗೆ ಜಾರಿಗೆ ಬರುವುದೆಂಬು ದೊದಲೇ ಪ್ರಸಿದ್ಧಪಡಿಸಿದೇ ಎಂಬುದು ಪ್ರಶ್ನೆ. ಆದರೆ ಆಕ್ಟಿನ ಸೆಕ್ಷನ್ ೨ ಮೈಸೂರು ಸರ್ಕಾರಕ್ಕೆ ಅಂತಹ ಅವಕಾಶವನ್ನು ಕೊಡುವುದಿಲ್ಲವೆಂಬುದು ನನಗೆ ತೋರುತ್ತದೆ. ಒಂದನೇ ಕಾರಣವೆಂದರೆ ೨ನೇ ಸೆಕ್ಷನ್ನು, ದೊರೆಯವರು ಸರ್ಕಾರಕ್ಕೆ ಬೇಕಾದ್ದನ್ನು ನಿಬಂಧನೆ ಮಾಡಬಹುದೆಂದು ತಿಳಿಸುವ ಅಧಿಕಾರ ಕೊಡುವುದಿಲ್ಲ. ಎರಡನೇ ಕಾರಣವೆಂದರೆ, ಜನರಲ್ ಕ್ಲಾಸಸ್ ಆಕ್ಟಿನ ೨೦ನೇ ಸೆಕ್ಷನ್ ಪ್ರಕಾರ ನಿಬಂಧನೆಗಳನ್ನು ಮಾಡಲು ದೊರೆಗೆ ಅಧಿಕಾರವಿದೆಯೋ ಅವರೇ ಮಾಡಬೇಕು. ನನಗೆ ತಿಳಿದಿರುವ ಮಟ್ಟಿಗೆ ಜನರಲ್ ಕ್ಲಾಸಸ್ ಆಕ್ಟಿನಲ್ಲಾಗಲೀ ಅಥವಾ ಇನ್ನಾವ ಆಕ್ಟಿನಲ್ಲಾಗಲೀ ನಿಬಂಧನೆಗಳನ್ನು ಮಾಡುವ ಅಧಿಕಾರವುಳ್ಳವರಿಗಾಗಿ ಬೇರೊಬ್ಬರು ನಿಬಂಧನೆಗಳನ್ನು ಮಾಡಲು ಅವಕಾಶವಿಲ್ಲ. ಆದುದರಿಂದ ೧೩೦ ಎ ನಿಬಂಧನೆಯನ್ನು ಪ್ರಸಿದ್ಧಿಸಿದ ನೋಟಿಫಿಕೇಷನ್ನಿನಿಂದ ಆ ರೂಲನ್ನು ಮೈಸೂರಿನಲ್ಲಿ ಜಾರಿಗೆ ತಂದಂತಾಗಲಿಲ್ಲ. ಈ ಅರ್ಥದ ದೃಷ್ಟಿಯಿಂದ, ಅರ್ಜಿದಾರರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಅವಕಾಶವಿಲ್ಲ. ಈ ದೃಷ್ಟಿಯಿಂದ ೧೩೦ ಎ ನಿಬಂಧನೆಯ ಅರ್ಥ ಕಲ್ಪನೆ ಚರ್ಚಿಸಬೇಕಾದದ್ದೂ ಅನಾವಶ್ಯಕ ಎಂದು ಶ್ರೀ ... ಹೇಳಿದಂತೆ ಇದಕ್ಕೆ ಅರ್ಥ ವಿವರಣೆ ಸಾಧ್ಯ. ಈ ಅರ್ಜಿಗಳು ಕೆಳಗಿನ ಕೋರ್ಟಿನ ತೀರ್ಮಾನದ ಮೇಲಿನ ರಿವಿಷನ್ ಅರ್ಜಿ ಅಥವ ಅಪೀಲು ಅಲ್ಲವಾದ್ದರಿಂದ ಕೆಳಗಿನ ಕೋರ್ಟುಗಳ ಅಭಿಪ್ರಾಯವನ್ನು ಪ್ರಸ್ತಾಪಿಸುವುದು ಅನಾವಶ್ಯಕ. ಈ ಅರ್ಜಿಗಳು ಕ್ರಿ. ಪ್ರೊ ಕೋ ೪೯೧ ರ ಪ್ರಕಾರ ಮಾಡಲ್ಪಟ್ಟಿರುವುವು.

ಜಾಮೀನಿನ ಮೇಲೆ ಬಿಡುಗಡೆ

ಮೊದಲೇ ಹೇಳಿದಂತೆ, ಅರ್ಜಿದಾರರು ಡಿಫೆನ್ಸ್ ಆಫ್ ಇಂಡಿಯಾ ರೂಲ್ ೪೧ (೧) (ಬಿ) ಪ್ರಕಾರ ಅಪಾದಿತರಾಗಿರುವರು. ಶ್ರೀ ರಾಜರವರು ಅಪರಾಧವು ಟೆಕ್ನಿಕಲ್ ಎಂದೂ ಅದಕ್ಕೆ ಬಹಳ ಗೌರವಯುತರೆಂದೂ ಹೇಳಿದರು. ಈ ಅಂಶದ ದೃಷ್ಟಿಯಲ್ಲಿ ಅರ್ಜಿದಾರರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆ ಅಪಾದನೆಯು ಡಿಫೆನ್ಸ್ ಆಫ್ ಇಂಡಿಯಾ ರೂಲ್ ಪ್ರಕಾರ ಆಗಿರುವುದರಿಂದ ಈ ಬಿಡುಗಡೆಯು ಒಂದು ಷರತ್ತಿನ ಮೇಲೆ ಆಗಬೇಕು. ಅದರಿಂದ ಪ್ರತಿ ಅರ್ಜಿದಾರರೂ ತಲಾ ೫೦೦ ರೂಪಾಯಿಗಳ ಸ್ವಂತ ಜಾಮೀನನ್ನೂ ಮತ್ತು ಅದೇ ಮೊತ್ತಕ್ಕೆ ಎರಡು ಸಾಲ್ವೆಂಟ್ ಶ್ಯೂರಿಟಿಗಳನ್ನೂ ಕೋರ್ಟಿಗೆ ಒಪ್ಪಿಗೆ ಬರುವಂತೆ ಕೊಡಬೇಕು ಮತ್ತು ವಿಚಾರಣೆಯು ಮುಗಿಯುವವರೆಗೆ ಅವರು ಪತ್ರಿಕೆಗಳ ಮುದ್ರಣ ಮತ್ತು ಪ್ರಕಟಣೆಯಲ್ಲಿ ಯಾವ ಭಾಗವಹಿಸುವುದಿಲ್ಲವೆಂದೂ ಬರೆದುಕೊಡಬೇಕು.

ಶ್ರೀ ಎಲ್ ಎಸ್ ರಾಜುರವರು ಶ್ರೀಯುತ ರಾಜ ಎಂ ಪಿ ಸೋಮಶೇಖರನ್, ಜೆ ಆರ್ ಡಿಮೆಲ್ಲೊ ಮತ್ತು ಪರಶುರಾಮಯ್ಯನವರ ಜೊತೆಯಲ್ಲಿ ಅರ್ಜಿದಾರರ ಪರ ವಾದಿಸಿದರು. ಅಡ್ವೋಕೇಟ್ ಜನರಲ್ಲರು (ಶ್ರೀ ಪಿ. ಟಿ ಎಸ್ ಅಯ್ಯಂಗಾರರವರು) ಸರ್ಕಾರದ ಪರ ವಾದಿಸಿದರು.

ಬಿಡುಗಡೆಯಾಯಿತು

ರಾತ್ರಿ ಸುಮಾರು ೧೦ ಗಂಟೆ ಸಮಯಕ್ಕೆ ೩ನೇ ಮ್ಯಾಜಿಸ್ಟ್ರೇಟ್ ಮನೆಯಲ್ಲಿ ಜಾಮೀನು ಕೊಡಲಾಯಿತು. ಸೆಂಟ್ರಲ್ ಜೈಲಿನಿಂದ ಅರ್ಜಿದಾರರು ಬಾಂಡನ್ನು ಬರೆದುಕೊಟ್ಟು ರಾತ್ರಿ ೧೦-೪೫ ಗಂಟೆ ಸಮಯದಲ್ಲಿ ಹೊರಕ್ಕೆ ಬಂದರು

ಬೆಂಗಳೂರು ಸಂಪಾದಕರುಗಳ ಮೇಲಿನ ಮೊಕದ್ದಮೆ

ಅಕ್ಟೋಬರ್ ಮೊದಅನೇ ವಾರಕ್ಕೆ ಮುಂದುಹಾಕಲ್ಪಟ್ಟಿದೆ

(ಕಾ ೮ ಬಾ) ಬೆಂಗಳೂರು ಸೆ ೨೨

ಬೆಂಗಳೂರು ಪತ್ರಿಕಾ ಸಂಪಾದಕರುಗಳ ಮೇಲಿನ ಮೊಕದ್ದಮೆಯು ಈ ದಿನ ೩ನೇ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆಗೆ ಬಂದಾಗ ಪ್ರಾಸಿಕ್ಯೂಷನ್ ಇನ್ನೂ ಕೆಲವು ಸಾಕ್ಷಿಗಳು ಬಂದಿಲ್ಲವಾಗಿ ಮೊಕದ್ದಮೆಯನ್ನು ಮುಂದು ಹಾಕಲಾಯಿತು.

ಆರು ಪತ್ರಿಕೆಯವರಾಗಿರುವ ಶ್ರೀ ಮೊಕದ್ದಮೆಗಳನ್ನು ಪ್ರತ್ಯೇಕವಾಗಿಯೋ ಜೊತೆಯಲ್ಲಿಯೋ ನಡೆಸಬೇಕೆಂಬುದು ಪಬ್ಲಿಕ್ ಪ್ರಾಸಿಕ್ಯೂಟರರು ಸೂಚಿಸಿದ್ದನ್ನು ಒಪ್ಪಿ ಅನಂತರ ಅಕ್ಟೋಬರ್ ೧, ೫, ೬ ಮತ್ತು ೭ನೇ ತಾರೀಖುಗಳಿಗೆ ಒಂದೊಂದು ದಿನ ಮೊಕದ್ದಮೆಯನ್ನು ಒಂದೊಂದು ದಿನಕ್ಕೆ ಹಾಕಲಾಗಿದೆ.

ಪ್ರಾಸಿಕ್ಯೂಷನ್ ಪರ ೯ ಸಾಕ್ಷಿಗಳಲ್ಲೊಬ್ಬ ರಿಂದ ಸಾಕ್ಷಿ ಪಡೆ ಬಳಿಯನ್ನು ಈ ದಿನ ತೆಗೆದುಕೊಳ್ಳಲು ಮುಂದಾದಾಗ ಒಪ್ಪ ದೇ ಆಕ್ಷೇಪಣೆ ಮಾಡಲ್ಪಟ್ಟಿತು

ಸಂಪಾದಕರ ಮೇಲಿನ ಮೊಕದ್ದಮೆ

ಬೇಗ ವಿಚಾರಣೆಗೆ ಶ್ರೀ ರಾಜುರವರ ಪ್ರಾರ್ಥನೆ

ಅಕ್ಟೋಬರ್ ೧ ರಿಂದ ವಿಚಾರಣೆ ಪ್ರಾರಂಭ

ಬೆಂಗಳೂರು ಸೆ. ೨೨

"ಡೈಲಿ ನ್ಯೂಸ್" ಸಂಪಾದಕರಾದ ಶ್ರೀ ಪಿ. ಆರ್. ರಾಮಯ್ಯ, "ತಾಯಿನಾಡು" ಸಂಪಾದಕರಾದ ಶ್ರೀ ಪಿ. ಬಿ. ಶ್ರೀನಿವಾಸ್, "ಜನವಾಣಿ" ಸಂಪಾದಕರಾದ ಶ್ರೀ ಬಿ. ಎನ್. ಗುಪ್ತ, "ವಿಶ್ವಕರ್ನಾಟಕ" ಪ್ರಧಾನ ಸಂಪಾದಕರಾದ ಶ್ರೀ ಟಿ. ಟಿ. ಶರ್ಮ ಮತ್ತು ಸಂಪಾದಕರಾದ ಶ್ರೀ ಕೃಷ್ಣಶರ್ಮ ಇವರ ಮೇಲೆ ಡಿಫೆನ್ಸ್ ಆಫ್ ಇಂಡಿಯಾ ರೂಲುಗಳ ಪ್ರಕಾರ ಸರ್ಕಾರವು ಹೂಡಿರುವ ಮೊಕದ್ದಮೆಯ ವಿಚಾರಣೆಯು ಇಲ್ಲಿನ ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ನಡೆಯಬೇಕಾಗಿದ್ದುದು ನಡೆಯದೆ ಅಕ್ಟೋಬರ್ ಮೊದಲನೆಯ ತಾರೀಖಿಗೆ ಮುಂದುವರಿಯಿತು. ಹೈಕೋರ್ಟಿನಿಂದ ಮೊಕದ್ದಮೆಗೆ ಸಂಬಂಧಿಸಿದ ರಿಕಾರ್ಡುಗಳು ಇನ್ನೂ ಬಂದಿಲ್ಲದಿದ್ದುದೇ ಇದಕ್ಕೆ ಕಾರಣ.

ಕೋರ್ಟ್ ಹಾಲು ಪತ್ರಿಕೋದ್ಯೋಗಿಗಳಿಂದಲೂ, ಆಪ್ತರುಗಳಿಂದಲೂ, ಇತರರಿಂದಲೂ ತುಂಬಿತ್ತು.

ಪಬ್ಲಿಕ್ ಪ್ರಾಸಿಕ್ಯೂಟರು (ಶ್ರೀ ಜಿ. ಎಸ್. [illegible]ಸ್ವಾಮಯ್ಯರ್) ಆಪಾದಿತರುಗಳು ಐದು ಮಂದಿ ಮೇಲೆ ಚಾರ್ಜುಗಳಿರುವುದರಿಂದ [illegible] ಎಷ್ಟು ಬೇಗನೆ ವಿಚಾರಣೆಯು ನಡೆಯಬೇಕೆನ್ನುತ್ತಾರೋ ಅಷ್ಟು ಬೇಗನೆ ಅದು ನಡೆಯುವುದಕ್ಕಾಗಿಲ್ಲವೆಂದು ಹೇಳಿದರು. ಅಲ್ಲದೆ ಪ್ರತ್ಯೇಕವಾದ ನಾಲ್ಕು ಮೊಕದ್ದಮೆಗಳು ಇರುವುದರಿಂದ ಪ್ರತ್ಯೇಕವಾಗಿಯೇ ಸಾಕ್ಷ್ಯಗಳನ್ನು ತೆಗೆದುಕೊಳ್ಳಬೇಕೆಂದೂ ಹೇಳಿದರು.

ವಿಚಾರಣೆ ಬೇಗನೆ ಆಗಬೇಕು

ಆಪಾದಿತರ ಪರ ಅಡ್ವೋಕೇಟರಾದ ಶ್ರೀ ಎಲ್. ಎಸ್. ರಾಜುರವರು ಮೊಕದ್ದಮೆಗಳು ಪ್ರತ್ಯೇಕವಾಗಿರುವುದರಿಂದ ಪ್ರತ್ಯೇಕವಾಗಿಯೇ ಸಾಕ್ಷ್ಯಗಳನ್ನು ತೆಗೆದುಕೊಳ್ಳಬೇಕೆಂಬ ಪಬ್ಲಿಕ್ ಪ್ರಾಸಿಕ್ಯೂಟರ ಸೂಚನೆಯನ್ನು ಒಪ್ಪಿದರು. ಆದರೆ "ಈ ಮೊಕದ್ದಮೆಗಳನ್ನು ಬೇಗನೆ ತೀರ್ಮಾನಿಸಬಾರದು, ಅವಸರಪಡಬೇಕಾಗಿಲ್ಲವೆಂದು ಅವರು ಹೇಳಿದ್ದನ್ನು ನಾನು ಒಪ್ಪುವುದಿಲ್ಲ. ಪತ್ರಿಕೆಗಳ ಮೇಲೆ ಪ್ರಾಸಿಕ್ಯೂಷನ್ನಿನ [illegible] ಬಿಟ್ಟು ಬಿಡಬೇಕಾಗಿಲ್ಲ. ಹೈಕೋರ್ಟಿನಲ್ಲಿ ನಾವು ಸೆಪ್ಟೆಂಬರ್ ೧೭ರಲ್ಲಿ ವಾದವನ್ನು ಮುಗಿಸಿದಾಗ ಅಡ್ವೋಕೇಟ್-ಜನರಲ್ಲರು ಮುಂದಕ್ಕೆ ಹಾಕಬೇಕೆಂದು ಕೇಳಿದಾಗ, ಅರ್ಜಿಗಳನ್ನು ಅವಲೇ ತೀರ್ಮಾನಿಸಲು ಇಷ್ಟವಿತ್ತೆಂದೂ ಮತ್ತು ಮೊಕದ್ದಮೆಯ ವಿಚಾರಣೆಯನ್ನು ನಿಧಾನಿಸಲು ಇಷ್ಟವಿಲ್ಲವೆಂದೂ ಅವರು ಹೇಳಿದರು. ವಿಚಾರಣೆಯನ್ನು ನಿಧಾನಿಸಬಾರದೆನ್ನುವುದಕ್ಕೆ ಒಂದು ಮುಖ್ಯ ಕಾರಣವಿದೆ. ವಿಚಾರಣೆಯು ಮುಗಿಯುವವರೆಗೆ ಆಪಾದಿತರುಗಳು ತಮ್ಮ ತಮ್ಮ ಪತ್ರಿಕೆಗಳ ಮುದ್ರಣ ಮತ್ತು ಪ್ರಕಟಣೆಯಲ್ಲಿ ಯಾವ ಕಾರ್ಯವನ್ನೂ ನಡೆಸುವಂತಿಲ್ಲ. ಈ ಪತ್ರಿಕೆಗಳನ್ನು ನಿಲ್ಲಿಸುವುದು ಎಷ್ಟು ಕಾಲ ಅನ್ಯಾಯವೋ ಅಷ್ಟು ಕಾಲ ನಷ್ಟ ಆಗುತ್ತದೆ." ಎಂದು ಹೇಳಿದರು.

ಈ ಮೊಕದ್ದಮೆಗಳ ವಿಚಾರಣೆಯೆಲ್ಲವೂ ಅವರು ೧೫ ದಿವಸದಲ್ಲಿ ಮುಗಿಯಬಹುದೆಂದು ಪಬ್ಲಿಕ್ ಪ್ರಾಸಿಕ್ಯೂಟರು ಹೇಳಿದರು.

ಮ್ಯಾ||ರು ತಮಗೆ ಹೈಕೋರ್ಟಿನಿಂದ [illegible] ಆಜ್ಞೆಯು ಮಾತ್ರ ಬಂದಿದೆಯೆಂದೂ, ಅವರ ರಿಕಾರ್ಡುಗಳು ಇನ್ನೂ ಬಂದಿಲ್ಲವೆಂದೂ ಹೇಳಿದರು. ಈ ತಿಂಗಳ ಕೊನೆಯವರೆಗೂ ರಜೆಯಲ್ಲಿ ಹೋಗುವುದರಿಂದ ಪ್ರತ್ಯೇಕ ಮೊಕದ್ದಮೆಗಳ ವಿಚಾರಣೆಯನ್ನು ಮುಂದಿನ ತಿಂಗಳಲ್ಲಿ ತೆಗೆದುಕೊಳ್ಳಬಹುದೆಂದೂ ಸೂಚಿಸಿದರು. ಒಂದೊಂದು ದಿನ ಒಂದೊಂದು ಮೊಕದ್ದಮೆಯನ್ನು ತೆಗೆದುಕೊಳ್ಳಬಹುದೆಂದೂ ಹೇಳಿದರು. ಅಲ್ಲದೆ ದಿನವೆಲ್ಲವೂ ಒಂದೇ ಮೊಕದ್ದಮೆಯ ವಿಚಾರಣೆ ಸಾಧ್ಯವಿಲ್ಲವೆಂದೂ, ಮುಖ್ಯವಾದ ಕೆಲವು ಮೊಕದ್ದಮೆಗಳ ನಂತರ ಈ ಮೊಕದ್ದಮೆಗಳನ್ನು ವಿಚಾರಣೆ ಮಾಡಬೇಕಾಗಿದೆಯೆಂದೂ ಹೇಳಿದರು.

ಈ ಮೊಕದ್ದಮೆಗಳನ್ನು ಮಧ್ಯಾಹ್ನ ಭೋಜನಾನಂತರ ವಿಚಾರಣೆಗೆ ತೆಗೆದುಕೊಳ್ಳಬಹುದೆಂದರು. ಈ ಸಲಹೆಯನ್ನು ಎರಡು ಕಡೆಯ ವಕೀಲರುಗಳೂ ಒಪ್ಪಿದರು. ಅಕ್ಟೋಬರ್ ೨ರಲ್ಲಿ ತಮಗೆ ಬಿಡುವಿಲ್ಲವೆಂದು ಶ್ರೀ ರಾಜುರವರು ಹೇಳಿದರು. ಅಕ್ಟೋಬರ್ ೩ರಲ್ಲಿ ತಮಗೆ ಬಿಡುವಿಲ್ಲವೆಂದು ಮ್ಯಾಜಿಸ್ಟ್ರೇಟರು ಹೇಳಿದರು.

ಅದೇ ರೀತಿ ಶ್ರೀ ಪಿ. ಆರ್. ರಾಮಯ್ಯನವರ ಮೇಲಿನ ಮೊಕದ್ದಮೆಯನ್ನು ಅಕ್ಟೋಬರ್ ೧ಕ್ಕೂ, ಶ್ರೀ ಬಿ. ಎನ್. ಗುಪ್ತರವರ ಮೇಲಿನ ಮೊಕದ್ದಮೆಯನ್ನು ಅಕ್ಟೋಬರ್ ೪ಕ್ಕೂ, ಶ್ರೀ ಪಿ. ಬಿ. ಶ್ರೀನಿವಾಸರವರ ಮೇಲಿನ ಮೊಕದ್ದಮೆಯನ್ನು ಅಕ್ಟೋಬರ್ ೬ಕ್ಕೂ ಮತ್ತು ಶ್ರೀ ಟಿ. ಟಿ. ಶರ್ಮ ಮತ್ತು ಶ್ರೀ ಎಸ್. ಕೆ. ಶರ್ಮರವರ ಮೇಲಿನ ಮೊಕದ್ದಮೆಯನ್ನು ಅಕ್ಟೋಬರ್ ೮ಕ್ಕೂ ಮುಂದುವರಿಸಲಾಯಿತು.

ಹೊಸ ಪ್ರಾಸಿಕ್ಯೂಷನ್ ಸಾಕ್ಷಿಗಳು

ಪ್ರಾಸಿಕ್ಯೂಷನ್ನಿನ ಪರವಾಗಿ ಸಾಕ್ಷಿಗಳ ಪಟ್ಟಿಯನ್ನು ಕೋರ್ಟಿಗೆ ದಾಖಲು ಮಾಡಿದ್ದಾಗಿ ತಮಗೆ ತಿಳಿದು ಬಂದಿದೆಯೆಂದೂ, ಆ ಪಟ್ಟಿಯನ್ನು ತಮಗೆ ಕೊಡಬೇಕೆಂದೂ ಶ್ರೀ ರಾಜುರವರು ಕೋರ್ಟಿಗೆ ವಿಜ್ಞಾಪಿಸಿದರು.

ಪಬ್ಲಿಕ್ ಪ್ರಾಸಿಕ್ಯೂಟರು ತಾವು ಸೆಪ್ಟೆಂಬರ್ ೧೯ರ ರೀತಿಯ ಪಟ್ಟಿಯೊಂದನ್ನು ಕೋರ್ಟಿಗೆ ಕೊಟ್ಟಿರುವುದಾಗಿ ಒಪ್ಪಿಕೊಂಡು ಒಂದು ನಕಲನ್ನು ಶ್ರೀ ರಾಜುರವರಿಗೆ ಕೊಟ್ಟರು. ಆ ಪಟ್ಟಿಯ ಪ್ರಕಾರ ಪ್ರಾಸಿಕ್ಯೂಷನ್ ಸಾಕ್ಷಿಗಳು—ಪೋಲೀಸ್ ಇನ್ಸ್‌ಪೆಕ್ಟರ್ ಎಂ. [illegible], ಪೋಲೀಸ್ ಇನ್ಸ್‌ಪೆಕ್ಟರ್ ಎಂ. ಅನಂತಸ್ವಾಮಿ ಅಯ್ಯರ್, ಶೀಘ್ರಲಿಪಿಕಾರ ಬಿ. ಪುಟ್ಟಸ್ವಾಮಿ, ಬಿ. ಆರ್. ಗುಂಡೂರಾವ್, ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಜೆ. ಎಂ. [illegible], ಸಿಟಿ ಮ್ಯಾ|| ಕೋರ್ಟಿನ [illegible], [illegible] ಸಿಟಿ ಪೋಲೀಸ್ [illegible] ಒಬ್ಬ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್ ಸಿ. ಬಿ. ರಾಮಣ್ಣನವರು ಮತ್ತು ಪೋಲೀಸ್ ಇನ್ಸ್‌ಪೆಕ್ಟರ್ ಎನ್. ಬಿ. ಸುಬ್ಬಣ್ಣ. ಹೊಸಬರೇ ಸಾಕ್ಷಿ ಪಟ್ಟಿಯ ಪ್ರಕಾರ ಇದ್ದರು ಅಥವಾ ಮೊದಲ ವಿಚಾರಣೆ [illegible]

ಡಿಫೆನ್ಸ್ ಸಾಕ್ಷಿಗಳು ಉಂಟೇ?

ಅನಂತರ, ಕೋರ್ಟು ಪ್ರತಿ ಮೊಕದ್ದಮೆಯ ಪ್ರಾಸಿಕ್ಯೂಷನ್ನು ಮುಗಿಸಲು ಎರಡು ದಿವಸಗಳೂ, ಆಪಾದಿತರ ಪರ ಒಂದು ದಿವಸವೂ ವಿಚಾರಣೆಗೆ ಬೇಕಾಗಬಹುದೆಂದು ಭಾವಿಸಿದರು.

ಶ್ರೀ ರಾಮು:- ಡಿಫೆನ್ಸ್ ಕೊಡಬೇಕಾದ ಪ್ರಮೇಯವನ್ನು ನಾವು ಇದುವರೆಗೆ ಕಲ್ಪಿಸಿಕೊಂಡಿಲ್ಲ. ಏಕೆಂದರೆ ಮೊದಲು ಪ್ರಾಸಿಕ್ಯೂಷನ್ನು ಆಪಾದನೆಯನ್ನು ಸ್ಥಾಪಿಸಬೇಕು ಮತ್ತು ನಾವು ಸೂಚಿಸಬಹುದಾದ ಪೂರ್ವಭಾವಿ ಆಕ್ಷೇಪಣೆಗಳಿಗೆ ಸಮಾಧಾನ ಕೊಡಬೇಕು. ಪ್ರಾಸಿಕ್ಯೂಷನ್‌ನವರು ಒಬ್ಬೊಬ್ಬ ಸಾಕ್ಷಿಗಳನ್ನು ವಿಚಾರಣೆಗೆ ತರುತ್ತಿದ್ದರೆ ನಾವು ನಮ್ಮ ಆಕ್ಷೇಪಣೆಗಳನ್ನು ಸೂಚಿಸಲು ಅವಕಾಶವಿರುತ್ತದೆ. ಆ ಆಕ್ಷೇಪಣೆಗಳಿಗೆ ಸಾಕ್ಷ್ಯ ಸಮಯದಲ್ಲಿ ಉತ್ತರ ದೊರಕಬೇಕು.

ಮ್ಯಾಜಿಸ್ಟ್ರೇಟರು:- ಹಾಗಾಗಿ ಬರೆಯುವುದು ಒಂದರ ಕಡೆ ಸಂಕೋಚವೇ.

ಮೊಕದ್ದಮೆಯನ್ನು ಮೇಲೆಯೇ ತಿಳಿಸಿದಂತೆ ಮುಂದುವರಿಸಲಾಯಿತು.

ಆಪಾದಿತರ ಪರ ಶ್ರೀ ಎಲ್. ಎಸ್. ರಾಜುರವರು ಶ್ರೀ ಜಿ. ಆರ್. ಎತಿರಾಜುಲು ನಾಯುಡುರವರ ಸಹಾಯದೊಡನೆ ವಾದಿಸಿದರು. ಸರ್ಕಾರದ ಪರ ಪಬ್ಲಿಕ್ ಪ್ರಾಸಿಕ್ಯೂಟರು [ಶ್ರೀ ಜಿ ಎಸ್ ದೊರೆಸ್ವಾಮಯ್ಯಂಗಾರ್] ಇದ್ದರು.

ಶ್ರೀ ಪಿ ಆರ್ ರಾಮಯ್ಯನವರ ಮೇಲಿನ ಮೊಕದ್ದಮೆ

ಪೋಲೀಸ್ ಇನ್ಸ್‌ಪೆಕ್ಟರ ಸಾಕ್ಷ್ಯ

[ತಾ ೩ ಬಾ] ಬೆಂಗಳೂರು ೮ ೨

ಮೈಸೂರು ಸರ್ಕಾರದವರು ೧೯೪೨ನೇ ಆಗಸ್ಟ್ ೧೦ರಲ್ಲಿ ಡಿಫೆನ್ಸ್ ಆಫ್ ಇಂಡಿಯಾ ರೂಲ್ ೪೧ (೧) (ಬಿ) ಪ್ರಕಾರ ಹೊರಡಿಸಿದ್ದ ನೋಟಿಫಿಕೇಷನ್ನನ್ನು ಉಲ್ಲಂಘಿಸಿದರೆಂದು ತಾಯಿನಾಡು ಮತ್ತು ಡೈಲಿ ನ್ಯೂಸ್ ಸಂಪಾದಕರಾದ ಶ್ರೀ ಪಿ ಆರ್ ರಾಮಯ್ಯನವರ ಮೇಲೆ ಸರ್ಕಾರದವರು ಹೂಡಿರುವ ಮೊಕದ್ದಮೆಯು ವಿಚಾರಣೆಯು ಸೆಕೆಂಡ್ ಮ್ಯಾಜಿಸ್ಟ್ರೇಟ್ ಸಿಟಿ ಮ್ಯಾಜಿಸ್ಟ್ರೇಟ್ [ಶ್ರೀ ಸಿ ರಾಮಚಂದ್ರರಾವ್] ಮುಂದೆ ಆರಂಭವಾಯಿತು. ಸಿ ಐ ಡಿ ವಿಭಾಗಕ್ಕೆ ಸೇರಿದ ಇನ್ಸ್‌ಪೆಕ್ಟರ್ ಬಿ ಪುಟ್ಟಸ್ವಾಮಯ್ಯನವರು ಪ್ರಾಸಿಕ್ಯೂಷನ್ ಪರ ಮೊದಲನೇ ಸಾಕ್ಷಿಯಾಗಿ ಸಾಕ್ಷ್ಯವಿತ್ತರು.

ಕೋರ್ಟ್ ಹಾಲು ಪತ್ರಿಕೋದ್ಯೋಗಿಗಳಿಂದಲೂ ಸಾರ್ವಜನಿಕರಿಂದಲೂ ತುಂಬಿತ್ತು.

ಶ್ರೀ ಪಿ ಆರ್ ರಾಮಯ್ಯನವರಿಗೆ ಕುಳಿತುಕೊಳ್ಳಲು ಕುರ್ಚಿ ಕೊಡಲಾಗಿತ್ತು.

ಪ್ರಾಸಿಕ್ಯೂಷನ್ ಪರ ಮೊದಲನೆ ಸಾಕ್ಷಿ ವಿಚಾರಣೆ

ಪಬ್ಲಿಕ್ ಪ್ರಾಸಿಕ್ಯೂಟರಾದ ಶ್ರೀ ಜಿ ಎಸ್ ದೊರೆಸ್ವಾಮಿ ಅಯ್ಯಂಗಾರರು ಕೇಳಿದ ಪ್ರಶ್ನೆಗಳಿಗೆ ಉತ್ತರವಾಗಿ, ಸಾಕ್ಷಿಯಾದ ಶ್ರೀ ಬಿ ಪುಟ್ಟಸ್ವಾಮಯ್ಯನವರು ತಾವು ೧೯೪೨ನೇ ಮೇ ತಿಂಗಳಿನಿಂದ ಬೆಂಗಳೂರು ಸಿಟಿಯಲ್ಲಿ ಇನ್ಸ್‌ಪೆಕ್ಟರಾಗಿ ಕೆಲಸ ಮಾಡುತ್ತಿರುವುದಾಗಿಯೂ, ಶ್ರೀ ಪಿ ಆರ್ ರಾಮಯ್ಯನವರ ಮೇಲೆ ತಮ್ಮ ಸಬ್ ಇನ್ಸ್‌ಪೆಕ್ಟರುಗಳ ಪೈಕಿ ಒಬ್ಬರಾದ ಮಿಸ್ಟರ್ ಆ... ಯವರು ಚಾರ್ಜ್‌ಶೀಟನ್ನು ಹಾಕಿದ್ದರೆಂದೂ ಹೇಳಿದರು. ಚಾರ್ಜ್‌ಶೀಟು ಡೈಲಿ ನ್ಯೂಸ್ ಪತ್ರಿಕೆಯಲ್ಲಿ ಸೆಪ್ಟೆಂಬರ್ ೫ ಮತ್ತು ೮ ರ ... ಪ್ರಕಟವಾದ ಕೆಲವು ವಾರ್ತೆಗಳ ಸಂಬಂಧವಾಗಿ "ಅತ್ತಿಕೆರೆಯಲ್ಲಿ ವಿದ್ಯಾರ್ಥಿಗಳ ಉಪವಾಸ ಸತ್ಯಾಗ್ರಹ" ಮತ್ತು "ಇತರೆಡೆ ಪ್ರದರ್ಶನಗಳು-ವಿದ್ಯಾರ್ಥಿಗಳು ಮತ್ತು ಕೆಲಸಗಾರರು ಪ್ರದರ್ಶಿಸಿದ್ದಾರೆ" ಎಂಬ ಶೀರ್ಷಿಕೆಯನ್ನುಳ್ಳ ಪ್ರಕಟವಾಗಿರುವ ವರದಿಗಳೇ. ಆ ವರದಿಗಳು ಯಾರಿಂದ ಬಂದುವೆಂಬುದು ಆ ಪತ್ರಿಕೆಯಲ್ಲಿ ತಿಳಿಸಿಲ್ಲ.

ಸರ್ಕಾರದವರು ೧೯೪೨ನೇ ಆಗಸ್ಟ್ ೧೦ರಲ್ಲಿ ಹೊರಡಿಸಿದ ನೋಟಿಫಿಕೇಷನ್ನಿನ ಪ್ರಕಾರ, ಎ ಐ ಸಿ ಸಿ ಮತ್ತು ಕಾಂಗ್ರೆಸ್ಸಿನ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಸುದ್ದಿಗಳನ್ನು ಪತ್ರಿಕೆಯು ರಿಜಿಸ್ಟರಾದ ವಾರ್ತಾದಾರರಿಂದ ಪಡೆಯಬೇಕೆಂದೂ, ಮತ್ತು ಪತ್ರಿಕೆಯಲ್ಲಿ ಸುದ್ದಿಯು ಯಾರಿಂದ ಬಂದಿತೆಂಬುದನ್ನು ನಮೂದಿಸಬೇಕೆಂದೂ ಪಬ್ಲಿಕ್ ಪ್ರಾಸಿಕ್ಯೂಟರು ಹೇಳಿದರು.

ಮುಂದುವರಿಯುತ್ತಾ, ಸಾಕ್ಷಿಯು ತಾವು ಬೆಂಗಳೂರಿನಲ್ಲಿ ಆಗಸ್ಟ್ ೯ ರಿಂದ ಕೆಲಸದಲ್ಲಿದ್ದರೆಂದರು. ಆ ದಿವಸದಿಂದ ಬೆಂಗಳೂರಿನಲ್ಲಿ ಅನೇಕ ಪ್ರದರ್ಶನಗಳು ನಡೆದುವು ಅವರಲ್ಲಿ ಕೆಲವು ಸಾಕ್ಷಿಗೆ ಗೊತ್ತು. ಸೆಪ್ಟೆಂಬರ್ ೭ರಲ್ಲಿ ಹಿಮಾಲಯ ಟಾಕೀಸ್ ಮುಂಭಾಗದಲ್ಲಿ ನಡೆದ ಸಭಾ ಪ್ರದರ್ಶನವು ಅವರು ಇದ್ದರು. ಆ ವಿಷಯವಾಗಿ ಡೈಲಿ ನ್ಯೂಸ್ ಪತ್ರಿಕೆಯು ಸೆಪ್ಟೆಂಬರ್ ೮ ರ ಸಂಚಿಕೆಯಲ್ಲಿ ವರದಿಯಿದೆ. ಸೆಪ್ಟೆಂಬರ್ ೭ ರಲ್ಲಿ ಬಿನ್ನಿ ಮತ್ತು [illegible] ಮಿಲ್ಲಿನ ಕೆಲಸಗಾರರು ಮೆರವಣಿಗೆ ಹೊರಟು ಹಿಮಾಲಯ ಟಾಕೀಸ್ ಮುಂಭಾಗಕ್ಕೆ ಬಂದು ಕುಳಿತುಕೊಂಡಿದ್ದರು. ಮುಂದಕ್ಕೆ ಹೋಗುವುದಿಲ್ಲವೆಂದು ಹೇಳಿ, ಸತ್ಯಾಗ್ರಹ ನಡೆಸಿದರು. ಈ ಮೆರವಣಿಗೆಗೆ ಶ್ರೀ ಚಂಗಲರಾಜ್ಯ ಮತ್ತು ಅವರ ಪತ್ನಿ ಶ್ರೀಮತಿ ಭಾಗೀರಥಮ್ಮ ಎಂಬುವರು ಮುಂದಾಳಾಗಿದ್ದರು. ಶ್ರೀಮತಿ ಭಾಗೀರಥಮ್ಮನವರ ಕೈಯಲ್ಲಿ ಒಂದು ತ್ರಿವರ್ಣ ಧ್ವಜವಿತ್ತು. ಆ ದಿನ ಸಾಯಂಕಾಲದ ವೇಳೆಯಲ್ಲಿ ಒಂದು ಮನುಷ್ಯಾಕಾರದ ಬೊಂಬೆಯನ್ನು ಸುಡಲಾಯಿತು. ಇದು ವಿ|| ಚರ್ಚಿಲರನ್ನು ಸೂಚಿಸುವ ಬೊಂಬೆಯೆಂದು ಪ್ರದರ್ಶಕರು ಹೇಳಿದರು. ಸಾಯಂಕಾಲದ ವೇಳೆಗೆ ಪ್ರದರ್ಶಕರು ಚದುರಿದರು.

ಪಬ್ಲಿಕ್ ಪ್ರಾಸಿಕ್ಯೂಟರ್-ಇನ್ನೇನಾದರೂ ಪ್ರದರ್ಶನಗಳು ನಡೆದುವೋ?

ಶ್ರೀ ಎಲ್ ಎಸ್ ರಾಜುರವರ ಆಕ್ಷೇಪಣೆ

ಆಪಾದಿತರ ಪರ ಅಡ್ವೊಕೇಟರಾದ ಶ್ರೀ ಎಲ್ ಎಸ್ ರಾಜುರವರು ಈ ಪ್ರಶ್ನೆಗೆ ಆಕ್ಷೇಪಣೆ ಮಾಡಿದರು. ಹಿಮಾಲಯ ಟಾಕೀಸ್ ಮುಂದೆ ನಡೆದ ಪ್ರದರ್ಶನವು ನೋಟಿಫಿಕೇಷನ್ನಿಗೆ ವಿರುದ್ಧವಾಗಿರುವ ಆಪಾದನೆಗೆ ಸೇರಿದ್ದೆಂದು ಪ್ರಾಸಿಕ್ಯೂಷನ್ನವರು ರುಜುವಾತು ಕೊಡಬಹುದು. ಆದರೆ ಎಲ್ಲಾ ಪ್ರದರ್ಶನಗಳ ವಿಷಯಗಳನ್ನು ಕುರಿತು ಸಾಕ್ಷ್ಯ ಕೊಡಬೇಕಾಗಿಲ್ಲ ಎಂದು ಅವರು ಹೇಳಿದರು.

ಪಬ್ಲಿಕ್ ಪ್ರಾಸಿಕ್ಯೂಟರು ಎಲ್ಲಾ ಪ್ರದರ್ಶನಗಳು ನಡೆದುವೆಂದೂ, ಹಿಮಾಲಯ ಟಾಕೀಸ್ ಮುಂದೆ ನಡೆದ ಪ್ರದರ್ಶನವು ಅಂಥದೊಂದೆಂದೂ ಹೇಳಿದರು. ಒಂದು ಆಂದೋಲನ ಚಳುವಳಿಯು ನಡೆಯುತ್ತಿದೆಯೆಂಬುದನ್ನು ಮತ್ತು ಹಿಮಾಲಯ ಟಾಕೀಸ್ ಮುಂದಿನ ಪ್ರದರ್ಶನವು ಆ ಚಳುವಳಿಯ ಒಂದು ಭಾಗವೆಂಬುದನ್ನು ಪ್ರಾಸಿಕ್ಯೂಷನ್ನು ಸ್ಥಾಪಿಸಬೇಕಾಗಿದೆಯೆಂದೂ ಅವರು ಹೇಳಿದರು.

ಕೋರ್ಟು ಪ್ರಶ್ನೆಗೆ ಅವಕಾಶ ಕೊಡಲು ಸಾಕ್ಷಿಯು ಉತ್ತರವಿತ್ತರು.

ಚಳುವಳಿ ಬಗ್ಗೆ ಪ್ರಶ್ನೋತ್ತರಗಳು

ಆಗಸ್ಟ್ ೧೦ ರಿಂದ ವಿದ್ಯಾರ್ಥಿಗಳ ಮುಷ್ಕರವು ನಡೆಯುತ್ತಿತ್ತೆಂದೂ, ಅದೇ ದಿವಸದಿಂದ ವಿದ್ಯಾರ್ಥಿಗಳು ಮೆರವಣಿಗೆ ನಡೆಸುತ್ತಿದ್ದರೆಂದೂ ಸಾಕ್ಷಿಯು ಹೇಳಿದರು. ಆಗಸ್ಟ್ ೧೪ ರಿಂದ ಕಾರ್ಖಾನೆಗಳ ಮತ್ತು ಮಿಲ್ಲುಗಳ ಕೆಲಸಗಾರರ ಮುಷ್ಕರ ನಡೆಯಿತು. ಆಗಾಗ್ಗೆ ಕೆಲವು ಮೆ-[illegible]ಗೆ ನಡೆಸಿದರು ಅವರು ಮತ್ತು ವಿದ್ಯಾ

ಧಿ ಎಂಬ "ಬ್ರಿಟಿಷರೇ, ಭಾರತಬಿಟ್ಟು ತೊಲಗಿ" ಎಂಬ ಮುಂತಾದ ಫಲಕಗಳನ್ನು ಪ್ರದರ್ಶಿಸುತ್ತ ಮೆರವಣಿಗೆಗಳನ್ನು ನಡೆಸುತ್ತಿದ್ದರು. ಆಗಸ್ಟ್ ೧೪ ರಲ್ಲಿ ವಿದ್ಯಾರ್ಥಿಗಳು ಬಸ್ಸಿನಲ್ಲಿ ಟಿಕೆಟ್ ತೆಗೆದುಕೊಳ್ಳದೆ ಸಂಚರಿಸಲು ಆರಂಭಿಸಿದರು. ಬಸ್ಸಿನಲ್ಲಿ ಕುಳಿತುಕೊಂಡು "ಬ್ರಿಟಿಷರೇ, ಭಾರತಬಿಟ್ಟು ತೊಲಗಿ" ಎಂಬ ಮುಂತಾದ ಘೋಷಣೆಗಳನ್ನು ಕೂಗುತ್ತಿದ್ದರು. ಬಸ್ಸು ಪ್ರತಿಭಟನೆಯನ್ನು ಹತ್ತಿಕ್ಕಲೋಸುಗ, ವಿದ್ಯಾರ್ಥಿಗಳು ಬಸ್ಸಿನ ಸಂಚಾರವನ್ನು ಕೆಡಿಸಲಿಲ್ಲ.

ಪಬ್ಲಿಕ್ ಪ್ರಾಸಿಕ್ಯೂಟರ್-ಪಿಕೆಟಿಂಗ್ ವಿಧಾನ ನಡೆಯಿತೋ?

ಸಾಕ್ಷಿ-ಹೌದು. ಬಸ್ಸಿನಲ್ಲಿ ಕುಳಿತುಕೊಳ್ಳಲು ಜನರನ್ನು ತಡೆಯಲಾಯಿತು. ಕಾಲೇಜುಗಳ ಮುಂದೆ ವಿದ್ಯಾರ್ಥಿಗಳನ್ನು ತಡೆಯಲಾಯಿತು. ಟಿಕೆಟ್ ಇಲ್ಲದೆ ಬಸ್ಸಿನಲ್ಲಿ ಹೋಗಬೇಕೆಂದು ಜನರನ್ನು ಪ್ರೇರೇಪಣೆ ಮಾಡಲಾಯಿತು.

ಪಬ್ಲಿಕ್ ಪ್ರಾಸಿಕ್ಯೂಟರ್-ಕಾರ್ಖಾನೆಗಳು ಮುಚ್ಚಿದವೇ?

ಸಾಕ್ಷಿ-ಅದನ್ನು ನಾನು ನೋಡಲಿಲ್ಲ.

ಪ್ರದರ್ಶನಕಾರರು ಪೋಸ್ಟರುಗಳನ್ನೂ ಪತ್ರಿಕೆಗಳನ್ನೂ ಹಂಚುತ್ತಿದ್ದರೆಂದೂ, ಅವುಗಳಲ್ಲಿ ಕಾಂಗ್ರೆಸ್ ಹಿರಿಯರ ಕಾರ್ಯಕ್ರಮದ ೧೪ ಅಂಶಗಳನ್ನು ಸೂಚಿಸಲಾಗಿತ್ತೆಂದೂ ಸಾಕ್ಷಿಯು ಹೇಳಿದರು.

ಪಬ್ಲಿಕ್ ಪ್ರಾಸಿಕ್ಯೂಟರ್-ರೇಂಜ್ ಆಫೀಸಿನ ಪಿಕೆಟಿಂಗಿಗೆ ಸಂಬಂಧಿಸಿದ ಯಾವುದಾದರೂ ಘಟನೆಯು ಗೊತ್ತೇ?

ಇನ್ನು ಕೆಲವು "ಲೀಡಿಂಗ್" ಪ್ರಶ್ನೆಗಳನ್ನು ಹಾಕಬಾರದೆಂದು ಶ್ರೀ ರಾಜುರವರು ಆಕ್ಷೇಪಿಸಿದರು.

ಪಬ್ಲಿಕ್ ಪ್ರಾಸಿಕ್ಯೂಟರ್-ಸಾಕ್ಷಿಯು ಮೂಲ ಸ್ಥಾಪಕರು ಅದೇನಂದೇ ಮಾರ್ಗ.

ಶ್ರೀ ರಾಜು-ಎವಿಡೆನ್ಸ್ ಆಕ್ಟು ಜಾರಿಯಲ್ಲಿದೆ ಎಂಬುದು ಪಬ್ಲಿಕ್ ಪ್ರಾಸಿಕ್ಯೂಟರಿಗೆ ಗೊತ್ತಿಲ್ಲದಿರುವುದು ಆಶ್ಚರ್ಯಯುತವು.

ಸಾಕ್ಷಿಯು ಪಬ್ಲಿಕ್ ಪ್ರಾಸಿಕ್ಯೂಟರ ಪ್ರಶ್ನೆಗೆ ಉತ್ತರವೀಯುತ್ತ, ಆಗಸ್ಟ್ ೧೩ ಅಥವ ೧೪ ರಲ್ಲಿ ಕೆಲವು ಕೆಲಸಗಾರರು ಸೆಲೆಕ್ಟ್ ಟಾಕೀಸ್ ಸಮೀಪದಲ್ಲಿರುವ ರೇಂಜ್ ಆಫೀಸಿನ ಹೊರಗೆ ಪಿಕೆಟಿಂಗ್ ನಡೆಸಿದರು. ರೇಂಜ್ ಆಫೀಸರು ಅವರನ್ನು ಬಂಧಿಸಿದರು. ಅವರ ಕೈಯಲ್ಲಿ ತ್ರಿವರ್ಣಧ್ವಜವಿತ್ತು. ಆಗಸ್ಟ್ ೧೬ ಮತ್ತು ೧೭ ರಲ್ಲಿ ಪ್ರತಿಭಟನೆ ಹೊರಡಿಸಲಾಯಿತು. ಜಿಲ್ಲಾ ಮ್ಯಾಜಿಸ್ಟ್ರೇಟರು ಡಿಫೆನ್ಸ್ ಆಫ್ ಇಂಡಿಯಾ ರೂಲು ೫೬ [೧] ಪ್ರಕಾರ ಒಂದು ಆಜ್ಞೆಯನ್ನು ಹೊರಡಿಸಿ ಸಭೆ ಮತ್ತು ಪ್ರದರ್ಶನಗಳನ್ನು ಪ್ರತಿಬಂಧಿಸಿದರು. ಜನರ ಮುಂದೊಂದು ಈ ಆಜ್ಞೆಯನ್ನು ಮುರಿಯಲು ಅಪೇಕ್ಷಿಸಿತು. ಮತ್ತು ಆ ಆಜ್ಞೆಯನ್ನು ಹಲವು ಸಲ ಮುರಿಯಲಾಯಿತು. ಮೈಸೂರು ಕಾಂಗ್ರೆಸ್ಸನ್ನು ಸರ್ಕಾರವು ಅಕ್ರಮಕೂಟವೆಂದು ಪ್ರಸಿದ್ಧಿಸಿತು. ಆಗಸ್ಟ್ ೧೭ ರಲ್ಲಿ ಕೆಲವು ಪೋಸ್ಟ್ ಬಾಕ್ಸುಗಳನ್ನು ಕಿತ್ತು ಬೀದಿ ಅಲ್ಲಿ ಹಾಳುಗೆಡವಲಾಗಿತ್ತು. ಸಾಗರ್ ಟಾಕೀಸ ಬಳಿ ಟೆಲಿಫೋನ್ ತಂತಿಯನ್ನು ಕತ್ತರಿಸಲಾಗಿತ್ತು. ಅಕ್ರಮಕೂಟಗಳನ್ನು ಚದುರಿಸಲು ಮಾಡಬೇಕಾಗಿದ್ದ ಬಲವನ್ನು ಉಪಯೋಗಿಸಬೇಕಾಯಿತು. ಆ ಪ್ರದರ್ಶನಗಳೆಲ್ಲವೂ ಆಗಸ್ಟ್ ೧೦ ರಿಂದಲೇ ನಡೆಯುತ್ತಿದ್ದುವು. ಈ ಪ್ರದರ್ಶನಗಳು ಸಂಸ್ಥಾನದಲ್ಲೆಲ್ಲಾ ನಡೆಯುತ್ತಿತ್ತು. ಇದು ಅಲ್ಲೊಂದು ಇಲ್ಲೊಂದು ಎಂಬ ರೀತಿಯ ಪ್ರದರ್ಶನವಲ್ಲ. ಈ ಚಳವಳಿಗೆ ಸಂಬಂಧಪಟ್ಟವರಿಂದ ಆಗಾಗ ಪತ್ರಿಕೆಗಳೂ ಬುಲೆಟಿನ್ನುಗಳೂ ಹೊರಬೀಳುತ್ತಿದ್ದವು. ಟಾಕೀಸ್ ಮುಂದೆ ನಡೆದ ಪ್ರದರ್ಶನವು ಸ್ಥಳದ ಒಂದು ಪ್ರದರ್ಶನ ಮಾತ್ರವಲ್ಲವೆಂದು ಸಾಕ್ಷಿಯು ಹೇಳಿದರು.

ಶ್ರೀ ರಾಜುರವರ ಪಾಟೀ ಸವಾಲು

ಅನಂತರ ಆಪಾದಿತರ ಪರ ಅಡ್ವೊಕೇಟರಾದ ಶ್ರೀ ಎಚ್.ಎಸ್. ರಾಜುರವರು ಪಾಟೀ ಸವಾಲು ನಡೆಸಿದರು.

ಸಾಕ್ಷಿಯು, ಶ್ರೀ ರಾಜುರವರ ಪ್ರಶ್ನೆಗೆ ಉತ್ತರವಾಗಿ, ನಾನು ೧೯೩೫ ರಿಂದ ಸರ್ವೀಸಿನಲ್ಲಿರುವುದಾಗಿ ಹೇಳಿದರು. ಕೋರ್ಟಿನಲ್ಲಿ ತನ್ನ ಸಾಕ್ಷ್ಯ ನೀಡುವುದಕ್ಕೆ ಇನ್ವೆಸ್ಟಿಗೇಟಿಂಗ್ ಆಫೀಸರು ಬಂದಿಲ್ಲವೆಂದೂ ಇನ್ಸ್‌ಪೆಕ್ಟರ್ ಜನರಲ್ ಶ್ರೀ ವರದರಾಜನವರ ಅನುಮತಿ ಪಡೆದು ಬಂದಿದ್ದೇನೆಂದೂ ಹೇಳಿದರು.

ಮೈಸೂರು ಸರ್ಕಾರವು ಆಗಸ್ಟ್ ೧೦ ರಲ್ಲಿ ಹೊರಡಿಸಿದ ನೋಟಿಫಿಕೇಷನ್ನನ್ನು ನಾನು ಓದಿರುವೆನೆಂದೂ ಅದರ ಗೆಜೆಟ್ ಪ್ರತಿಯನ್ನು ನೋಡಿರುವೆನೆಂದೂ ಸಾಕ್ಷಿಯು ಹೇಳಿದರು. ಈ ನೋಟಿಫಿಕೇಷನ್ನು ಡಿಫೆನ್ಸ್ ಆಫ್ ಇಂಡಿಯಾ ರೂಲ್ ೫೬ [೧][ಬಿ] ಪ್ರಕಾರ ಹೊರಡಿಸಲಾಗಿದೆ. ಈ ರೂಲ್ ಪ್ರಕಾರ ಪ್ರದೇಶವನ್ನು ಸೂಚಿಸಬೇಕು. ಆದರೆ ಈ ರೂಲ್ ಪ್ರಕಾರ ಹೊರಡಿಸಿದ ಈ ನೋಟಿಫಿಕೇಷನ್ನಿನಲ್ಲಿ ಪ್ರದೇಶ ನಮೂದಿಲ್ಲ.

ಪಬ್ಲಿಕ್ ಪ್ರಾಸಿಕ್ಯೂಟರ್–ಸಾಕ್ಷಿಯ ಅಭಿಪ್ರಾಯವು ನನ್ನನ್ನಾಗಲೀ ಕೋರ್ಟನ್ನಾಗಲೀ ಬಂಧಿಸುವುದಿಲ್ಲ.

ಶ್ರೀ ರಾಜು-ಸಾಕ್ಷಿಯು ನೋಡಿದ ಅನಂತರ ಸ್ಥಿತಿಯನ್ನು ತಿಳಿಸುತ್ತಿರುವರು. ಅವರು ತಮ್ಮ ಅಭಿಪ್ರಾಯವನ್ನು ಕೊಡುತ್ತಿಲ್ಲ.

ಶ್ರೀ ಪಿ. ಆರ್. ರಾಮಯ್ಯನವರನ್ನು ದಸ್ತಗಿರಿ ಮಾಡಿದಾಗ ಸ್ಥಳದಲ್ಲಿಯೇ ನಾನಿದ್ದೆನೆಂದು ಸಾಕ್ಷಿಯು ಹೇಳಿದರು. ಶ್ರೀ ರಾಮಯ್ಯನವರನ್ನು ದಸ್ತಗಿರಿ ಮಾಡಲು ವಾರಂಟು ಇರಲಿಲ್ಲ. ಅವರನ್ನು ಆಗಸ್ಟ್ ೮ನೇ ರಾತ್ರಿ ಸುಮಾರು ೧೧-೩೦ ಅಥವಾ ಮಧ್ಯರಾತ್ರಿ ಸಮಯದಲ್ಲಿ ದಸ್ತಗಿರಿ ಮಾಡಲಾಯಿತು. ಅವರನ್ನು ದಸ್ತಗಿರಿ ಮಾಡಬೇಕೆಂದು ಸಬ್ ಇನ್ಸ್‌ಪೆಕ್ಟರ್ ಹರ್ಷ ಅವರಿಗೆ ಸಾಕ್ಷಿಯು ತಿಳಿಸಲಿಲ್ಲ. ಆದರೆ ಸಾಕ್ಷಿಯನ್ನು ದಸ್ತಗಿರಿಗೆ ಮುಂಚೆ ಕೇಳಲಾಯಿತು. ಶ್ರೀ ರಾಮಯ್ಯನವರ ದಸ್ತಗಿರಿಗೆ ಸಾಕ್ಷಿಯು ಒಪ್ಪಿದರು. ಅವರನ್ನು ದಸ್ತಗಿರಿ ಮಾಡಬೇಕೆಂದು ಮೇಲಧಿಕಾರಿಗಳಿಂದ ಸಾಕ್ಷಿಗೆ ಹೇಳಲಾಗಿಲ್ಲ. ಅವರನ್ನು ಸಾಕ್ಷಿಯಾದ ನೀವು ದಸ್ತಗಿರಿ ಮಾಡಬೇಕೆಂದು ಸಾಕ್ಷಿಯು ಇನ್ವೆಸ್ಟಿಗೇಟಿಂಗ್ ಆಫೀಸರಿಗೆ ಹೇಳಲಿಲ್ಲ.

ಶ್ರೀ ರಾಜು-ಆಗಸ್ಟ್ ೧೦ ರಿಂದ ನಡೆಯುತ್ತಿದ್ದುವೆಂದು ನೀವು ಹೇಳುವ ಪ್ರದರ್ಶನಗಳೆಲ್ಲವೂ ಡೈಲಿ ಪೋಸ್ಟ್ ಪತ್ರಿಕೆಯಲ್ಲಿ ವರದಿಯಾದವೋ?

ಸಾಕ್ಷಿ-ಕೆಲವು ಆಗಿವೆ. ನಾನು ಡೈಲಿ ಪೋಸ್ಟ್ ಪತ್ರಿಕೆಯನ್ನು ಓದುವುದಿಲ್ಲ. ನಾನು ಈ ಪ್ರದರ್ಶನಗಳ ವರದಿಗಳನ್ನು ಇತರ ಪತ್ರಿಕೆಗಳಲ್ಲಿ ಓದುತ್ತೇನೆ.

ಶ್ರೀ ರಾಜು-ಆಗಸ್ಟ್ ೧೦ರ ನೋಟಿಫಿಕೇಷನ್ನನ್ನು ಆಪಾದಿತರು ಉಲ್ಲಂಘಿಸಿದರೆಂದು ಮತ್ತು ಅದರಿಂದ ತಪ್ಪು ನಡೆದಿದೆಯೆಂದು ನಿಮಗೆ ಸೆಪ್ಟೆಂಬರ್ ೮ ರ ಒಳಗೆ ತೋರಲಿಲ್ಲವೋ?

ಸಾಕ್ಷಿ-ನನಗೆ ಗೊತ್ತಿತ್ತು.

ಶ್ರೀ ರಾಜು-ಕ್ರಮ ತೆಗೆದುಕೊಳ್ಳಲು ನಿಮಗೆ ಕಾರಣ ತೋರಲಿಲ್ಲವೋ?

ಸಾಕ್ಷಿ-ನನಗೆ ಕಾಲಾವಕಾಶವಿರಲಿಲ್ಲ.

ಶ್ರೀ ರಾಜು-ಕ್ರಮ ತೆಗೆದುಕೊಳ್ಳುವ ಸಮಯವು ಸೆಪ್ಟೆಂಬರ್ ೮ ರಲ್ಲಿ ಮಾತ್ರ ಬಂತೋ? ಆ ದಿನದವರೆಗೆ ನಿಮಗೆ ಕಾಲಾವಕಾಶವೇ ದೊರೆಯಲಿಲ್ಲವೋ? ನಿಮಗೆ ಕಾಲಾವಕಾಶ ದೊರೆತಿದ್ದರೆ ಆ ದಿನಕ್ಕೆ ಮುಂಚೆಯೇ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದಿರೋ?

ಸಾಕ್ಷಿ-ಸೆಪ್ಟೆಂಬರ್ ೮ ರವರೆಗೆ ನನಗೆ ಬೇರೆ ಕೆಲಸವಿದ್ದುದರಿಂದ ಅವಕಾಶವಿರಲಿಲ್ಲ.

ಶ್ರೀ ರಾಜು-ಶ್ರೀ ರಾಮಯ್ಯನವರಿಂದ ತಪ್ಪು ನಡೆದಿದೆ ಎಂದು ನೀವು ಮೇಲಧಿಕಾರಿಗಳಿಗೆ ವರದಿ ಮಾಡಿದಿರೋ?

ಸಾಕ್ಷಿ-ಇಲ್ಲ.

ಶ್ರೀ ರಾಜು—ಅವರಿಂದ ತಪ್ಪು ನಡೆದಿದೆಯೆಂದು ನಿಮಗೆ ಮೇಲಧಿಕಾರಿಗಳು ತಿಳಿಸಿದರೋ?

ಸಾಕ್ಷಿ—ಇಲ್ಲ.

ಸಾಕ್ಷಿಯು ಮುಂದುವರಿಯುತ್ತ, ತಾವು ಮದರಾಸಿನ ಹಿಂದೂ ಪತ್ರಿಕೆಯನ್ನು ಓದುತ್ತಿರುವೆಂದೂ ಅದರಲ್ಲಿ ಈ ಚಳುವಳಿಗೆ ಸಂಬಂಧಪಟ್ಟ ಮುದ್ರಿಸಿದ ಸುದ್ದಿಗಳ ಬಗ್ಗೆ ಯಾರಿಂದ ಅವು ಬಂದವೆಂಬುದನ್ನು ಪತ್ರಿಕೆಯಲ್ಲಿ ಮುದ್ರಿಸುವುದಿಲ್ಲವೆಂದೂ ಪತ್ರಿಕೆಗಳ ಪ್ರತಿಯನ್ನು ನೋಡಿ ಹೇಳಿದರು. ಶ್ರೀ ವಿ ವಿ ಗಿರಿಯವರು ಬಂಧಿತರಾಗಿ ಹಸ್ತಗಿರಿಯಾದ ಸುದ್ದಿಯು ಆ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಆ ಸುದ್ದಿಯು ಯಾರಿಂದ ಬಂತೆಂಬುದನ್ನು ಪತ್ರಿಕೆಯಲ್ಲಿ ಸೂಚಿಸಿಲ್ಲ. ಸಮಾಜದ ಚಳುವಳಿಗೆ ವಿರೋಧವಾಗಿ ಸರ್ಕಾರವು ಕೈಕೊಂಡ ಕ್ರಮಗಳಲ್ಲಿ ಹಸ್ತಗಿರಿಯೆಂಬ ಅಗಸ್ಟ್ ೧೦ ರಲ್ಲಿ ಬೆಂಗಳೂರು ಟೌನ್ ಹಾಲ್ [illegible] ಪ್ರೈವೇಟ್ ಪ್ರಾಕ್ಟಿಸ್‌ನಲ್ಲಿ ಶ್ರೀ ಎಸ್ ಆರ್. ರಾಮಯ್ಯನವರು ಇದ್ದರೆಂದೂ, ಅವರು ಶ್ರೀ ಸಿ ಎಂ ಪೂರ್ಣಯ್ಯ ಸಿಂಹರು ಬರುವವರೆಗೆ ಅದೇ ಸ್ಥಳದಲ್ಲಿದ್ದರೆಂದೂ ಹೇಳಿದರು.

ಶ್ರೀ ರಾಜು—ವಿದ್ಯಾರ್ಥಿಗಳು ಇನ್ನಿತರ ಸ್ಥಳದಲ್ಲಿ ಹಲವಾರು ಕೆಲಸಗಳನ್ನು ಕೈಗೊಳ್ಳಬೇಕೆಂದೂ ಅವರು ಹಾಗೆ ಮಾಡಿದ್ದು ಪ್ರತಿಭಟನೆಗಾಗಿ ಎಂದೂ ನೀವು ಹೇಳುವಿರಾ ಪ್ರತಿಭಟನೆಯು ಏತಕ್ಕಾಗಿ?

ಸಾಕ್ಷಿ—ಅವರು ಸಾರ್ವಜನಿಕ ಚಳುವಳಿಯ ಉದ್ದೇಶದ ಒಂದು ಭಾಗವನ್ನು ವಹಿಸಿದರೇನಾ ಗತ್ಯವಿರಿಂದ ಇನ್ನಿತರ ಹಸ್ತಕ್ಷೇಪವಿದೆ ಹೋರಾಟಕ್ಕೆ ಪ್ರತಿಭಟನೆ.

ಮಹಾತ್ಮಾ ಗಾಂಧಿ ಮುಂತಾದ ಮುಖಂಡರು ಅಗಸ್ಟ್ ೯ ರಲ್ಲಿ ಹಸ್ತಗಿರಿಯಾದರೆಂದೂ ಆ ವರ್ತಮಾನವನ್ನು ಪತ್ರಿಕೆಗಳಲ್ಲಿ ನಾನೇ ದಿನಾ ಓದಿದೆನೆಂದೂ ಸಾಕ್ಷಿಯು ಹೇಳಿದರು. ಈ ಪ್ರದರ್ಶನಗಳು ನಡೆದದ್ದು ಈ ಹಸ್ತಗಿರಿ ಗಳ ಮೇಲೆ ಎಂದೂ ಸಾಕ್ಷಿಯು ಹೇಳಿದರು.

ಶ್ರೀ ರಾಜು—ಈ ಮುಖಂಡರ ಹಸ್ತಗಿರಿಯನ್ನು ಪ್ರತಿಭಟಿಸಲು ಈ ಪ್ರದರ್ಶನಗಳು ನಡೆದುವೆಂದು ನಿಮಗೆ ತೋರಲಿಲ್ಲವೋ?

ಸಾಕ್ಷಿ—ನಾನು ಹೇಳಲಾರೆ.

ಶ್ರೀ ರಾಜು—ಈ ಪ್ರದರ್ಶನಗಳು ಈ ಹಸ್ತಗಿರಿಗಳನ್ನು ಪ್ರತಿಭಟಿಸಲು ನಡೆದುವೆಂಬುದು ಸಾಧ್ಯವೋ? ಅದು ಅಸಂಭವವಲ್ಲವೋ?

ಸಾಕ್ಷಿ ನಾನು ಅದನ್ನೂ ಹೇಳಲಾರೆ.

ಶ್ರೀ ರಾಜು—ಈ ಪ್ರದರ್ಶನಗಳಲ್ಲಿ ಹಸ್ತಗಿರಿ ಮಾಡಿದವರನ್ನು ಬಿಡುವಂತೆ ಮಾಡಬೇಕೆಂದ ಒಂದೇ ರೀತಿ ಕೂಗು ಕೇಳಿಬರುತ್ತಿರಲಿಲ್ಲವೋ? ಅದು ನಿಮಗೆ ಗೊತ್ತಿಲ್ಲವೇ?

ಸಾಕ್ಷಿ—ಇಲ್ಲ.

ಶ್ರೀ ರಾಜು—ಪತ್ರಿಕೆಗಳಲ್ಲಿ ಹಾಗೆ ಓದಿಯೂ ಇಲ್ಲವೋ?

ಸಾಕ್ಷಿ—ಪತ್ರಿಕೆಗಳಲ್ಲಿದ್ದುದು ನನಗೆ ಗೊತ್ತಿಲ್ಲ.

ಸಾರ್ವಜನಿಕ ಚಳುವಳಿಗೆ ಸಂಬಂಧಪಟ್ಟ ಪತ್ರಪ್ರತಿಗಳನ್ನು ತಾವು ನೋಡಿರುವರೆಂದೂ, ಅವು ಅತೀವ ಗ್ರಾಹ್ಯವಾದುವೆಂದೂ, ಅದಕ್ಕೆ ಯಾವ ಮುದ್ರಣವೂ ಇಲ್ಲವೆಂದೂ ಸಾಕ್ಷಿಯು ಹೇಳುತ್ತ ಅವು ಎಐಸಿಸಿ ಯ ಬುಲೆಟಿನ್ ಗಳಾಗಿರಬೇಕೆಂದೂ, ಅಂಥದ್ದು ನಿಮಗೆ ಗೊತ್ತಿಲ್ಲವೆಂದೂ ಹೇಳಿದರು.

ಪಬ್ಲಿಕ್ ಪ್ರಾಸಿಕ್ಯೂಟರ್—ಈ ಪತ್ರ ಪ್ರತಿಗಳ ಮೇಲೆ ಎಐಸಿಸಿ ಯು ಸಾರ್ವಜನಿಕ ಚಳವಳಿಯನ್ನು ನಡೆಸಿರುವುದೆಂದು ಇದರ ಸಾಕ್ಷ್ಯವಿರುವುದೇ ನಾನು ನೋಡಿಲ್ಲ.

ಶ್ರೀ ರಾಜು—ನೀವು ಅಂದೆ ಹೇಳುವುದು ನನಗೆ ಸರಿಯಾಗಿ ಈ ಬುಲೆಟಿನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ರಾಜುರವರ ಪ್ರಶ್ನೆಗೆ ಉತ್ತರವಾಗಿ, ಸಾಕ್ಷಿಯು ಇವರು ಸಾರ್ವಜನಿಕವಾಗಿ ಪ್ರದರ್ಶನ ಮಾಡುತ್ತ ನಗರಿಗೆ ಬೋರ್ಡಿನ ಮತ್ತು ಪತ್ರ ಕಾರ್ಯಕರ್ತರಿಗೆ ಅಪಾಯಕರವಾಗಿ ಮುಂದುವರಿದರು ಅದು ಸಾರ್ವಜನಿಕ ಚಳವಳಿಯದಾಗಿರಬೇಕೆಂದರು.

ಶ್ರೀ ರಾಜು—ಒಂದು ಆಗಸ್ಟ ತಿಂಗಳು, ೧೦೦೦ ಜನ ಸೇರಿರುವರೆಂದೀರಾ. ಈ ಸ್ಥಿತಿ ಮುಂತಾದ ೫೦ ಜನ ಪ್ರದರ್ಶನ ಮಾಡುತ್ತ ನಡೆದರೆ, ಅದು ಸಾರ್ವಜನಿಕ ಚಳವಳಿ ಆಗುವುದೇ?

ಸಾಕ್ಷಿ—ಹೌದು. ಅದಕ್ಕೆಂತ ಕಡಿಮೆ ಸಂಖ್ಯೆ ಆಗಬಹುದು.

ಶ್ರೀ ರಾಜು—ಎಐಸಿಸಿ ಯು ಸಾರ್ವಜನಿಕ ಚಳವಳಿಯನ್ನು ಹೂಡಿರುವುದೆಂದು ನಿಮಗೆ ವೈಯಕ್ತಿಕವಾಗಿ ಗೊತ್ತಿದೆಯೋ?

ಸಾಕ್ಷಿ—ಇಲ್ಲ.

ಶ್ರೀ ರಾಜು—ಆ ರೀತಿ ವಿವರವಾದರೂ ಪತ್ರಿಕೆಗಳನ್ನು ಓದಿರುವಿರೋ?

ಸಾಕ್ಷಿ—ಇಲ್ಲ.

ಶ್ರೀ ರಾಜು—ಮ್ಯಾಜಿಸ್ಟ್ರೇಟರ ಹಸ್ತಗಿರಿಯ ನಮೂದು ದಸ್ತಕದಲ್ಲಿ ದಾಖಲಾದ ನಂತರ, ಈ ಹೊಂತ್ತರುವ ಬಗೆಯನ್ನು ತಾವು ಯಾವ ಪಾತ್ರ ವಹಿಸಲಿಲ್ಲವೆಂದೂ ಸಾಕ್ಷಿಯು ಹೇಳಿದರು. ಸೆಪ್ಟಂಬರ್ ೮ನೇ ರಾತ್ರಿಯೇ ಬೆಂಗಳೂರಿನ ಇತರ ಪತ್ರಿಕಾಸಂಪಾದಕರೂ ಹಸ್ತಗಿರಿಯಾದರು. ತಾವು ಅದನ್ನು ೧೦ನೇ ತಾರೀಖಿನ ಸಂಜೆಯ ಧ್ವನಿಯನ್ನು ನೋಡಿ ಎಂಬುದಾಗಿ ಯ—, ಶ್ರೀ ಜಾರ್ಜ್ ಹೈಡರ ಫೋಟೋಗಳನ್ನು ನೋಡಿರುವುದಾಗಿಯೂ ಸಾಕ್ಷಿಯು ಹೇಳಿದರು. ಟಿ ಕೇಸ್ ಮುಂದೆ ನಡೆದ ಪ್ರತಿ

ಕ ಫಾರ್ಮ್ ಸ.ಖ್ಯೆ ಹೂ ಜೆಯು ಶ್ರೀ ಜಿ ಬಿ ಲರ ಮುಂದೆ ಎಂ ಎ ಪ್ರತಿ ದಿನಾಂಕ ಹೇಳಿದರು. ಆದರೆ ಅದು ಶ್ರೀ ಜಾರ್ಜ್ ಅವರಿಗೆ ಲಿಲ್ಲವೆಂದು ಸಾಕ್ಷಿಯು ಹೇಳಿದರು

ಪಬ್ಲಿಕ್ ಪ್ರಾಸಿಕ್ಯೂಟರು ಪುನಃ ಸಾಕ್ಷಿಯ ವಿಚಾರಣೆ ಇಲ್ಲ

ಕೇಸಿನ ಬೇರೆ ಪ್ರಕರಣ ಪ್ರಕಾರ, ಪಬ್ಲಿಕ್ ಪ್ರಾಸಿಕ್ಯೂಟರು ಇನ್ನೆರಡು ದಿನಗಳಲ್ಲಿ

ಈ ಬೇರೆ ಕಡೆಯ ವಿಚಾರಣೆಯು ಮುಗಿಯುವದೆಂದೂ, ಮುಖ್ಯರು ಇಬ್ಬರು ಸಾಕ್ಷಿಗಳು ಈ ವಿಧದ ಸಾಕ್ಷ್ಯವು ಕರೆಸಿಕೊಂಡನ್ನು ಕಾದವನ್ನು ಕರೆಸಿಕೊಳ್ಳಬೇಕೆಂದೂ ಹೇಳಿದರು.

ಶ್ರೀ ರಾಜುರವರು ಮುಖ್ಯ ಮೊಕದ್ದಮೆಗಳೂ ಒಂದೇ ರೀತಿಯ ದಾಖಲಿನಿಂದ ಒಂದು ಮೊಕದ್ದಮೆಯ ವಿಚಾರಣೆ ಮುನ್ನೇ ಮುಂದೆ ಹೋಗಿ ಮುಗಿಸಬಹುದೆಂದು ಸೂಚಿಸಿದರು.

ಆಪಾದಿತರ ಪರ ಇನ್ನೊಬ್ಬ ಅಡ್ವೊಕೇಟ ರಾದ ಶ್ರೀ ಜಿ ಆರ್ ಯತಿರಾಜುಲು ನಾಯುಡು ರವರು ಕಾರ್ಯದಲ್ಲಿ ಯಾವುದಾದರೂ ಒಂದು ಮೊಕದ್ದಮೆಯನ್ನು "ಟೆಸ್ಟ್ ಕೇಸ್" ಎಂದು ತಂದಾಗ ಅದರ ವಿಚಾರಣೆಯನ್ನು ಮುಗಿಸಬಹುದೆಂದರು

ಪಬ್ಲಿಕ್ ಪ್ರಾಸಿಕ್ಯೂಟರ್... ಟೆಸ್ಟ್ ಕೇಸ್ ಎಂಬುದೂ ಇಲ್ಲ. ಕೇಸ್ ಎಂದರೆ ಕೇಸೇ ಎಲ್ಲಾ ಮೊಕದ್ದಮೆಯನ್ನೂ ಈ ರೀತಿಯಲ್ಲೇ ನಾನು ಮುಗಿಸಬಹುದೆಂದು ಹೇಳಬಲ್ಲೆ.

ಶ್ರೀ ರಾಜು—ಇನ್ನೊಂದು ಮೊಕದ್ದಮೆಯು ವಿಚಾರಣೆಗೆ ಮುಂದೆ ಒಂದು ಮೊಕದ್ದಮೆಯಲ್ಲಿ ಪ್ರಾಸಿಕ್ಯೂಷನ್ ಸಾಕ್ಷ್ಯವು ಮುಗಿದರೆ, ಎಲ್ಲಾ ಮೊಕದ್ದಮೆಗಳಲ್ಲಿಯೂ ಒಟ್ಟಿಗೆ ವಾದ ನಡೆದರೆ ಒಳ್ಳೆಯದೆಂದು ಸೂಚಿಸಿದರು.

ಈ ಮೊಕದ್ದಮೆಯ ಮುಂದಿನ ವಿಚಾರಣೆಯನ್ನು ಅಕ್ಟೋಬರ್ ೮ಕ್ಕೆ ಮುಂದೂಡಲಾಯಿತು

ಆಪಾದಿತರ ಪರ ಶ್ರೀ ಎಲ್ ಎಸ್ ರಾಜು ರವರು ಶ್ರೀ ಜಿ ಆರ್ ಯತಿರಾಜುಲು ನಾಯುಡು ಜಿ ಆರ್ ದೊರೆಸ್ವಾಮಿ ಮತ್ತು ಎಂ ಎಲ್ ವೆಂಕಟನರಸಿಂಹರವರು ಇದ್ದರು ಸರ್ಕಾರದ ಪರ ಪಬ್ಲಿಕ್ ಪ್ರಾಸಿಕ್ಯೂಟರು (ಶ್ರೀ ಜಿ ಎಸ್ ದೊರೆಸ್ವಾಮಯ್ಯರ್) ಇದ್ದರು.

ಸಂಪಾದಕರ ಮೊಕದ್ದಮೆ

ಕಾಂಗ್ರೆಸ್ ಚಳುವಳಿ ಮತ್ತು ಹಿಂಸಾತ್ಮಕ ಘಟನೆಗಳು

ಶ್ರೀ ಬಿ. ಎನ್. ಗುಪ್ತರ ಕೇಸಿನಲ್ಲಿ ಸಿ. ಐ. ಡಿ. ಇನ್‌ಸ್ಪೆಕ್ಟರ ಸಾಕ್ಷ್ಯ

[ತಾ ೨ ಬಾ] ಬೆಂಗಳೂರು ಆ ೫

ಮೈಸೂರು ಸರ್ಕಾರದವರು ಡಿಫೆನ್ಸ್ ಆಫ್ ಇಂಡಿಯಾ ರೂಲ್ ೫೧ (೧) (ಬಿ) ಪ್ರಕಾರ ಆಗಸ್ಟ್ ೧೧ರಲ್ಲಿ ಹೊರಡಿಸಿದ ನೋಟಿಫಿಕೇಷನ್ನನ್ನು ಉಲ್ಲಂಘಿಸಿದರೆಂದು 'ಜನವಾಣಿ' ಮತ್ತು 'ಪ್ರಜಾಮತ' ಪತ್ರಿಕೆಗಳ ಮಾಲೀಕರಾದ ಶ್ರೀ ಬಿ. ಎನ್. ಗುಪ್ತರ ಮೇಲೆ ಹೂಡಲಾಗಿರುವ ಮೊಕದ್ದಮೆಯ ವಿಚಾರಣೆಯು ಈ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ (ಶ್ರೀ ಸಿ. ರಾಮಚಂದ್ರರಾವ್) ಮುಂದೆ ಆರಂಭವಾಯಿತು. ಪ್ರಾಸಿಕ್ಯೂಷನ್ನಿನ ಪರ ಮೊದಲನೆಯ ಸಾಕ್ಷಿಯಾಗಿ ಸಿ. ಐ. ಡಿ. ಇನ್ಸ್‌ಪೆಕ್ಟರ್ ಶ್ರೀ ಬಿ. ಆರ್. ಗುಂಡೂರಾಯರು ಸಾಕ್ಷ್ಯವಿತ್ತರು.

ಶ್ರೀ ಬಿ. ಎನ್. ಗುಪ್ತರಿಗೆ ಕುಳಿತುಕೊಳ್ಳಲು ಕುರ್ಚಿ ಕೊಡಲಾಗಿತ್ತು.

ಪಬ್ಲಿಕ್ ಪ್ರಾಸಿಕ್ಯೂಟರ ಪ್ರಶ್ನೆಗಳಿಗೆ ಉತ್ತರ ಕೊಡುತ್ತ, ಸಾಕ್ಷಿಯಾದ ಇನ್ಸ್‌ಪೆಕ್ಟರ್ ಶ್ರೀ ಗುಂಡೂರಾಯರು ಶ್ರೀ ಗುಪ್ತರ ಮೇಲೆ ಹೂಡಲಾಗಿರುವ ಚಾರ್ಜ್‌ಷೀಟಿನ ಜೊತೆಗೆ 'ಜನವಾಣಿ'ಯಲ್ಲಿ ಪ್ರಕಟವಾದ ಕೆಲವು ವರದಿಗಳು ಸೇರಿವೆಯೆಂದೂ, ಆ ವರದಿಗಳು 'ಜನವಾಣಿ'ಯ ಸೆಪ್ಟೆಂಬರ್ ೧, ೨ ಮತ್ತು ೩ನೇ ತಾರೀಖಿನ ಸಂಚಿಕೆಗಳಲ್ಲಿ ಪ್ರಕಟವಾದುವೆಂದೂ ಮತ್ತು ಆ ವರದಿಗಳು ಬೆಂಗಳೂರಿನಲ್ಲಿ ನಡೆದ ಘಟನೆಗಳ ವರದಿಗಳೆಂದೂ ಹೇಳಿದರು. ಆ ತಾರೀಖುಗಳಲ್ಲಿ ಶ್ರೀ ಬಿ. ಎನ್. ಗುಪ್ತರು 'ಜನವಾಣಿ'ಯ ಪತ್ರಿಕೆಯ ಸಂಪಾದಕರಾಗಿದ್ದರು, ಮುದ್ರಣಕಾರರಾಗಿದ್ದರು ಮತ್ತು ಪ್ರಕಟಣಕಾರರಾಗಿದ್ದರು. 'ಜನವಾಣಿ'ಯ ಆ ವರದಿಗಳು ಸೂಚಿಸುವ ಘಟನೆಗಳೆಲ್ಲವೂ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಆಗಸ್ಟ್ ೮ ಅಥವಾ ೯ರಲ್ಲಿ ಪ್ರಾರಂಭಿಸಿದ ಸಾಮೂಹಿಕ ಚಳುವಳಿಗೆ ಸೇರಿವೆ. ಜುಲೈ ೧೯ ರ 'ಹರಿಜನ' ಪತ್ರಿಕೆಯಲ್ಲಿ ಕಾಂಗ್ರೆಸ್ ವ॥ ಕಮಿಟಿಯು ಪಾಸು ಮಾಡಿದ "ಕ್ವಿಟ್ ಇಂಡಿಯಾ" ನಿರ್ಣಯವು ಪ್ರಕಟವಾಗಿದೆ ಮತ್ತು ಆಗಸ್ಟ್ ೯ ರ 'ಹರಿಜನ' ಪತ್ರಿಕೆಯಲ್ಲಿ ಎ. ಐ. ಸಿ. ಸಿ. ಯ ಮುಂದೆ ಮಂಡಿಸಲಾದ 'ಕ್ವಿಟ್ ಇಂಡಿಯಾ' ನಿರ್ಣಯವು ಪ್ರಕಟವಾಗಿದೆ. ಇದೇ "ಹರಿಜನ" ಸಂಚಿಕೆಯಲ್ಲಿ ಮಹದೇವದೇಸಾಯಿಯವರು "ಅಹಿಂಸಾತ್ಮಕ ಅಸಹಕಾರ ಮಾರ್ಗಗಳು" ಎಂಬ ಶಿರೋನಾಮೆಯಲ್ಲಿ ಒಂದು ಲೇಖನವನ್ನು ಬರೆದಿದ್ದಾರೆ. ಆಗಸ್ಟ್ ೮ರ "ಡೈಲಿ ನ್ಯೂಸ್" ಪತ್ರಿಕೆಯಲ್ಲಿ ಕಾಂಗ್ರೆಸ್ ವ॥ ಕಮಿಟಿಯು ಪಾಸು ಮಾಡಿದ ಮತ್ತು ಎ. ಐ. ಸಿ. ಸಿ. ಯು ಒಪ್ಪಿದ "ಕ್ವಿಟ್ ಇಂಡಿಯಾ" ನಿರ್ಣಯವು ಪ್ರಕಟವಾಗಿದೆ. ಆಗಸ್ಟ್ ೧೬ರ [illegible] ಪತ್ರಿಕೆಯಲ್ಲಿ ಶ್ರೀ ಕೆ. ಜಿ. ಮಶ್ರೂವಾಲಾರವರು ಬರೆದ "ಪೊಲೀಸರಿಗೆ, ಸೈನ್ಯದ ಅಧಿಕಾರಿಗಳಿಗೆ ಮತ್ತು [illegible]" ಎಂಬ ಲೇಖನವು ಪ್ರಕಟವಾಗಿದೆ.

ಸಾಮೂಹಿಕ ಚಳುವಳಿಯ ಸ್ವರೂಪ

ಮೈಸೂರು ಸಂಸ್ಥಾನದಲ್ಲಿ ನಡೆಯುತ್ತಿರುವ ಸಾಮೂಹಿಕ ಚಳುವಳಿಯನ್ನು [illegible]

ಈ [illegible] "ಕ್ವಿಟ್ ಇಂಡಿಯಾ" [illegible] ಮೇಲೆ ಆರಂಭವಾಯಿತು.

ಪಬ್ಲಿಕ್ ಪ್ರಾಸಿಕ್ಯೂಟರ್:- ಈ ಚಳುವಳಿಯು ಯಾವ ರೂಪವನ್ನು ತಾಳಿತು?

ಸಾಕ್ಷಿ:- [illegible] ಮತ್ತು ಕಾಲೇಜುಗಳ ವಿದ್ಯಾರ್ಥಿಗಳ ಮುಷ್ಕರ, ಮ್ಯಾಜಿಸ್ಟ್ರೇಟ ಆಜ್ಞೆಗಳಿಗೆ ವಿರೋಧವಾಗಿ ಮೆರವಣಿಗೆಗಳು, ಜಾರಿಗೆ ಬಂದ ಆಜ್ಞೆಗಳಿಗೆ ವಿರೋಧವಾಗಿ ಸಭೆಗಳು, ಶಾಲೆಗಳ ಮತ್ತು ಕಾಲೇಜುಗಳ ಮುಂದೆ ಮತ್ತು ರಸ್ತೆಯಲ್ಲಿ ಕುಳಿತುಕೊಂಡು ಸತ್ಯಾಗ್ರಹ ನಡೆಸುವುದು, ಆಕ್ಷೇಪಣೀಯವಾದ ಕೂಗುಗಳು, ಆಕ್ಷೇಪಣೀಯವಾದ ಪ್ಲಕಾರ್ಡುಗಳನ್ನು ಹಿಡಿದುಕೊಂಡು ಮೆರವಣಿಗೆ ನಡೆಸುವುದು. ಬೆಂಗಳೂರಿನಲ್ಲಿ ಮತ್ತು ಇತರೆಡೆಗಳಲ್ಲಿ ಪರದೇಶಿ ಬಟ್ಟೆಯನ್ನು ಸುಡುವುದು, ಅಂಗಡಿಗಳನ್ನೂ, [illegible] ಸ್ಥಳಗಳನ್ನೂ ಮುಚ್ಚುವಂತೆ ಪ್ರೇರೇಪಿಸುವುದು, ಆಕ್ಷೇಪಣೀಯವಾದ ಹಸ್ತಪತ್ರಗಳನ್ನು ಹಂಚುವುದು ಮತ್ತು ಆಕ್ಷೇಪಣೀಯವಾದ ಪೋಸ್ಟರುಗಳನ್ನು ಅಂಟಿಸುವುದು, (ಸಾಕ್ಷಿಯು ಆಕ್ಷೇಪಣೀಯ ಪತ್ರಗಳೆಂದು ಲಿಬರ್ಟಿ, ಕ್ರಾಂತಿ, ಫ್ರೀ ಇಂಡಿಯಾ ಬುಲಿಟಿನ್ ಮುಂತಾದ ಹೆಸರುಗಳಿಂದ ಕೂಡಿದ ಹಲವು ಪತ್ರಗಳನ್ನು ದಾಖಲು ಮಾಡಿದರು.) ಆಕ್ಷೇಪಣೀಯ ಘೋಷಣೆಗಳನ್ನು ಟಾರ್ ರಸ್ತೆಗಳ ಮೇಲೆ ಬರೆಯುವುದು, ರೈಲ್ವೆ ಮತ್ತು ಬಸ್‌ಗಳಲ್ಲಿ ಟಿಕೆಟ್ಟಿಲ್ಲದೆ ಪ್ರಯಾಣ ಮಾಡುವುದು. ಪಬ್ಲಿಕ್ ಸೇಫ್ಟಿ ಆಕ್ಟಿನ ಪ್ರಕಾರ ಹಲವು ಅಪರಾಧಗಳು, ರೈಲ್ವೆ, ಟೆಲಿಗ್ರಾಫ್ ಮತ್ತು ಟೆಲಿಫೋನ್ ಸೌಕರ್ಯಕ್ಕೆ ಅಡಚಣೆ ತರುವುದು. ಬೆಂಗಳೂರಿನಲ್ಲಿ ಮತ್ತು ಸಂಸ್ಥಾನದ ಇತರೆಡೆಗಳಲ್ಲಿ ಕೆಲಸಗಾರರು ಮುಷ್ಕರ ನಡೆಸುವುದು.

ಚಳುವಳಿಯು ಸಾಮೂಹಿಕ

ಈ ಚಳುವಳಿಯು ಯಾವುದೊಂದು ಕೋಮಿಗಾಗಲೀ ಅಥವಾ ಯಾವುದೊಂದು ಪ್ರದೇಶಕ್ಕಾಗಲೀ ಸೇರಿಲ್ಲವೆಂದೂ, ಇದು ಸಂಸ್ಥಾನದಲ್ಲೆಲ್ಲಾ ಒಟ್ಟಿಗೇ ಹರಡಿತೆಂದೂ ಸಾಕ್ಷಿಯು ಹೇಳಿದರು. ಈ ಚಳುವಳಿಯಲ್ಲಿ ವಿದ್ಯಾರ್ಥಿಗಳು, ಗಿರಣಿ ಕೆಲಸಗಾರರು, ವರ್ತಕರು ಮತ್ತು ಇತರರು ಭಾಗವಹಿಸಿದ್ದಾರೆ. ಸಂಸ್ಥಾನದಲ್ಲಿ ಆಗಸ್ಟ್ ೧೦ ರಿಂದ ೩೧ ರವರೆಗೆ ನಡೆದ ಚಳುವಳಿಗೆ ಸಂಬಂಧಪಟ್ಟ ಘಟನೆಗಳನ್ನೂ ಮತ್ತು ಆ ಬಗ್ಗೆ ಸರ್ಕಾರವು ಕೈಕೊಂಡ ಕಾರ್ಯಕ್ರಮವನ್ನೂ ಸೂಚಿಸುವ ಒಂದು ಪಟ್ಟಿಕೆಯನ್ನು ಸಾಕ್ಷಿಯು ಕೋರ್ಟಿಗೆ ದಾಖಲು ಮಾಡಿದರು. ಮೈಸೂರು ಕಾಂಗ್ರೆಸ್ಸನ್ನು ಅಕ್ರಮ ಸಂಘವನ್ನಾಗಿ ಆಗಸ್ಟ್ ೯ ರಲ್ಲಿ ಸರ್ಕಾರವು ಸಾರಿತೆಂದು ಸಾಕ್ಷಿಯು ಹೇಳಿದರು. ಈ ಸಾಮೂಹಿಕ ಚಳುವಳಿಯ ಸಂಬಂಧವಾಗಿ ಸರ್ಕಾರವು ಕೆಲವು ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಿದೆ.

ಪಬ್ಲಿಕ್ ಪ್ರಾಸಿಕ್ಯೂಟರ್:- ಇಂಡಿಯಾ ಸರಕಾರವು ಈ ಸಾಮೂಹಿಕ ಚಳುವಳಿಯ ಸಂಬಂಧವಾಗಿ ಏನಾದರೂ ಹೇಳಿರುವರೇ?

ಸಾಕ್ಷಿ:- ಹೌದು. ಆಗಸ್ಟ್ ೮ ರ ಗೆಜೆಟ್ ಆಫ್ ಇಂಡಿಯಾದಲ್ಲಿ ಗೌರ್ನರ್-ಜನರಲ್-ಇನ್-ಕೌನ್ಸಿಲ್ಲಿನ ನಿರ್ಣಯವಿದೆ. ಆಗಸ್ಟ್ ೩೦ ರ ಫೋರ್ಟ್ ಸೆಂಟ್ ಜಾರ್ಜ್ ಗೆಜೆಟ್ಟಿನಲ್ಲಿ ಮದರಾಸ್ ಸರ್ಕಾರವು ಈ ಬಗ್ಗೆ ಹೊರಡಿಸಿದ ಪ್ರಕಟಣೆ ಇರುತ್ತದೆ.

[illegible] ಮತ್ತು ಶಾಸನಕ್ಕೆ ವಿರೋಧವಾಗಿ ನ

ಡೆಯುತ್ತಿರುವ ಈ ಸಾಮೂಹಿಕ ಚಳುವಳಿಯನ್ನು ತಡೆಯಲು ಸರ್ಕಾರದವರು ಹಲವು ಕಾರ್ಯಕ್ರಮಗಳನ್ನು ಕೈಕೊಂಡಿರುವರೆಂದು ಸಾಕ್ಷಿಯು ಮುಂದುವರಿಯುತ್ತ ಹೇಳಿದರು. ಮೈಸೂರಿನೊಳಗಿರುವ ಮತ್ತು ಹೊರಗಿರುವ ವೃತ್ತ ಪತ್ರಿಕೆಗಳು ಈ ಚಳುವಳಿಯನ್ನು ಸಾಮೂಹಿಕ ಚಳುವಳಿ ಎಂದು ಕರೆದಿವೆ. ಇಂಡಿಯಾ ಸರ್ಕಾರದ ಕೆಲವು ಅಧಿಕಾರಿಗಳು ಮತ್ತು ಖಾಸಗೀ ದೊಡ್ಡ ಮನುಷ್ಯರೂ ಕೂಡ ಈ ಚಳುವಳಿಯನ್ನು ಸಾಮೂಹಿಕ ಚಳುವಳಿ ಎಂದು ಕರೆದಿದ್ದಾರೆ. ಬೊಂಬಾಯಿನಲ್ಲಿ ನಡೆದ ಎ. ಐ. ಸಿ. ಸಿ. ಸಭೆಗೆ ಮೈಸೂರು ಕಾಂಗ್ರೆಸ್ಸಿನ ಕೆಲವು ಮುಖಂಡರು ಹೋಗಿದ್ದರು. ಶ್ರೀ ಗುಪ್ತರವರೂ ಹೋಗಿದ್ದರು. ಜನವಾಣಿಯಲ್ಲಿ ಪ್ರಕಟವಾದುವೆಂದು ಸೂಚಿಸಲ್ಪಟ್ಟಿರುವ ವರದಿಗಳು ಈ ಸಾಮೂಹಿಕ ಚಳುವಳಿಗೆ ಸಂಬಂಧಪಟ್ಟ ಘಟನೆಗಳೇ ಹೊರತು ಕೇವಲ ಸ್ಥಳೀಯ ಘಟನೆಗಳ ವರದಿಗಳಲ್ಲ.

ಶ್ರೀ ಎಲ್. ಎಸ್. ರಾಜುರವರಿಂದ ಪಾಟೀ ಸವಾಲು

ಆಪಾದಿತರ ಪರ ಅಡ್ವೋಕೇಟರಾದ ಶ್ರೀ ಎಲ್. ಎಸ್. ರಾಜುರವರು ಸಾಕ್ಷಿಯೊಡನೆ ಪಾಟೀ ಸವಾಲು ನಡೆಸಿದರು. ಕ್ರಿಮಿನಲ್ ಇಂಟಲಿಜೆನ್ಸ್ ಇಲಾಖೆಯನ್ನು ತಾವು ಸನಾ... ಎಂದು ವರ್ಷದ ಕೆಳಗೆ ಸೇರಿದುದಾಗಿ ಸಾಕ್ಷಿಯು ಹೇಳಿದರು. ಸಾಕ್ಷಿಗೆ ತಿಳಿದಂತೆ ಎ. ಐ. ಸಿ. ಸಿ. ಸಭೆಗೆ ಹೋಗಲು ಇಲ್ಲಿಯ ಯಾವ ಡಿಟೆಕ್ಟಿವ್ ಆಫೀಸರೂ ಬೊಂಬಾಯಿಗೆ ಹೋಗಿರಲಿಲ್ಲ. ಈ ಮೊಕದ್ದಮೆಯಲ್ಲಿ ತನಿಖೆ ಕ್ರಮ ನಡಸಿರುವಂತೆ ಸಾಕ್ಷಿಗೆ ಗೊತ್ತಿಲ್ಲ. ಇನ್ಸ್‌ಪೆಕ್ಟರ್ ಪುಟ್ಟಸ್ವಾಮಿಯವರು ಈ ಮೊಕದ್ದಮೆಯಲ್ಲಿ ಚಾರ್ಜ್‌ಷೀಟನ್ನು ಹೂಡಿದರೆಂದು ಸಾಕ್ಷಿಗೆ ತಿಳಿಯಿತು. ಇನ್ಸ್‌ಪೆಕ್ಟರ್ ಪುಟ್ಟಸ್ವಾಮಿಯವರಿಗೆ ಸಾಕ್ಷಿಯು ಕೋರ್ಟಿಗೆ ಕೊಟ್ಟ ದಾಖಲೆಗಳನ್ನು ಕೊಟ್ಟಿರಲಿಲ್ಲ. ಇನ್ಸ್‌ಪೆಕ್ಟರ್ ಪುಟ್ಟಸ್ವಾಮಿಯವರು ತಾವು ಚಾರ್ಜ್‌ಷೀಟನ್ನು ಹಾಜರುಪಡಿಸುವುದಕ್ಕೆ ಮುಂಚೆ ಸಾಕ್ಷಿಯನ್ನು ವಿಚಾರಣೆ ಮಾಡಿರಲಿಲ್ಲ. ಎ. ಐ. ಸಿ. ಸಿ. ಯು ಆಗಸ್ಟ್ ೮ ನೆಯ ತಾರೀಖಿನಲ್ಲಿ "ಕ್ವಿಟ್ ಇಂಡಿಯಾ" ನಿರ್ಣಯವನ್ನು ಅಂಗೀಕರಿಸಿತು.

ಶ್ರೀ ರಾಜು:-ಎ. ಐ. ಸಿ. ಸಿ. ಯ ಘಟನೆಯು ನಿಮಗೆ ಗೊತ್ತೇ?

ಸಾಕ್ಷಿ:-ಸ್ವಲ್ಪ ಗೊತ್ತು. ಮೌಲಾನಾ ಅಬುಲ್ ಕಲಾಂ ಆಜಾದರು ಅಧ್ಯಕ್ಷರು ಮತ್ತು ಪಂ|| ಜವಾಹಿರಲಾಲ್ ನೆಹರೂರವರು ಮತ್ತು ಸರದಾರ್ ವಲ್ಲಭಾಯಿ ಪಟೇಲರು ಪ್ರಮುಖ ಸದಸ್ಯರಲ್ಲೊಬ್ಬರು.

ಶ್ರೀ ರಾಜು:-ಮಹಾತ್ಮಾ ಗಾಂಧಿಯವರು ಎ. ಐ. ಸಿ. ಸಿ. ಸದಸ್ಯರೇ?

ಸಾಕ್ಷಿ:-ಅಲ್ಲ.

ಶ್ರೀ ರಾಜು:-ಎ. ಐ. ಸಿ. ಸಿ. ಗೆ ಸಂಬಂಧಿಸಿದಂತೆ ಮಹಾತ್ಮಾ ಗಾಂಧಿಯವರ ಸ್ಥಾನವೇನು?

ಸಾಕ್ಷಿ:-ಮಹಾತ್ಮಾ ಗಾಂಧಿಯವರೇ ಎ. ಐ. ಸಿ. ಸಿ. ಯ ಮತ್ತು ಕಾಂಗ್ರೆಸ್ಸಿನ ಆತ್ಮ. ಮಹಾತ್ಮಾ ಗಾಂಧಿಯವರೇ ಕಾಂಗ್ರೆಸ್ಸು ಮತ್ತು ಕಾಂಗ್ರೆಸ್ಸೇ ಮಹಾತ್ಮಾ ಗಾಂಧಿ.

ಶ್ರೀ ರಾಜು:-ದೇಶದ ಈ ಪ್ರಮುಖ ಮುಖಂಡರುಗಳಿಗೆ ಈಗ ಏನಾಗಿದೆ?

ಸಾಕ್ಷಿ:-ಅವರೆಲ್ಲರೂ ಜೈಲಿನಲ್ಲಿದ್ದಾರೆ.

ಶ್ರೀ ರಾಜು:-ಅವರನ್ನು ಜೈಲಿನಲ್ಲಿಟ್ಟಿರುವವರಾರು?

ಸಾಕ್ಷಿ:-ಬೊಂಬಾಯಿ ಸರ್ಕಾರದವರು.

ಶ್ರೀ ರಾಜು:-ಮೈಸೂರು ಸರ್ಕಾರದವರಲ್ಲವಷ್ಟೆ?

ಸಾಕ್ಷಿ:-ಅಲ್ಲ.

ದಸ್ತಗಿರಿಯಾದ ನಂತರ

ಅವರೆಲ್ಲರೂ ಆಗಸ್ಟ್ ೯ರಲ್ಲಿ ದಸ್ತಗಿರಿಯಾದರೆಂದೂ, ಇದು ಎ. ಐ. ಸಿ. ಸಿ. ಯು "ಕ್ವಿಟ್ ಇಂಡಿಯಾ" ನಿರ್ಣಯ ಮಾಡಿದಾಗಲೇ ನಡೆಯಿತೆಂದೂ, ತಾವು ಹೇಳಿದ ಘಟನೆಗಳೆಲ್ಲವೂ ಅವರ ದಸ್ತಗಿರಿಯ ಅನಂತರವೇ ನಡೆದುವೆಂದು ಸಾಕ್ಷಿಯು ಹೇಳಿದರು.

ಶ್ರೀ ರಾಜು:-ಈ ಘಟನೆಗಳೆಲ್ಲವೂ ದೇಶದ ಆ ಮುಖಂಡರ ದಸ್ತಗಿರಿಯನ್ನು ಪ್ರತಿಭಟಿಸಲು ನಡೆದುವೆಂದು ನಿಮಗೆ ತೋರಲಿಲ್ಲವೇ?

ಸಾಕ್ಷಿ:-ಇಲ್ಲ.

ಶ್ರೀ ರಾಜು:-ಈ ಘಟನೆಗಳು ದೇಶದ ಆ ಮುಖಂಡರ ದಸ್ತಗಿರಿಯನ್ನು ಪ್ರತಿಭಟಿಸಲು ಪ್ರಾಯಶಃ ನಡೆದಿರಬಹುದೆಂದಾಗಲೀ ಅಥವಾ ಈ ಘಟನೆಗಳು ದೇಶದ ಆ ಮುಖಂಡರ ದಸ್ತಗಿರಿಯನ್ನು ಪ್ರತಿಭಟಿಸಲೋಸುಗ ನಡೆದಿರಲು ಸಾಧ್ಯವಿದೆ ಎಂದಾಗಲೀ ನಿಮಗೆ ತೋರುವುದಿಲ್ಲವೇ?

ಸಾಕ್ಷಿ:-ನಾನು ಹೇಳಲಾರೆ.

"ತಾಯಿನಾಡು" ಪತ್ರಿಕೆಯು ಆಗಸ್ಟ್ ೨೦ರ ಸಂಚಿಕೆಯಲ್ಲಿ ಮಳವಳ್ಳಿ ವಿದ್ಯಾರ್ಥಿಗಳು ಮುಖಂಡರ ದಸ್ತಗಿರಿಯ ಬಗ್ಗೆ ಅಸಮ್ಮತಿಯನ್ನು ಸೂಚಿಸಿ ನಿರ್ಣಯ ಮಾಡಿದರೆಂದು ವರದಿಯಾಗಿರುವುದನ್ನು ಮತ್ತು ಅದೇ ಪತ್ರಿಕೆಯ ಆಗಸ್ಟ್ ೨೭ ರ ಸಂಚಿಕೆಯಲ್ಲಿ ಬನ್ನಿಮಿಲ್ಲಿನವರು ಮುಖಂಡರ ಬಿಡುಗಡೆಗಾಗಿ ಒತ್ತಾಯ ಮಾಡಿ ನಿರ್ಣಯ ಮಾಡಿದರೆಂದು ವರದಿಯಾಗಿರುವುದನ್ನು ಓದಿದಂತೆ ತಮಗೆ ಜ್ಞಾಪಕವಿಲ್ಲವೆಂದು ಸಾಕ್ಷಿಯು ಹೇಳಿದರು.

ವರದಿಯ ಮೂಲವನ್ನೇಕೆ ನಮೂದಿಸಬೇಕು?

ಶ್ರೀ ರಾಜು:-ವರದಿಗಳ ಮೂಲವನ್ನೇಕೆ ಪತ್ರಿಕೆಗಳಲ್ಲಿ ನಮೂದಿಸಬೇಕು?

ಸಾಕ್ಷಿ:-ಕಾನೂನು ಪ್ರಕಾರ ಬೇಕು. ಮೈಸೂರು ಸರ್ಕಾರದವರು ಡಿಫೆನ್ಸ್ ಆಫ್ ಇಂಡಿಯಾ ರೂಲ್ ೪೧ (೧) (ಬಿ) ಪ್ರಕಾರ ಹೊರಡಿಸಿದ ನೋಟಿಫಿಕೇಷನ್ನಿನ ಪ್ರಕಾರ ಈ ನಮೂದಿಸಬೇಕು.

ಈ ಡಿಫೆನ್ಸ್ ಆಫ್ ಇಂಡಿಯಾ ರೂಲ್ ಪ್ರಕಾರ ನೋಟಿಫಿಕೇಷನಿನಲ್ಲಿ ಯಾವ ಪ್ರದೇಶದಲ್ಲಿ ಜಾರಿಯಲ್ಲಿರತಕ್ಕದೆಂದು ನಮೂದಿಲ್ಲವಾದ್ದರಿಂದ, ಈ ನೋಟಿಫಿಕೇಷನ್ನು ಇಡೀ ಮೈಸೂರಿಗೆ ಅನ್ವಯಿಸುವುದೆಂದು ಸಾಕ್ಷಿಯು ಹೇಳಿದರು.

ತಮಗೆ ೩೮ ನೆಯ ನೋಟಿಫಿಕೇಷನ್ನು ಆಗಸ್ಟ್ ೧೫ರಲ್ಲಿ ತಿಳಿಯಿತೆಂದೂ, ಆ ತಾರೀಖಿನಿಂದ ಸೆಪ್ಟೆಂಬರ್ ೧೦ರೊಳಗೆ ಬೆಂಗಳೂರಿನ ಪತ್ರಿಕೆಗಳು ಸರ್ಕಾರದ ನೋಟಿಫಿಕೇಷನ್ನನ್ನು ಉಲ್ಲಂಘಿಸಿದ್ದು ತಮಗೆ ತಿಳಿಯಿತೆಂದೂ, ಆ ವಿಷಯವನ್ನು ಮೇಲಧಿಕಾರಿಗಳಿಗೆ ತಾವು ಬರೆಯಲಿಲ್ಲವೆಂದೂ ಸಾಕ್ಷಿಯು ಹೇಳಿದರು. ಸೆಪ್ಟೆಂಬರ್ ೧, ೨ ಮತ್ತು ೩ರಲ್ಲಿ ಜನವಾಣಿಯಲ್ಲಿ ಪ್ರಕಟವಾಗಿರುವ ವರದಿಗಳು ಬೆಂಗಳೂರು ಘಟನೆಗಳಿಗೆ ಸಂಬಂಧಪಟ್ಟದ್ದೆಂದೂ, ಅಂದರೆ ಜನವಾಣಿಯಲ್ಲಿ ಪ್ರಕಟವಾಗುವುದೋ ಸ್ಥಳೀಯ ಘಟನೆಗಳ ವರದಿಗಳೆಂದೂ, ಆದುದರಿಂದ ಅವು ಆ ಪತ್ರಿಕೆಗೆ ಸ್ಥಳೀಯ ಘಟನೆಗಳೆಂದೂ ಮತ್ತು ಪರಸ್ಥಳದ ಘಟನೆಗಳಲ್ಲವೆಂದೂ ಸಾಕ್ಷಿಯು ಹೇಳಿದರು.

ಸಾಮೂಹಿಕ ಚಳುವಳಿ ಮತ್ತು ಸಾಮೂಹಿಕ ಹೋರಾಟ

ಮುಂದುವರಿಯುತ್ತ ಸಾಕ್ಷಿಯು ವರ್ಕಿಂಗ್ ಕಮಿಟಿಯು ಮಾಡಿದ "ಕ್ವಿಟ್ ಇಂಡಿಯಾ"

ನಿರ್ಣಯದಲ್ಲಿ "ಸಾಮೂಹಿಕ ಚಳುವಳಿ" ಎಂಬ ಪದಗಳಿಲ್ಲವೆಂದೂ, ಆದರೆ ಎ. ಐ. ಸಿ. ಸಿ. ಯು ಮಾಡಿದ ಅದೇ ನಿರ್ಣಯದಲ್ಲಿ "ಸಾಮೂಹಿಕ ಹೋರಾಟ" ಎಂಬ ಪದಗಳಿವೆಯೆಂದೂ ಹೇಳಿದರು.

ಶ್ರೀ ರಾಜು:-ಹೋರಾಟಕ್ಕೂ ಚಳುವಳಿಗೂ ಭೇದವೇನಾದರೂ ನಿಮಗೆ ತೋರುವುದೇ?

ಸಾಕ್ಷಿ:-ಕೆಲವು ಸಂದರ್ಭಗಳಲ್ಲಿ ಎರಡೂ ಒಂದೇ. ಇನ್ನು ಕೆಲವು ಸಂದರ್ಭಗಳಲ್ಲಿ ಬೇರೆ ಬೇರೆ. ಇದು ನಾವು ಹೇಗೆ ಅರ್ಥ ಕಲ್ಪಿಸಿದರೆ ಹಾಗೆ.

ಶ್ರೀ ರಾಜು:-ಸುಮಾರು ಒಂದು ನೂರು ಜನ ಸೇರಿನಲ್ಲಿ ಸಿಕ್ಕಿಕೊಂಡು ದಡವನ್ನು ಸೇರಲು ಪ್ರಯತ್ನಿಸುತ್ತಿದ್ದರೆ, ಇದನ್ನು ಸಾಮೂಹಿಕ ಹೋರಾಟ ಅಥವ ಸಾಮೂಹಿಕ ಚಳುವಳಿ ಎನ್ನುವಿರಾ?

ಸಾಕ್ಷಿ:-ಅಷ್ಟು ಜನ ದಡವನ್ನು ಸೇರಲು ಪ್ರಯತ್ನಿಸುತ್ತಿರುವರೆನ್ನಬಹುದು. ಅದನ್ನು ಸಾಮೂಹಿಕ ಚಳುವಳಿ ಎನ್ನುವುದಿಲ್ಲ.

"ಕ್ವಿಟ್ ಇಂಡಿಯಾ"

ಶ್ರೀ ರಾಜು:-ಎ. ಐ. ಸಿ. ಸಿ. ಅಧ್ಯಕ್ಷರಾದ ಮೌಲಾನಾ ಆಜಾದರು ಅಥವಾ ಎ.ಐ.ಸಿ.ಸಿ. ಯು ಚಳುವಳಿಯನ್ನು ಜಾರಿ ಮಾಡಿದ್ದರೆಂದು ನಿಮಗೆ ಸ್ವತಃ ಗೊತ್ತೆ? ಗೊತ್ತಿದ್ದರೆ ಆದಾರವೂ ಏನೇನು?

ಸಾಕ್ಷಿ:-ಮೌಲಾನ ಆಜಾದರು ಎ.ಐ.ಸಿ.ಸಿ. ಯ ಮುಂದೆ ಮಾಡಿದ ಭಾಷಣದಲ್ಲಿ "ಕ್ವಿಟ್ ಇಂಡಿಯಾ" ಬೇಡಿಕೆಯನ್ನು ಪ್ರಸ್ತಾಪಿಸಿದ್ದಾರೆ. [illegible] "ಕ್ವಿಟ್ ಇಂಡಿಯಾ" ಘೋಷಣೆ [ಸ್ಲೋಗನ್] ಸೇರಿರುವ ಪ್ರಸ್ತಾಪ.

ಶ್ರೀ ರಾಜು:-ಮೌಲಾನ ಆಜಾದರು ಚಳುವಳಿಯ ಕಾರ್ಯಕ್ರಮಗಳೇನೆಂದು ವಿಶದವಾಗಿ ಸೂಚಿಸಿರುವರೇ?

ಸಾಕ್ಷಿ:-ಇಲ್ಲ. ಆದರೆ ಅವರು "ಕ್ವಿಟ್ ಇಂಡಿಯಾ" ಘೋಷಣೆಯನ್ನು ಪ್ರಸ್ತಾಪಿಸಿದ್ದಾರೆ.

ಶ್ರೀ ರಾಜು:-ಅವರು ಹುಡುಗರನ್ನು ಮತ್ತು ಕೆಲಸಗಾರರನ್ನು ಹಾಗೆ ಹೂಗಿ ಎಂದು ಹೇಳಿದ್ದಾರೆಯೇ?

ಸಾಕ್ಷಿ:-ಇಲ್ಲ. ಯಾರಿಗೂ ಹೇ[illegible]

ವೈಸರಾಯ್ ಭೇಟಿಗೆ ಅವಕಾಶವಿಲ್ಲ

ಮಹಾತ್ಮಾಗಾಂಧೀಯವರು ಚಳುವಳಿಯನ್ನು ಹೂಡಲು ಮುಂಚೆ ವೈಸರಾಯರನ್ನು ನೋಡುವರೆಂದು ಟೈಮ್ಸ್ ನ್ಯೂಸ್ ಪತ್ರಿಕೆಯಲ್ಲಿ ಪ್ರಕಟವಾಗಿತ್ತೆಂದೂ, ಆದರೆ ಮಹಾತ್ಮಾಗಾಂಧೀಯವರು ವೈಸರಾಯರನ್ನು ನೋಡುವುದಕ್ಕೆ ಮುಂಚೆಯೇ ದಸ್ತಗಿರಿಯಾದರೆಂದೂ ಸಾಕ್ಷಿಯು ಹೇಳಿದರು.

ಶ್ರೀ ರಾಜು:-ಮುಖಂಡರ ದಸ್ತಗಿರಿಯಾದ ಮೇಲೆ, ಕಾಂಗ್ರೆಸ್ಸಿಗೂ, ಬ್ರಿಟಿಷ್ ಸರ್ಕಾರಕ್ಕೂ ಸಂಬಂಧ [illegible]ಗೊಳ[illegible]ಲಿಲ್ಲವಷ್ಟೆ?

ಪಬ್ಲಿಕ್ ಪ್ರಾಸಿಕ್ಯೂಟರ್:-ನಾವು ಕಾಂಗ್ರೆಸ್ಸನ್ನು ವಿಚಾರಣೆಗೆ ಗುರಿ[illegible]ಲ್ಲ.

ಶ್ರೀ ರಾಜು:-[illegible]

"ನಾನು ಹೇಳಲಾರೆ" ಎಂದು ಸಾಕ್ಷಿಯು ಶ್ರೀ ರಾಜುರವರ ಪ್ರಶ್ನೆಗೆ ಉತ್ತರವಿತ್ತರು.

ಶ್ರೀ ರಾಜು:-ಮುಖಂಡರ ದಸ್ತಗಿರಿಯಾಗಬೇಕೆಂದು ಮೊದ್ಲೆ [illegible] ಗೊತ್ತೆ?

ಸಾಕ್ಷಿ:-[illegible] ಇದ್ದ[illegible].

ಶ್ರೀ ರಾಜು:-[illegible] ದಲ್ಲಿ [illegible] ದರೂ ದಾಖಲೆಗಳು ಪ್ರಕಟಣೆಯಾಗಿವೆಯೇ?

ಸಾಕ್ಷಿ:-ನನಗೆ [illegible] ಗೊತ್ತಿಲ್ಲ.

[illegible] ಮತ್ತು [illegible] ಕಾಂಗ್ರೆಸ್ [illegible]

[illegible] ಲ್ಲವೆಂದು ಸಾಕ್ಷಿಯು ಹೇಳಿದರು. [illegible]

[illegible] ಸಾಕ್ಷಿಯು ಹೇಳಿದರು. [illegible] ತಾವು ಒಂದು ಪತ್ರ[illegible] ದ್ದಾಗ ನೋಡಿದರೆಂದು ಸಾಕ್ಷಿಯು ಹೇಳಿದರು.

ಶ್ರೀ ರಾಜು:-ಯಾರಾದರೂ ಇದನ್ನು [illegible] ಗಾಗಿ ಮಾಡಿರುವುದಿಲ್ಲವೇ?

ಸಾಕ್ಷಿ:-ನಾನು ಹೇಳಲಾರೆ.

ಶ್ರೀ ರಾಜು:-[illegible] ದೂ ಮಾಡಿರುವುದಿಲ್ಲವೇ?

ಸಾಕ್ಷಿ:-ಅದನ್ನು ನಾನು ಹೇಳಲಾರೆ.

ಅನೆರಿ ಮತ್ತು ಮ್ಯಾಕ್ಸ್‌ವೆಲ್ಲರ ಹೇಳಿಕೆ

ಪಬ್ಲಿಕ್ ಪ್ರಾಸಿಕ್ಯೂಟರು ಪುನಃ ವಿಚಾರಣೆ ನಡೆಸಿದಾಗ, ಸಾಕ್ಷಿಯು [illegible] ಸರ್ ರೆಜಿನಾಲ್ಡ್ ಮ್ಯಾಕ್ಸ್‌ವೆಲ್ ಮತ್ತು ಸರ್ [illegible] ಮ್ಯಾಡ್ ಉಸ್ಮಾನರು ಈ ಚಳುವಳಿಯನ್ನು ಎ. ಐ.ಸಿ.ಸಿ. ಯು ಹೂಡಿರುವ ಸಾಮೂಹಿಕ ಚಳುವಳಿ ಎಂದು ಕರೆದಿರುವರೆಂದು ಹೇಳಿದರು.

ಶ್ರೀ ರಾಜುರವರು ಪುನಃ ಪಾಟೀಸವಾಲು ನಡೆಸಿದಾಗ, ಸಾಕ್ಷಿಯು ಆ ಮಹನೀಯರ್ಯಾರನ್ನೂ ತಾವು ಸ್ವತಃ ಬಲ್ಲರಲ್ಲವೆಂದರು.

ಶ್ರೀ ರಾಜು:-ಅವರಿಗೆ ಭಾರತೀಯರ ಆಕಾಂಕ್ಷೆಗಳ ಬಗ್ಗೆ ಏನು ಸಹಾನುಭೂತಿಯೂ ಇಲ್ಲವೆಂಬುದು ನಿಮಗೆ ಗೊತ್ತೇ?

ಸಾಕ್ಷಿ:-ಇಲ್ಲ.

ಪಬ್ಲಿಕ್ ಪ್ರಾಸಿಕ್ಯೂಟರ್:-ಯುದ್ಧ ಮುಗಿದ ಮೇಲೆ ಸ್ವಲ್ಪ ಕೊಡುತ್ತೇವಾಗಿ ಹೇಳಿದ್ದಾರೆ.

ಶ್ರೀ ರಾಜು:-ಮುಖಂಡರ ದಸ್ತಗಿರಿಗೆ ಸರ್ ರೆಜಿನಾಲ್ಡ್ ಮ್ಯಾಕ್ಸ್‌ವೆಲ್ಲರು ಕೂಡ ಜವಾಬ್ದಾರರೆಂಬುದು ಗೊತ್ತೇ?

ಸಾಕ್ಷಿ:-ನಾನು ಹೇಳಲಾರೆ. ಜೊತೆಯಾಗಿ ಸರ್ಕಾರದವರು ಅವರ ದಸ್ತಗಿರಿಗೆ ಜವಾಬ್ದಾರರು.

ಶ್ರೀ ರಾಜು:-ಶ್ರೀ ಮಾಳವೀಯರು ಮತ್ತು ಶ್ರೀ ಸಿ. ರಾಜಗೋಪಾಲಾಚಾರಿಯವರು ಇತ್ತೀಚೆಗೆ ಕೊಟ್ಟಿರುವ ಹೇಳಿಕೆಗಳನ್ನು ನೋಡಿದ್ದೀರಾ?

ಸಾಕ್ಷಿ:-ನೋಡಿದ್ದೇನೆ.

ಶ್ರೀ ರಾಜು:-ಈ ಹಿಂಸಾತ್ಮಕ ಘಟನೆಗಳಿಗೂ ಕಾಂಗ್ರೆಸ್ಸಿಗೂ ಸಂಬಂಧವಿಲ್ಲವೆಂದು ಅವರು ಹೇಳಿದ್ದಾರೆ. ಹಾಗೆ ಹೇಳಿದ್ದಾರೋ?

ಸಾಕ್ಷಿ:-ಇಲ್ಲ.

ಪಬ್ಲಿಕ್ ಪ್ರಾಸಿಕ್ಯೂಟರ್:-[illegible] ಸರಕಾರದವರು ಆಗಸ್ಟ್ [illegible] ಹೊರಡಿಸಿದ ಪ್ರಕಟಣೆಯಲ್ಲಿ ಕಾಂಗ್ರೆಸ್ಸೇ ಈ ಘಟನೆಗಳಿಗೆ ಜವಾಬ್ದಾರಿಯೆಂದು ಹೇಳಿದ್ದಾರೆ.

ಶ್ರೀ ರಾಜು:-ಪತ್ರಿಕಾ ಪ್ರಕಟಣೆಯು ಸಾಕ್ಷಿಯಲ್ಲ. ಹಾಗೆಯೇ ಇಂಡಿಯಾ ಸರ್ಕಾರದವರ ಅಭಿಪ್ರಾಯವೂ ಸಾಕ್ಷ್ಯವಲ್ಲ. ಅವರು ಕಾಂಗ್ರೆಸ್ಸನ್ನು ದ್ವೇಷಿಸುವರು ಮತ್ತು ಅದನ್ನು ಅಲ್ಲಗಳೆಯುವರು. ಅವರ ಅನು ಶಾಸನ ಬದ್ಧ "ಸ್ಟ್ರಾಫ್" ಆಗುವುದಿಲ್ಲ.

ಸಾಕ್ಷಿಯ ಸಾಕ್ಷ್ಯವು ಮುಗಿದ ನಂತರ, ಮೊಕದ್ದಮೆಯನ್ನು ಅಕ್ಟೋಬರ್ [illegible]ಕ್ಕೆ ಮುಂದೂಡಲಾಯಿತು.

ಶ್ರೀ ಎಲ್. ಎಸ್. ರಾಜುರವರು ಶ್ರೀಗಳಾದ ಜಿ. ಆರ್. ಎತಿರಾಜುಲು ನಾಯಡು, ಜಿ.ಆರ್. ದೊರೆಸ್ವಾಮಿ ಮತ್ತು ವೆಂಕಟನರಸಿಂಹರವರ ಸಹಾಯದೊಡನೆ ಆಪಾದಿತರ ಪರ ವಕಾಲತ್ತು ನಡೆಸಿರುವರು. ಪಬ್ಲಿಕ್ ಪ್ರಾಸಿಕ್ಯೂಟರಾದ ಶ್ರೀ ಜಿ. ಆರ್. ದೊರೆಸ್ವಾಮಯ್ಯಂಗಾರ್‌ರವರು ಸರಕಾರದ ಪರ ವಕಾಲತ್ತು ನಡೆಸಿರುವರು.

ಸಬ್ ಇನ್ಸ್‌ಪೆಕ್ಟರ ಸಾಕ್ಷ್ಯ

ಶ್ರೀ ಪಿ. ಬಿ. ಶ್ರೀನಿವಾಸ್‌ರವರ ಮೇಲಿನ ಮೊಕದ್ದಮೆಯಲ್ಲಿ

ಕಾಂಗ್ರೆಸ್ ಎಂಬ ಪದಕ್ಕೆ ಅರ್ಥ ವಿವರಣೆ

"ಸರ್ಕಾರವನ್ನು ವಿರೋಧಿಸುವುದೇ ಕಾಂಗ್ರೆಸಿನ ಸ್ವಭಾವ"

[ತಾ ೦ ಬಾ] ಬೆಂಗಳೂರು ಅ ೭

"ತಾಯಿನಾಡು ಸಂಪಾದಕರಾಗಿದ್ದಾಗ ಶ್ರೀ ಪಿ.ಬಿ.ಶ್ರೀನಿವಾಸನ್‌ರವರು ಮೈಸೂರು ಸರ್ಕಾರದವರು ಕಳೆದ ಆಗಸ್ಟ್ ೧೦ರಲ್ಲಿ ಡಿಫೆನ್ಸ್ ಆಫ್ ಇಂಡಿಯ ರೂಲ್ ೪೧ (೧) (ಬಿ) ಪ್ರಕಾರ ಹೊರಡಿಸಿದ ನೋಟಿಫಿಕೇಷನನ್ನು ಉಲ್ಲಂಘಿಸಿದರೆಂದು ಅವರ ಮೇಲೆ ಹೂಡಲಾಗಿರುವ ಮೊಕದ್ದಮೆಯಲ್ಲಿ ಸಿಟಿ ಮ್ಯಾಜಿಸ್ಟ್ರೇಟರಾದ ಶ್ರೀ ಪಿ. ರಾಮಚಂದ್ರರಾಯರ ಮುಂದೆ ಮಲ್ಲೇಶ್ವರಂ ಪೋಲೀಸ್ ಸ್ಟೇಷನ್ನಿಗೆ ಸೇರಿದ ಸಬ್ ಇನ್ಸ್‌ಪೆಕ್ಟರ್ ಜಿ.ನರಸಿಂಹಮೂರ್ತಿಯವರನ್ನು ಪ್ರಾಸಿಕ್ಯೂಷನ್ನಿನ ಕಡೆ ಮೊದಲನೆ ಸಾಕ್ಷಿಯಾಗಿ ನಿನ್ನೆ ಮಧ್ಯಾಹ್ನ ವಿಚಾರಣೆ ನಡೆಸಲಾಯಿತು.

ಕೋರ್ಟ್ ಹಾಲು ಪತ್ರಿಕೋದ್ಯೋಗಿಗಳಿಂದಲೂ, ಲಾಯರುಗಳಿಂದಲೂ, ಇತರರಿಂದಲೂ ತುಂಬಿತ್ತು.

ಶ್ರೀ ಪಿ. ಬಿ. ಶ್ರೀನಿವಾಸ್‌ರವರು ಕುರ್ಚಿಯ ಮೇಲೆ ಕುಳಿತಿದ್ದರು.

ಶ್ರೀ ನರಸಿಂಹಮೂರ್ತಿಯವರ ಸಾಕ್ಷ್ಯವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ, ಪಬ್ಲಿಕ್ ಪ್ರಾಸಿಕ್ಯೂಟರಾದ ಶ್ರೀ ಜಿ. ಎಸ್. ಮೊರಿಸ್ ಮಹಮ್ಮದ್‌ರವರು ಹಿಂದಿನ ಸಾಕ್ಷ್ಯವಿತ್ತ ಸಿ. ಐ. ಡಿ. ಇನ್ಸ್‌ಪೆಕ್ಟರ್ ಗುಂಡೂರಾವ್ ಅಂತಹ ಕೆಲವು ಸಾಕ್ಷಿಗಳು ಎಲ್ಲಾ ನಾಲ್ಕು ಮೊಕದ್ದಮೆಗಳಲ್ಲಿಯೂ ಪ್ರಾಸಿಕ್ಯೂಷನ್ ಪರ ಸಾಕ್ಷ್ಯವೀಯಬೇಕಾಗುವುದೆಂದೂ, ಶ್ರೀ ಗುಂಡೂರಾಯರು ಈಗಾಗಲೇ ಒಂದು ಮೊಕದ್ದಮೆಯಲ್ಲಿ ದೀರ್ಘವಾಗಿ ವಿಚಾರಣೆ ನಡೆಸಲ್ಪಟ್ಟಿರುವುದರಿಂದ, ಅವರನ್ನು ಅಷ್ಟೇ ದೀರ್ಘವಾಗಿ ಉಳಿದ ಮೊಕದ್ದಮೆಗಳಲ್ಲಿಯೂ ವಿಚಾರಣೆ ನಡೆಸಲ್ಪಡಬೇಕಾಗಿಲ್ಲವೆಂದೂ, ಅವರು ಕೊಟ್ಟಿರುವ ಸಾಕ್ಷ್ಯವನ್ನು ಉಳಿದ ಮೊಕದ್ದಮೆಗಳಲ್ಲಿ ಸೂಚಿತವಾಗಿರುವ ಪತ್ರಿಕೆಗಳ ವರದಿಗಳ ಬಗ್ಗೆ ವಿವರಣೆ ಮಾಡಿಸಿಕೊಂಡರೆ ಸಾಕೆಂದೂ ಹೇಳಿದರು. ತಾವು ಅದೇ ರೀತಿ ಮಾಡುವುದಾಗಿ ಅವರು ಹೇಳಿದರು.

ಆಪಾದಿತರ ಪರ ಅಡ್ವೋಕೇಟರಾದ ಶ್ರೀ ಎಲ್. ಎಸ್. ರಾಜುರವರು ಈ ಸಲಹೆಯನ್ನು ಒಪ್ಪಿಕೊಂಡರು ಮತ್ತು ಪಾಟೀ ಸವಾಲಿನಲ್ಲಿ ಹಿಂದಿನ ಮೊಕದ್ದಮೆಯ ಪಾಟೀ ಸವಾಲಿನಲ್ಲಿ ಹೇಳಲಾದ ವಿಷಯಗಳನ್ನು ಗಮನಿಸಿಕೊಂಡು ಅಗತ್ಯವಾದ ಪ್ರಶ್ನೆಗಳನ್ನು ಮಾತ್ರ ಉಳಿದ ಮೊಕದ್ದಮೆಗಳಲ್ಲಿ ಹಾಕುವುದಾಗಿ ಹೇಳಿದರು.

ಶ್ರೀ ನರಸಿಂಹಮೂರ್ತಿಯವರ ಸಾಕ್ಷ್ಯ

ಪಬ್ಲಿಕ್ ಪ್ರಾಸಿಕ್ಯೂಟರ ಪ್ರಶ್ನೆಗಳಿಗೆ ಉತ್ತರವೀಯುತ್ತ, ಸಾಕ್ಷಿಯಾದ ಶ್ರೀ ನರಸಿಂಹಮೂರ್ತಿಯವರು ಕಳೆದ ಆಗಸ್ಟ್ ೧೦ ರಿಂದ ಮಲ್ಲೇಶ್ವರಂನಲ್ಲಿ ಕಾಂಗ್ರೆಸ್ ಚಟುವಟಿಕೆಗೆ ಸಂಬಂಧಿಸಿದ ಹಲವು ಘಟನೆಗಳು ನಡೆದುವೆಂದು ಹೇಳಿದರು. ವಿದ್ಯಾರ್ಥಿಗಳ ಮತ್ತು ಗಿರಣಿಕೆಲಸಗಾರರ ಹಲವು ಮೆರವಣಿಗೆಗಳು ನಡೆದವು. ಅವರುಗಳು ಮಹಾತ್ಮಾ ಗಾಂಧಿ, ಪಂಡಿತ ಜವಾಹರಲಾಲ್ ನೆಹರು, ಮಹಾತ್ಮರವರ ಫೋಟೋಗಳನ್ನು, ಕಾಂಗ್ರೆಸ್ ಬಾವುಟಗಳನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗುತ್ತಿದ್ದರು.

ಮ್ಯಾಜಿಸ್ಟ್ರೇಟರು:-ಅವರನ್ನು ಮಹಾತ್ಮಾ ಗಾಂಧಿ ಎಂದು ಏತಕ್ಕೆ ಕರೆಯಬಾರದು? ಅನೇಕರು ಅವರು ಹಾಗೆ ಕರೆಯುತ್ತಿರುವಾಗ ನೀವೇಕೆ ಹಾಗೆಯೇ ಕರೆಯಬಾರದು?

ಸಾಕ್ಷಿ:-ನನ್ನ ಆಕ್ಷೇಪಣೆಯೇನೂ ಇಲ್ಲ. ಅವರನ್ನು ಮಹಾತ್ಮಾ ಗಾಂಧಿ ಎಂದೇ ಹೇಳುತ್ತೇನೆ.

ಶ್ರೀ ರಾಜು:-ಪೋಲೀಸ್ ಆಫೀಸರೇ ಅವರನ್ನು ಮಹಾತ್ಮಾ ಗಾಂಧಿ ಎಂದರೆ ಬಹಳ ಸಂತೋಷವೇ.

ಪಬ್ಲಿಕ್ ಪ್ರಾಸಿಕ್ಯೂಟರ್:-ಗಾಂಧಿ ಎಂದರೆ ಸಾಕು. ಮೊತ್ತವನ್ನು ಮಿಸ್ಟರ್ ಎಂದು ಕೂಡ ಹೇಳದೆ ಕೇವಲ ಅವರ ಹೆಸರನ್ನೇ ಕೂಗುವುದುಂಟು.

'ಚಳುವಳಿ'ಗೆ ಸೇರಿದ ಘಟನೆಗಳು

ಮುಂದುವರಿಯುತ್ತ, ಸಾಕ್ಷಿಯು ಕೆಲವು ಸಾರಿ ಮೆರವಣಿಗೆಗಾರರು "ಬ್ರಿಟಿಷರ್ಸ್ ಕ್ವಿಟ್ ಇಂಡಿಯಾ" ಮುಂತಾದುವುಗಳನ್ನೊಳಗೊಂಡ ಪೋಸ್ಟರುಗಳನ್ನು ಕೊಂಡೊಯ್ಯುತ್ತಿದ್ದರೆಂದರು. ಒಂದು ಸಲ ಮೆರವಣಿಗೆಯಲ್ಲಿ ರಷ್ಯ ಧ್ವಜವಿತ್ತು. ಮೆರವಣಿಗೆಗಾರರು "ಕಾಂಗ್ರೆಸ್-ಕಿ-ಜೈ", "ಮಹಾತ್ಮಾ ಗಾಂಧೀ-ಕಿ-ಜೈ", "ಪಂಡಿತ ಜವಾಹಿರಲಾಲ್ ನೆಹರೂ-ಕಿ-ಜೈ", "ಬ್ರಿಟಿಷರ್ಸ್ ಕ್ವಿಟ್ ಇಂಡಿಯಾ", "ಪೋಲೀಸ್ ರಿಸೈನ್" ಎಂದು ಮುಂತಾಗಿ ಕೂಗುತ್ತಿದ್ದರು. ಸಭೆಗಳು ನಡೆದು ಜನರನ್ನು ಬಡ ಮೇಲು ಮಾಡುವ ಕಾರ್ಯದಲ್ಲಿ ತೊಡಗಬೇಕೆಂದು ಹೇಳಲಾಗುತ್ತಿತ್ತು. ಈ ಸಭೆಗಳೆಲ್ಲವೂ ಜಿಲ್ಲಾ ಮ್ಯಾಜಿಸ್ಟ್ರೇಟ್ ಆಜ್ಞೆಯನ್ನು ಉಲ್ಲಂಘಿಸುವುದಕ್ಕಾಗಿಯೇ ನಡೆದುವು. ಮಲ್ಲೇಶ್ವರದಲ್ಲಿ ಸುಮಾರು ಪ್ರತಿದಿನವೂ ವಿದ್ಯಾರ್ಥಿಗಳ ಪಿಕೆಟಿಂಗ್ ನಡೆಯುತ್ತಿತ್ತು. ಒಂದು ದಿನ ಮಿಲ್ ಕೆಲಸಗಾರರೂ ಪಿಕೆಟಿಂಗನ್ನು ನಡೆಸಿದರು. ಪರೀಕ್ಷೆಗೆ ಕುಳಿತಿದ್ದ ಮತ್ತು ತರಗತಿಗಳಲ್ಲಿದ್ದ ವಿದ್ಯಾರ್ಥಿಗಳನ್ನು ಹೊರಕ್ಕೆ ಪಿಕೆಟರುಗಳು ಕರೆದು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಶಾಲೆಯ ಸಾಮಾನನ್ನು ಒಡೆಯಲಾಯಿತು. ಶ್ರೀರಾಮಪುರದ ಒಂದು ಪೋಸ್ಟ್ ಬಾಕ್ಸನ್ನು ಕಿತ್ತುಹಾಕಲಾಗಿತ್ತು. ಶೇಷಾದ್ರಿಪುರಂ ಪೋಸ್ಟ್ ಆಫೀಸ್ ಮುಂದೆ ಎರಡು ಪೋಸ್ಟರುಗಳನ್ನು ಅಂಟಿಸಿ, ಪೋಸ್ಟ್ ಆಫೀಸಿಗೆ ಅಪಾಯವಾಗುವುದೆಂದು ಸೂಚಿಸಲಾಗಿತ್ತು. ಒಂದು ಸಲ ಒಬ್ಬ ಮಿಲ್ ಕೆಲಸಗಾರನು ಒಂದು ಟೆಲಿಫೋನ್ ಕಂಬವನ್ನು ಕೊಡಲಿಯಿಂದ ಕತ್ತರಿಸುತ್ತಿದ್ದುದನ್ನು ಸಾಕ್ಷಿಯೇ ನೋಡಿದರು. ಒಂದು ಸಲ ವಿದ್ಯಾರ್ಥಿಗಳು ಅಂಗಡಿಗಳ ಮುಂದೆ ಬಂದು ಅಂಗಡಿಗಳನ್ನು ಮುಚ್ಚುವಂತೆ ಕೂಗುತ್ತಿದ್ದರು ಮತ್ತು ಅಂಗಡಿಗಳನ್ನು ಮುಚ್ಚಿಸಿದರು. ಇನ್ನೊಂದು ಸಲ ಮಿಲ್ ಕೆಲಸಗಾರರು ಒಂದು ಅಂಗಡಿಯಲ್ಲಿದ್ದ ಬಾಳೆಯಹಣ್ಣು, ತೆಂಗಿನಕಾಯಿ ಮತ್ತು ಸೋಡ ವಾಟರ್ ಸೀಸೆಗಳನ್ನು ಹಾಳು ಮಾಡಿದ್ದರು. ವಿದ್ಯಾರ್ಥಿಗಳು ಟಿಕೆಟ್ಟಿಲ್ಲದೆ ಬಸ್ಸುಗಳಲ್ಲಿ ಪ್ರಯಾಣ ಮಾಡಿದರು ಮತ್ತು ಮಿಲ್ ಕೆಲಸಗಾರರು ಬಸ್ಸುಗಳನ್ನು ಓಡಾಡದಂತೆ ತಡೆದರು. ಮಿಲ್ ಕೆಲಸಗಾರರು ಮಿಲ್ಲುಗಳಿಗೆ ಹೋಗಿ ಒಳಗಿದ್ದ ಕೆಲಸಗಾರರನ್ನೂ ಹೊರಕ್ಕೆ ಕರೆತಂದು ಮುಷ್ಕರವನ್ನು ನಡೆಸಿದರು. ಮಿಲ್‌ಗಳ ಮುಂದೆ ಪಿಕೆಟಿಂಗು ನಡೆಯಿತು. ಈ ರೀತಿಯ ಘಟನೆಗಳು ಆಗಸ್ಟ್ ೧೦ರಿಂದ ಸೆಪ್ಟೆಂಬರ್ ೧೫ರವರೆಗೆ ದಿನವೂ ನಡೆಯುತ್ತಿದ್ದುವು. ಈ ಘಟನೆಗಳೆಲ್ಲವೂ ಕಾಂಗ್ರೆಸ್ ಚಳುವಳಿಗೆ ಸೇರಿದ್ದು. ಮಲ್ಲೇಶ್ವರಂನಲ್ಲಿ ನಡೆದ ಕೆಲವು ಘಟನೆಗಳ ವರದಿಯು "ತಾಯಿನಾಡು"ವಿನ ಸೆಪ್ಟೆಂಬರ್ ೨, ೩

ಮತ್ತು ೭ ರ ಸಂಚಿಕೆಗಳಲ್ಲಿ ಪ್ರಕಟವಾಗಿದೆ.

ಶ್ರೀ ರಾಜುರವರ ಪಾಟೀಸವಾಲು

ಆಪಾದಿತರ ಪರ ಅಡ್ವೋಕೇಟರಾದ ಶ್ರೀ ಎಲ್. ಎಸ್. ರಾಜುರವರು ಘಟನೆಗಳ ಸ್ವರೂಪವನ್ನೇ ಪ್ರಾಸಿಕ್ಯೂಷನ್ನು ವಿಮರ್ಶಿಸಲು ತೊಡಗಿರುವಂತೆ ಕಾಣುತ್ತಿದೆಯೆಂದೂ, ಆದುದರಿಂದ ಪಾಟೀಸವಾಲು ಹೆಚ್ಚಾಗಬಹುದೆಂದೂ ಹೇಳಿ ಸಾಕ್ಷಿಯೊಡನೆ ಪಾಟೀಸವಾಲನ್ನು ಆರಂಭಿಸಿದರು.

ಸಾಕ್ಷಿಯು ತಾವು ೧೯೩೫ ರಿಂದಲೂ ಪೋಲೀಸ್ ಸಬ್ ಇನ್ಸ್‌ಪೆಕ್ಟರೆಂದರು. ಪಬ್ಲಿಕ್ ಪ್ರಾಸಿಕ್ಯೂಟರ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ತಾವು ಬರೆದಿಟ್ಟುಕೊಂಡಿದ್ದ ನೋಟ್ಸನ್ನು ನೋಡಿದ್ದುಂಟೆಂದು ಅವರು ಒಪ್ಪಿಕೊಂಡರು. ಆ ನೋಟ್ಸನ್ನು ಈ ಸಾಕ್ಷ್ಯಕ್ಕೋಸ್ಕರ ಸಿದ್ಧಮಾಡಿಲ್ಲವೆಂದೂ, ತಮಗೋಸ್ಕರ ಮಾಡಿಕೊಂಡರೆಂದೂ ಹೇಳಿದರು.

ಶ್ರೀ ರಾಜು:-ಈ ಮೊಕದ್ದಮೆಯಲ್ಲಿ ಹೂಡಲಾಗಿರುವ ಚಾರ್ಜ್‌ಷೀಟಿನ ವಿಚಾರ ಗೊತ್ತೇ?

ಸಾಕ್ಷಿ:-ಗೊತ್ತು. "ಸಿ" ಡಿವಿಜನ್ ಇನ್ಸ್‌ಪೆಕ್ಟರವರಾದ ಶ್ರೀ ಪುಟ್ಟಸ್ವಾಮಿಯವರು ಇದನ್ನು ಹಾಕಿದರೆಂದು ತಿಳಿದೆ. ಸುಮಾರು ೧೦ ದಿನಗಳ ಹಿಂದೆ ನನಗೆ ಸಮನ್ಸ್ ಬಂದಾಗ ಇದು ತಿಳಿಯಿತು.

ಶ್ರೀ ರಾಜು:-ಆ ದಿನಕ್ಕೆ ಮುಂಚೆ ನಿಮಗೆ ತಿಳಿದಿರಲೇ ಇಲ್ಲವೇ?

ಸಾಕ್ಷಿ:-ತಿಳಿದಿತ್ತು, ಪತ್ರಿಕೆಗಳ ಮೂಲಕ.

ಶ್ರೀ ರಾಜು:-ಯಾವುದಾದರೂ ದಾಖಲೆಗಳನ್ನು ತರಬೇಕೆಂದು ನಿಮಗೆ ತಿಳಿಸಲಾಗಿತ್ತೇ?

ಸಾಕ್ಷಿ:-ಇಲ್ಲ.

ಶ್ರೀ ರಾಜು:-ಚಾರ್ಜ್‌ಷೀಟನ್ನು ಹಾಕುವುದಕ್ಕೆ ಮುಂಚೆ ಇನ್ವೆಸ್ಟಿಗೇಟಿಂಗ್ ಆಫೀಸರು ನಿಮ್ಮನ್ನು ಯಾವಾಗಲಾದರೂ ವಿಚಾರಣೆ ಮಾಡಿದ್ದರೋ?

ಸಾಕ್ಷಿಯು ಮಲ್ಲೇಶ್ವರಂ ಘಟನೆಗಳ ಬಗ್ಗೆ ಆಗಾಗ "ಸಿ" ಡಿವಿಜನ್ ಪೋಲೀಸ್ ಅಧಿಕಾರಿಗಳಿಗೆ ತಿಳಿಸುತ್ತಿದ್ದರೆಂದೂ, ಈ ಅಧಿಕಾರಿಗಳ ಪೈಕಿ ಇನ್ಸ್‌ಪೆಕ್ಟರ್ ಪುಟ್ಟಸ್ವಾಮಿ ಮತ್ತು ಸಬ್ ಇನ್ಸ್‌ಪೆಕ್ಟರ್ ಹರ್ಷಅಲಿಯವರೂ ಸೇರಿರುವರೆಂದೂ ಹೇಳಿದರು.

ಶ್ರೀ ರಾಜು:-ಆಗಾಗ ನಡೆಯುತ್ತಿದ್ದ ಘಟನೆಗಳ ಬಗ್ಗೆ ಕೇಳಿದಾಗ ತಿಳಿಸುತ್ತಿದ್ದಿರಾ? ಸಾಕ್ಷಿ:-ಹೌದು.

ಶ್ರೀ ರಾಜು:-ಮೆರವಣಿಗೆಯಲ್ಲಿ ಮಹಾತ್ಮಾ ಗಾಂಧಿ, ಪಂಡಿತ ಜವಾಹರಲಾಲ್ ನೆಹರೂ ಮುಂತಾದ ಮುಖಂಡರ ಫೋಟೋಗಳನ್ನು ತೆಗೆದುಕೊಂಡು ಹೋಗಲಾಗುತ್ತಿತ್ತೆಂದು ಹೇಳಿದಿರಿ. ಅದು ಮಹತ್ವ ಘಟನೆಯೋ? ಸಾಕ್ಷಿ:-ಅಲ್ಲ.

ರಷ್ಯನ್ ಧ್ವಜದ ಮಹತ್ವ

ಶ್ರೀ ರಾಜು:-ಮೆರವಣಿಗೆಯಲ್ಲಿ ರಷ್ಯನ್ ಧ್ವಜವನ್ನು ತೆಗೆದುಕೊಂಡು ಹೋದರೆ ಅದು ಮಹತ್ವವಾದ ಘಟನೆಯೋ? ಸಾಕ್ಷಿ:-ಹೌದು, ಕೆಲವು ಸಂದರ್ಭಗಳಲ್ಲಿ.

ಶ್ರೀ ರಾಜು:-ಆಗಸ್ಟ್ ೧೫ರ ಅನಂತರ ರಷ್ಯನ್ ಧ್ವಜವನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿದ್ದರೆ, ಅದು ಮಹತ್ವವಾದ ಘಟನೆಯೋ? ಸಾಕ್ಷಿ:-ಹೌದು. ಆ ದಿನಕ್ಕೆ ಹಿಂದೆ ಆಗಿದ್ದರೆ ಅಲ್ಲ.

ಶ್ರೀ ರಾಜು:-ಕಾಂಗ್ರೆಸ್ ಧ್ವಜವನ್ನು ಹಾಗೆ ತೆಗೆದುಕೊಂಡು ಹೋಗಿದ್ದರೆ? ಸಾಕ್ಷಿ:-ಕಾಂಗ್ರೆಸ್ ಸಂಸ್ಥೆಯನ್ನು ಸರ್ಕಾರವು ಅಕ್ರಮಕೂಟವನ್ನಾಗಿ ಮಾಡಿದ ಮೇಲೆ ಆಗಿದ್ದರೆ ಹೌದು.

ಶ್ರೀ ರಾಜು:-ಕಾಂಗ್ರೆಸ್ಸನ್ನು ಯಾವಾಗ ಅಕ್ರಮಕೂಟವೆಂದು ಸರ್ಕಾರವು ಪ್ರಕಟಿಸಿತು?

ಸಾಕ್ಷಿ:-ಸುಮಾರು ಒಂದೂವರೆ ತಿಂಗಳ ಹಿಂದೆ ನನಗೆ ತಿಳಿಯಿತು.

ಸರ್ಕಾರದ ಪ್ರಕಟಣೆಯನ್ನು ತಾವು ನೋಡಿಲ್ಲವೆಂದೂ, ಅದರ [illegible] ಕೇಳಿರೆಂದೂ, ಹಾಗೆ ಹೇಳಿದವರಲ್ಲಿ ಯಾರಾದರೂ ಜವಾಬ್ದಾರಿಯುಳ್ಳವರೇ ಎಂಬುದು ತಮಗೆ ಜ್ಞಾಪಕವಿಲ್ಲವೆಂದೂ ಸಾಕ್ಷಿಯು ಹೇಳಿದರು.

ಶ್ರೀ ರಾಜು:-ಯೂನಿಯನ್ ಜಾಕನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋದರೆ, ಅದು ಮಹತ್ವವಾದ ಘಟನೆಯೋ? ಸಾಕ್ಷಿ:-ಇಲ್ಲ.

ಶ್ರೀ ರಾಜು:-ಅದು ಕ್ರೆಸೆಂಟ್ ಧ್ವಜವಾದರೆ? ಸಾಕ್ಷಿ:-ಇಲ್ಲ.

ಶ್ರೀ ರಾಜು:-ರಷ್ಯನ್ ಧ್ವಜವಾಗಿದ್ದರೆ ಏತಕ್ಕೆ ಮಹತ್ವ ಘಟನೆಯೆಂದು ನೀವು ತಿಳಿಯುತ್ತೀರಿ?

ಸಾಕ್ಷಿ:-ಆ ಧ್ವಜವು ರಷ್ಯನ್ ಕ್ರಾಂತಿಗೆ ಸಂಬಂಧಿಸಿದ್ದು.

ಶ್ರೀ ರಾಜು:-ಇದು ಯಾವಾಗಿನಿಂದ ಗೊತ್ತಿದೆ? ಸಾಕ್ಷಿ:-ಕೆಲವು ವರ್ಷಗಳಿಂದ.

ಶ್ರೀ ರಾಜು:-ಈ ಧ್ವಜವನ್ನು ಆಗಸ್ಟ್ ೧೫ರ ಹಿಂದೆ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿದ್ದರೂ ಕೂಡ, ನಿಮಗೆ ರಷ್ಯನ್ ಕ್ರಾಂತಿಯು ಜ್ಞಾಪಕಕ್ಕೆ ಬಂದು, ಈ ಘಟನೆಯನ್ನು ಮಹತ್ವವೆಂದು ತಿಳಿಯುತ್ತಿದ್ದರಲ್ಲವೇ? ಸಾಕ್ಷಿ:-ಹೌದು.

ಶ್ರೀ ರಾಜು:-ರಷ್ಯನರು ಈ ಧ್ವಜವನ್ನು ಪೂಜಿಸುವರೆಂದು ನಿಮಗೆ ತಿಳಿದಿದೆಯೇ? ಸಾಕ್ಷಿ:-ಇಲ್ಲ.

ಶ್ರೀ ರಾಜು:-ರಷ್ಯವು ಈಗ ಯುನೈಟೆಡ್ ನೇಷನ್ಸ್ ಜೊತೆಗೆ ಸೇರಿಕೊಂಡು ಆಕ್ಸಿಸ್ ರಾಷ್ಟ್ರಗಳ ಮೇಲೆ ಶೌರ್ಯದಿಂದ ಹೋರಾಡುತ್ತಿರುವುದು ಗೊತ್ತೇ?

ಸಾಕ್ಷಿ:-ಹಾಗೆ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ.

ಕಾಂಗ್ರೆಸ್ ಧ್ವಜದ ಚಿಹ್ನೆ ಏನು?

ಶ್ರೀ ರಾಜು:-ಕಾಂಗ್ರೆಸ್ ಧ್ವಜದ ಸಂಕೇತವೇನು ಎಂಬುದು ಗೊತ್ತೇ?

ಸಾಕ್ಷಿ:-ಅದು ಕಾಂಗ್ರೆಸ್ಸಿನ ಚಿಹ್ನೆ. ಅದರ ಅವರ ಸಂಕೇತ ಗೊತ್ತಿಲ್ಲ.

ಶ್ರೀ ರಾಜು:-ಅದು ಅಹಿಂಸೆ ಮತ್ತು ಸತ್ಯವನ್ನು ಸೂಚಿಸುವುದಲ್ಲವೇ?

ಸಾಕ್ಷಿ:-ಬೊಂಬಾಯಿಯಲ್ಲಿ ಎ. ಐ. ಸಿ. ಸಿ. ಯು ನಡೆದ ದಿನಕ್ಕೆ ಹಿಂದೆ ಅದು ಅಹಿಂಸೆಯನ್ನು ಸೂಚಿಸುತ್ತಿತ್ತು.

ಶ್ರೀ ರಾಜು:-ಆ ಸಭೆಯಾದ ಮೇಲೆಯೂ ಧ್ವಜವಿದೆಯಲ್ಲವೇ?

ಸಾಕ್ಷಿ:-ಇದೆ.

ಶ್ರೀ ರಾಜು:-ಕಾಂಗ್ರೆಸ್ ಧ್ವಜದ ಮೇಲೆ ಪೋಲೀಸಿನವರಾದ ನಿಮಗೆ ಪೂರ್ವಭಾವನ [ಪ್ರೆಜುಡಿಸ್] ಇದೆಯೇ?

ಸಾಕ್ಷಿ:-ಇಲ್ಲ. ಯಾರ ವಿಷಯದಲ್ಲಾಗಲೀ ಯಾವ ವಸ್ತುವಿನ ವಿಷಯದಲ್ಲಾಗಲೀ ನನಗೆ ದುರಭಿಮಾನವಿಲ್ಲ.

ಶ್ರೀ ರಾಜು:-ನಿಮ್ಮ ಅಭಿಪ್ರಾಯದಲ್ಲಿ ಕಾಂಗ್ರೆಸ್ ಚಟುವಟಿಕೆ ಎಂದರೆ ಏನು?

ಸಾಕ್ಷಿ:-ಕಾಂಗ್ರೆಸ್ಸಿನ ಅನುಯಾಯಿಗಳೆಂದು ಹೇಳುವವರು ಮಾಡುವ ಶಾಸನ ವಿರೋಧ ಕಾರ್ಯ.

ಕಾಂಗ್ರೆಸ್ ಯಾವುದು?

ಶ್ರೀ ರಾಜು:-ಕಾಂಗ್ರೆಸ್ಸು ಯಾವುದು?

ಸಾಕ್ಷಿ:-ಈಗಿನ ಸರ್ಕಾರವನ್ನು ನಾನಾಮುಖವಾಗಿ ವಿರೋಧಿಸುವ ಸಂಸ್ಥೆಯೇ ಕಾಂಗ್ರೆಸ್.

ಶ್ರೀ ರಾಜು:-ಅದೆಲ್ಲಿದೆ?

ಸಾಕ್ಷಿ:-ಸರ್ಕಾರವನ್ನು ವಿರೋಧಿಸುವ ಪ್ರತಿ ಜೊಬ್ಬರಲ್ಲಿಯೂ ಇದೆ.

ಶ್ರೀ ರಾಜು:-ಅವರು ವಿರೋಧಿಸುವುದು ಯಾವ ಸರ್ಕಾರವನ್ನು?

ಸಾಕ್ಷಿ:-ಈಗಿರುವ ಸರ್ಕಾರಗಳನ್ನು

ಶ್ರೀ ರಾಜು:-ಅಂದರೆ, ಪ್ರಪಂಚದಲ್ಲಿರುವ ಎಲ್ಲ ಸರ್ಕಾರಗಳನ್ನೊ?

ಸಾಕ್ಷಿ:-ಬ್ರಿಟಿಷ್ ಸರಕಾರ ಮತ್ತು ಮೈಸೂರು ಸರ್ಕಾರ.

ಶ್ರೀ ರಾಜು:-ಸರ್ಕಾರವನ್ನು ವಿರೋಧಿಸುವವರೆಲ್ಲರೂ ಕಾಂಗ್ರೆಸ್ಸಿನವರೋ?

ಸಾಕ್ಷಿ:-ಅಂತಹವರು ಕಾಂಗ್ರೆಸ್ಸಿನವರಲ್ಲದಿದ್ದರೂ, ಕಾಂಗ್ರೆಸ್ ಮನೋಭಾವವುಳ್ಳವರು.

ಶ್ರೀ ರಾಜು:-ಸರ್ಕಾರವನ್ನು ವಿರೋಧಿಸುವವರು ನಿಮಗೆ ತಿಳಿದರೆ, ಅಂತಹವರನ್ನು ನೀವು ಕಾಂಗ್ರೆಸ್ಸಿನವರೆನ್ನುವಿರೋ?

ಸಾಕ್ಷಿ:-ಹೌದು, ಗೊತ್ತಿದ್ದರೆ. ಅವರು ಸರ್ಕಾರವನ್ನು ವಿರೋಧಿಸದಿದ್ದರೆ ಕಾಂಗ್ರೆಸ್ಸೇತರರು.

ಸರ್ಕಾರಕ್ಕೆ ವಿರೋಧ ಯಾವುದು?

ಶ್ರೀ ರಾಜು:-ಸರ್ಕಾರಕ್ಕೆ ವಿರೋಧವೆಂದರೇನು?

ಸಾಕ್ಷಿ:-ಅದೊಂದು ರೀತಿಯ ದ್ವೇಷ.

ಮ್ಯಾಜಿಸ್ಟ್ರೇಟರು:-ಇದೆಲ್ಲಾ ಏತಕ್ಕೆ?

ಶ್ರೀ ರಾಜು:-ಬೇಕು. ಏತಕ್ಕೆಂದರೆ, ಪ್ರಾಸಿಕ್ಯೂಷನ್ ಪರದ ಸಾಕ್ಷ್ಯದಲ್ಲಿ ಕಾಂಗ್ರೆಸ್ ಚಟುವಟಿಕೆ, ಕಾಂಗ್ರೆಸ್ ಚಳುವಳಿ ಎಂದು ಮುಂತಾಗಿ ಪ್ರಸ್ತಾಪವಾಗಿದೆ, ಆದರೆ ಅವನ್ನು ವಿವರಿಸಿಲ್ಲ. ಅದನ್ನು ಹಾಗೆಯೇ ವಿವರಣೆ ಕೊಡದೆ ಬಿಟ್ಟುಬಿಟ್ಟರೆ, ಅಪಾದಿತರ ಬಗ್ಗೆ ತಪ್ಪು ಅರ್ಥ ಬರಬಹುದು. ಮುಂದೆ ಈ ಮೊಕದ್ದಮೆಯು ಮೇಲಿನ ಯಾವುದಾದರೂ ಕೋರ್ಟಿಗೆ ಹೋದಾಗ, ಅಲ್ಲಿ ಸಾಕ್ಷಿಯ ಪಾಟೀಸವಾಲಿನಲ್ಲಿ ಈ ವಿಷಯಗಳ ಬಗ್ಗೆ ಏತಕ್ಕೆ ಕೇಳಲಿಲ್ಲವೆಂದು ಪ್ರಶ್ನೆಯಾಗಬಹುದು. ಅಷ್ಟೇ ಅಲ್ಲದೆ, ವಿವರಣೆಯಿಲ್ಲದಿದ್ದರೆ ಪ್ರಾಸಿಕ್ಯೂಷನ್ನಿನ ಕಡೆ ಅವರಿಗೆ ಬೇಕಾದ ತೀರ್ಮಾನವನ್ನು ಮಾಡಿಕೊಳ್ಳಬಹುದು. ಸುಮಾರು [illegible] ವರ್ಷಗಳ ಕೆಳಗೆ ಬೆಂಗಳೂರಿನಲ್ಲಿ ಒಂದು ಕೋಲಾಹಲಕರವಾದ ಮೊಕದ್ದಮೆಯಲ್ಲಿ ಸರಕಾರವನ್ನು ಕಿತ್ತೊಗೆಯುವ ಪಿತೂರಿ ನಡೆದಿದೆ ಎಂದು ಒಬ್ಬ ಸಾಕ್ಷಿಯು ಹೇಳಲು ಅದನ್ನು ಸ್ಪಷ್ಟ ಮಾಡಲು ಹಲವು ದಿನಗಳವರೆಗೆ ಪಾಟೀಸವಾಲು ನಡೆಯಬೇಕಾಯಿತು.

ಮಲ್ಲೇಶ್ವರಂ ಘಟನೆಗಳು

ಶ್ರೀ ರಾಜು:-ಮಲ್ಲೇಶ್ವರಂನಲ್ಲಿ ಕೆಲವು ಘಟನೆಗಳು ನಡೆದುವೆಂದು ಹೇಳಿದ್ದಿರಿ. ಅವು ನಡೆದಾಗ ನೀವು ಹಾಜರಿದ್ದಿರಾ?

ಸಾಕ್ಷಿ:-ಹೌದು. ಆಗಸ್ಟ್ ೧೯ರಲ್ಲಿ ಚನ್ನಯ್ಯ ಎಂಬೊಬ್ಬ ಮಿಲ್ ಕೆಲಸಗಾರನು ಟೆಲಿಫೋನ್ ಕಂಬವನ್ನು ಕತ್ತರಿಸುತ್ತಿದ್ದ. ಅವನನ್ನು ಬಂಧಿಸಿದೆ. ಅವನ ಮೇಲೆ ಮೊಕದ್ದಮೆ ಹೂಡಿಲ್ಲ.

ಶ್ರೀ ರಾಜು:-ಟೆಲಿಫೋನ್ ಕಂಬವನ್ನು ಕತ್ತರಿಸುವುದು ದೊಡ್ಡ ಅಪರಾಧವಲ್ಲವೇ?

ಸಾಕ್ಷಿ:-ಹೌದು.

ಶ್ರೀ ರಾಜು: ಆದರೂ ಕೂಡ, ನೀವು ಅವನ ಮೇಲೆ ಮೊಕದ್ದಮೆ ಹೂಡಲಿಲ್ಲ?

ಸಾಕ್ಷಿ:- ಇಲ್ಲ.

ವಿದ್ಯಾರ್ಥಿಗಳು ಆಗಸ್ಟ್ ೧೦ರಲ್ಲಿ ಮಲ್ಲೇಶ್ವರಂ ಪೋಲೀಸ್ ಸ್ಟೇಷನ್ ಮುಂದೆಯೇ ಅಂಗಡಿಯವರನ್ನು ಬಾಗಿಲು ಮುಚ್ಚುವಂತೆ ಪ್ರೇರೇಪಿಸಿದರೆಂದೂ, ಆ ದಿನ ಹರತಾಳವು ಕೆಲವು ಕಡೆ ನಡೆಯಿತೆಂದೂ ಸಾಕ್ಷಿಯು ಹೇಳಿದರು. ಈ ಹರತಾಳವು ಕೆಲ [illegible] ನಡೆಯಿತೆನ್ನಬಹುದು.

ಹರತಾಳವು ಏತಕ್ಕೆ ಆಯಿತು?

ಶ್ರೀ ರಾಜು:-ಈ ಹರತಾಳವನ್ನು ಏತಕ್ಕೆ ಆಚರಿಸಲಾಯಿತು?

ಸಾಕ್ಷಿ:-ಹರತಾಳವನ್ನು ಆಚರಿಸಬೇಕೆಂದು [illegible] ಅವರಿಗೆ ಕಾಂಗ್ರೆಸ್ಸಿನಲ್ಲಿ [illegible] ತೋರಿಸುವುದಕ್ಕೆ.

ಶ್ರೀ ರಾಜು:-ಅಂಗಡಿಗಳನ್ನು ಮುಚ್ಚಿಸಲು ಬಲಪ್ರಯೋಗವಾಯಿತೆಂದೋ ನೀವು ಹೇಳುವುದು?

ಸಾಕ್ಷಿ:-ಹೌದು.

ಶ್ರೀ ರಾಜು:-ಪ್ರೇರೇಪಣೆ [ಇಂಡ್ಯೂಸ್‌ಮೆಂಟ್] ಮಾತ್ರ ಆಯಿತೆಂದು ನೀವು ಹಿಂದೆ ಹೇಳಿದಿರಿ?

ಸಾಕ್ಷಿ:-ಹಾಗಲ್ಲ. ಪ್ರೇರೇಪಣೆ [illegible] ನಡೆಯಿತು.

ಶ್ರೀ ರಾಜು:-ಪ್ರೇರೇಪಣೆ [illegible] ಕೊಡುವುದಿಲ್ಲವಷ್ಟೇ?

ಸಾಕ್ಷಿ:-ಇಲ್ಲ...

ಶ್ರೀ ರಾಜು:-ಅಂಗಡಿಗಳನ್ನು ಮುಚ್ಚುವಂತೆ ಏತಕ್ಕೆ ಹೇಳಲಾಯಿತು?

ಸಾಕ್ಷಿ:-ಹಾಗೆ ಹೇಳುವವರಿಗೆ ಬೇರೆ ಕೆಲಸವಿರಲಿಲ್ಲ.

ಶ್ರೀ ರಾಜು:-ಈ ವಿಷಯ ಆಗಸ್ಟ್ ೧೦ರಲ್ಲಿಯೇ ತಿಳಿಯಿತೋ?

ಸಾಕ್ಷಿ:-ಅದೇ ದಿನ ಅಂಗಡಿಗಳನ್ನು ಮುಚ್ಚಿಸಿದ್ದು.

ಶ್ರೀ ರಾಜು:-ಆ ರೀತಿ ಏತಕ್ಕೆ ಹೇಳಲಾಯಿತೆಂಬುದನ್ನು ನೀವು ವಿಚಾರಿಸಿದಿರೋ?

ಸಾಕ್ಷಿ:-ಗಲಾಟೆ ಮಾಡಲು ಅವರು ತೊಡಗಿದ್ದರು. ಅದು ನಡೆದದ್ದು ಬೊಂಬಾಯಿಯಲ್ಲಿ ಎ.ಐ.ಸಿ.ಸಿ. ಸಭೆಯು ನಡೆದ ಮೇಲೆ.

ಶ್ರೀ ರಾಜು:-ಅದಕ್ಕೆ ಹಿಂದೆ ಎಷ್ಟೋ ಸಲ ಕಾಂಗ್ರೆಸ್ ಸಭೆಗಳು ನಡೆದದ್ದು ನಿಮಗೆ ಗೊತ್ತಿರಬೇಕು. ಆಗೆಲ್ಲಾ ಹರತಾಳಗಳು ನಡೆದಿದ್ದುವೋ?

ಸಾಕ್ಷಿ:-ನನಗೆ ಜ್ಞಾಪಕವಿಲ್ಲ.

ಶ್ರೀ ರಾಜು:-ಬೊಂಬಾಯಿಯಲ್ಲಿ ಎ.ಐ.ಸಿ.ಸಿ. ಸಭೆಯನ್ನು ನಡೆಸಿದವರ್ಯಾರು?

ಸಾಕ್ಷಿ:-ಮಹಾತ್ಮಾಗಾಂಧೀ, ಪಂ|| ಜವಾಹರಲಾಲ್ ನೆಹ್ರೂ, ಮೌ|| ಆಜಾದ್ ಮುಂತಾದವರು.

ಮುಖಂಡರ ಬಂಧನ

ಶ್ರೀ ರಾಜು:-ಬೊಂಬಾಯಿಯಲ್ಲಿ ಆ ಸಭೆಯಾದ ನಂತರ ಆ ಮುಖಂಡರಿಗೆ ಏನಾಯಿತು?

ಸಾಕ್ಷಿ:-ಅವರ ಓಡಾಟವನ್ನು ಬಂಧಿಸಲಾಯಿತು.

ಶ್ರೀ ರಾಜು:-ಅವರನ್ನು ದಸ್ತಗಿರಿ ಮಾಡಿ ಡಿಟೆನ್ [illegible] ಇಡಲಾಯಿತು?

ಸಾಕ್ಷಿ:-ನನಗೆ ದಸ್ತಗಿರಿಯ ವಿಷಯ ತಿಳಿಯದು.

ಮ್ಯಾಜಿಸ್ಟ್ರೇಟರು:-ಅವರನ್ನು ಅಪಹರಿಸಲಾಯಿತೋ [ಕಿಡ್‌ನ್ಯಾಪ್]? ಹಾಗಿದ್ದರೆ ಹಾಗೆಯೇ ಏತಕ್ಕೆ ಹೇಳಬಾರದು?

ಶ್ರೀ ರಾಜು:-ಹರತಾಳವು ಯಾವಾಗ ನಡೆಯಿತು? ಸಾಕ್ಷಿ:-ಅವರುಗಳನ್ನು "ಡಿಟೇನ್" ಮಾಡಿದ ಮೇಲೆ.

ಶ್ರೀ ರಾಜು:-ಮುಖಂಡರ ದಸ್ತಗಿರಿಯಾದ ಮೇಲೆ ಹರತಾಳವು ನಡೆಯುವುದು ನಿಮಗೆ ಗೊತ್ತಿರಬಹುದು?

ಸಾಕ್ಷಿ:-ನನಗೆ ಜ್ಞಾಪಕವಿಲ್ಲ. ಅದಕ್ಕೂ ಹಿಂದೆಯೂ ಹರತಾಳವಾಗಿರುವುದುಂಟು.

ಹರತಾಳವು ಪ್ರತಿಭಟನಾ ಸೂಚನೆಯೇ?

ಶ್ರೀ ರಾಜು:-ಆಗಸ್ಟ್ ೧೦ರಲ್ಲಿ ನಡೆದ ಹರತಾಳವು ರಾಷ್ಟ್ರೀಯ ಮುಖಂಡರ ದಸ್ತಗಿರಿಯನ್ನು ಪ್ರತಿಭಟಿಸುವುದಕ್ಕೋಸ್ಕರವಲ್ಲವೇ?

ಸಾಕ್ಷಿ:-ನನಗೆ ತಿಳಿಯದು.

ಶ್ರೀ ರಾಜು:-ರಾಷ್ಟ್ರೀಯ ಮುಖಂಡರ ದಸ್ತಗಿರಿಯನ್ನು ಪ್ರತಿಭಟಿಸಲು ಈ ಹರತಾಳವಿರಬಹುದೆಂದು ನಿಮಗೆ ತೋಚಲಿಲ್ಲವೇ?

ಸಾಕ್ಷಿ:-ಇಲ್ಲ.

ಶ್ರೀ ರಾಜು:-ಹರತಾಳದ ಬಗ್ಗೆ ಯಾವ ಅಂಗಡಿಯವರಾದರೂ ನಿಮಗೆ ಫಿರ್ಯಾದು ಮಾಡಿದರೇ?

ಸಾಕ್ಷಿ:-ಹೌದು. ನನಗೆ ಹೆಸರು ಜ್ಞಾಪಕವಿಲ್ಲ. ಫಿರ್ಯಾದನ್ನು ಬರೆದುಕೊಳ್ಳಲೂ ಇಲ್ಲ. ಅವರು ತಮ್ಮ ಅಭಿಪ್ರಾಯವನ್ನು ಮಾತ್ರ ಸೂಚಿಸಿದರು. ಹಾಗೆ ಫಿರ್ಯಾದು ಮಾಡಿದ ಅಂಗಡಿಯವರು ಹಿಂದೂವೆಂದೂ, ಅವರ ಜಾತಿ ತಿಳಿಯದೆಂದೂ, ಅವರ ಅಂಗಡಿಯು ಮಲ್ಲೇಶ್ವರಂ ಬಜಾರ್ ರಸ್ತೆ-೫ನೇ ಕ್ರಾಸ್ ರಸ್ತೆಯಲ್ಲಿದೆಯೆಂದೂ ಸಾಕ್ಷಿಯು ಹೇಳಿದರು.

ಶ್ರೀ ರಾಜು:-ಶ್ರೀರಾಮಪುರದಲ್ಲಿ ಪೋಸ್ಟ್ ಬಾಕ್ಸನ್ನು ಕಿತ್ತು ಬಿಸಾಡಲಾಗಿತ್ತೆಂದಿರಿ. ನೀವು ನೋಡಿದಿರಾ?

ಸಾಕ್ಷಿ:-ಇಲ್ಲ. ಅದನ್ನು ಬೀದಿಯಲ್ಲಿ ಬಿದ್ದಿದ್ದಾಗ ನೋಡಿದೆ. ಅದನ್ನು ಯಾರು ಕಿತ್ತರೆಂಬುದು ಗೊತ್ತಿಲ್ಲ.

ಶ್ರೀ ರಾಜು:-ಒಂದು ಅಂಗಡಿಯಲ್ಲಿದ್ದ ಬಾಳೆಹಣ್ಣು, ತೆಂಗಿನಕಾಯಿ ಮತ್ತು ಸೋಡವಾಟರ್ ಸೀಸೆಗಳನ್ನು ನಾಶಮಾಡಲಾಯಿತೆಂದು ಹೇಳಿದಿರಿ. ನೀವು ಆಗ ಸ್ಥಳದಲ್ಲಿದ್ದಿರಾ?

ಸಾಕ್ಷಿ:-ಹೌದು.

ಶ್ರೀ ರಾಜು:-ಯಾರನ್ನಾದರೂ ಈ ಸಂಬಂಧದಲ್ಲಿ ದಸ್ತಗಿರಿ ಮಾಡಿದಿರಾ?

ಸಾಕ್ಷಿ:-ಇಲ್ಲ.

ಶ್ರೀ ರಾಜು:-ಹೆದರಿಕೆಯೆ? ಸಾಕ್ಷಿ:-ಇಲ್ಲ.

ಈ ಸಂಬಂಧದಲ್ಲಿ ಯಾರ ಮೇಲೆ ಮೊಕದ್ದಮೆಯನ್ನೂ ಹೂಡಲಿಲ್ಲವೆಂದು ಸಾಕ್ಷಿಯು ಹೇಳಿದರು. "ಏತಕ್ಕೆಂದರೆ, ಆಗ ನಾವು ಪರಿಸ್ಥಿತಿಯನ್ನು ಕಾಯುತ್ತಿದ್ದೆವು".

ಶ್ರೀ ರಾಜು:-ನಿಮ್ಮ ಕಣ್ಮುಂದೆ ಇದು ನಡೆದರೂ, ನೀವು ಸುಮ್ಮನೆಯೇ ಇದ್ದಿರಿ?

ಸಾಕ್ಷಿ:-ಹೌದು.

ತಂಟೆಕೋರರ ವಿಷಯದಲ್ಲಿ ಧಾರಾಳವಾಗಿರಬೇಕೆಂದೇ?

ಶ್ರೀ ರಾಜು:-ಈ ತಂಟೆಕೋರರ ವಿಷಯದಲ್ಲಿ ಧಾರಾಳವಾಗಿರಬೇಕೆಂಬುದು ನಿಮ್ಮ ಅಪೇಕ್ಷೆಯಲ್ಲವಷ್ಟೇ?

ಸಾಕ್ಷಿ:-ಅಲ್ಲ. ಆ ಸಮಯದಲ್ಲಿ ನಾನು ಪ್ರವೇಶಿಸಲಿಷ್ಟಪಡಲಿಲ್ಲ. ಆದರೆ ಈ ಘಟನೆಯ ಬಗ್ಗೆ ಸ್ಟೇಷನ್ ಹೌಸ್ ಡೈರಿಯಲ್ಲಿ ನಾನು ವರದಿ ಮಾಡಿದ್ದೇನೆ.

ಶ್ರೀ ರಾಜು:-ವಸ್ತುಗಳನ್ನು ಹಾಳು ಮಾಡುವುದು ದೊಡ್ಡ ಅಪರಾಧವಲ್ಲವೇ? ಸಾಕ್ಷಿ:-ಹೌದು.

ಕೋರ್ಟು ಎದ್ದಾಗ ಸಾಕ್ಷ್ಯವು ಮುಗಿದಿರಲಿಲ್ಲ. ವಿಚಾರಣೆಯನ್ನು ಅಕ್ಟೋಬರ್ ೨೧ಕ್ಕೆ ಮುಂದುವರಿಸಲಾಯಿತು.

ಶ್ರೀ ಎಲ್. ಎಸ್. ರಾಜುರವರು ಶ್ರೀ ಜಿ. ಆರ್. ದೊರೆಸ್ವಾಮಿ ಮತ್ತು ಶ್ರೀ ಎಂ. ಎಲ್. ವೆಂಕಟನರಸಿಂಹರಾವರ ಸಹಾಯದೊಡನೆ ಆಪಾದಿತರ ಪರ ವಕಾಲತ್ತು ವಹಿಸಿರುವರು.

ಪಬ್ಲಿಕ್ ಪ್ರಾಸಿಕ್ಯೂಟರಾದ ಶ್ರೀ ಜಿ. ಎಸ್. ದೊರೆಸ್ವಾಮಯ್ಯರ್‌ರವರು ಸರ್ಕಾರದ ಪರ ವಕಾಲತ್ತು ವಹಿಸಿರುವರು.

ಶ್ರೀ ಶರ್ಮರ ಮೊಕದ್ದಮೆ

ಎಮರ್ಜನ್ಸಿ ಬ್ರಾಂಚ್ ಪೋ|| ಇನ್ಸ್‌ಪೆಕ್ಟರ ಸಾಕ್ಷ್ಯ

ಶ್ರೀ ಎಲ್. ಎಸ್. ರಾಜು ರವರಿಂದ ಪಾಟೀಸವಾಲು

[ತಾ ರಿ ಬಾ] ಬೆಂಗಳೂರು ೨೮

"ವಿಶ್ವಕರ್ನಾಟಕ" ಪತ್ರಿಕೆಯ ಮ್ಯಾನೇಜಿಂಗ್ ಡೈರೆಕ್ಟರಾದ ಶ್ರೀ ಟಿ. ಟಿ. ಶರ್ಮರ ಮತ್ತು ಅದೇ ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಎಸ್. ಕೃಷ್ಣಶರ್ಮರ ಮೇಲೆ, ಅವರುಗಳು ಮೈಸೂರು ಸರ್ಕಾರವು ಡಿಫೆನ್ಸ್ ಆಫ್ ಇಂಡಿಯಾ ರೂಲ್ ೨೬ (೧) [ಬಿ] ಪ್ರಕಾರ ಹೊರಡಿಸಿದ ನೋಟೀಸನ್ನು ಉಲ್ಲಂಘಿಸಿದರೆಂದು ಹೂಡಲಾಗಿರುವ ಮೊಕದ್ದಮೆಯ ವಿಚಾರಣೆಯು ಸಿಟಿ ಮ್ಯಾಜಿಸ್ಟ್ರೇಟರಾದ ಶ್ರೀ ಸಿ. ರಾಮಚಂದ್ರರಾಯರ ಮುಂದೆ ನಿನ್ನೆ ಮಧ್ಯಾಹ್ನ ಆರಂಭವಾಯಿತು. ಪ್ರಾಸಿಕ್ಯೂಷನ್ ಪರ ಮೊದಲನೇ ಸಾಕ್ಷಿಯಾಗಿ ಇನ್ಸ್‌ಪೆಕ್ಟರ್ ಅನಂತಸ್ವಾಮಿ ಅಯ್ಯರ್‌ರವರು ಸಾಕ್ಷ್ಯಕೊಟ್ಟರು.

ಕೋರ್ಟ್ ಹಾಲು ಪತ್ರಿಕೋದ್ಯೋಗಿಗಳಿಂದಲೂ, ಅಡ್ವೋಕೇಟರಿಂದಲೂ, ಸಾರ್ವಜನಿಕರಿಂದಲೂ ತುಂಬಿತ್ತು.

ಆಪಾದಿತರುಗಳು ಕುರ್ಚಿಯ ಮೇಲೆ ಕುಳಿತಿದ್ದರು.

"ಕಾಂಗ್ರೆಸ್ ಚಟುವಟಿಕೆಗಳು"

ಪಬ್ಲಿಕ್ ಪ್ರಾಸಿಕ್ಯೂಟರ್‌ರವರ ಪ್ರಶ್ನೆಗಳಿಗೆ ಉತ್ತರವಾಗಿ, ಇನ್ಸ್‌ಪೆಕ್ಟರ್ ಅನಂತಸ್ವಾಮಿ ಅಯ್ಯರ್‌ರವರು ತಾವು ಕೆಲವು ಕಾಲದಿಂದಲೂ ಬೆಂಗಳೂರಿನಲ್ಲಿ ಪೋಲೀಸ್ ಇನ್ಸ್‌ಪೆಕ್ಟರಾಗಿರುವುದಾಗಿಯೂ, ಕಳೆದ ಆಗಸ್ಟ್ ೧೦ರಿಂದ ಅದೇ ಕೆಲಸದಲ್ಲಿರುವುದಾಗಿಯೂ ಹೇಳಿದರು. ಕಾಂಗ್ರೆಸ್ ಚಟುವಟಿಕೆಯ ಸಂಬಂಧವಾಗಿ ಅವರು ಕಳೆದ ಆಗಸ್ಟ್ ೧೦ರಿಂದ ಬೆಂಗಳೂರಿನ ನಾನಾ ಕಡೆಗಳಲ್ಲಿ ಸುತ್ತಿರುವುದೂ ಉಂಟು.

ಪಬ್ಲಿಕ್ ಪ್ರಾಸಿಕ್ಯೂಟರ್:-ಈ ಚಟುವಟಿಕೆಗಳು ಯಾವ ಸ್ವರೂಪವನ್ನು ತೆಗೆದುಕೊಂಡಿವೆ?

ಸಾಕ್ಷಿ:-ಮಿಲ್ ಮತ್ತು ಫ್ಯಾಕ್ಟರಿಗಳಲ್ಲಿಯೂ, ಸ್ಕೂಲು ಮತ್ತು ಕಾಲೇಜುಗಳಲ್ಲಿಯೂ ಮುಷ್ಕರ ನಡೆದಿದೆ. ಸ್ಕೂಲ್ ಮತ್ತು ಕಾಲೇಜು ಮುಂದೆ ಪಿಕೆಟಿಂಗ್ ನಡೆದಿದೆ. ಸೇಂದಿ ಅಂಗಡಿಗಳ ಮುಂದೆಯೂ ಮತ್ತು ಪರದೇಶಿ ಬಟ್ಟೆ ಅಂಗಡಿಗಳ ಮುಂದೆಯೂ ಪಿಕೆಟಿಂಗ್ ನಡೆದಿದೆ. ಕಾಂಗ್ರೆಸ್ ಚಟುವಟಿಕೆಯ ಸಂಬಂಧವಾಗಿ ಸಭೆಗಳೂ, ಮೆರವಣಿಗೆಗಳೂ ನಡೆದಿವೆ.

ಪಬ್ಲಿಕ್ ಪ್ರಾಸಿಕ್ಯೂಟರ್-"ಸ್ಲೋಗಾನ್ಸ್" ಕೂಗಾಟವು ನಡೆದಿದೆಯೋ?

ಸಾಕ್ಷಿ-ಹೌದು. "ಬ್ರಿಟಿಷರ್ಸ್ ಕ್ವಿಟ್ ಇಂಡಿಯಾ", "ಮಹಾತ್ಮಾಗಾಂಧೀ-ಕೀ-ಜೈ", "ಕಾಂಗ್ರೆಸ್-ಕೀ-ಜೈ" ಮುಂತಾದುವನ್ನು ಕೂಗಲಾಗಿದೆ.

ಪಬ್ಲಿಕ್ ಪ್ರಾಸಿಕ್ಯೂಟರ್-"ಬಾನ್‌ಫೈರ್ಸ್" ನಡೆದಿವೆಯೋ?

ಸಾಕ್ಷಿ-ಹೌದು. ಹ್ಯಾಟುಗಳನ್ನೂ, ಪರದೇಶಿ ಬಟ್ಟೆಗಳನ್ನೂ ಸುಡಲಾಗಿದೆ.

ಪಬ್ಲಿಕ್ ಪ್ರಾಸಿಕ್ಯೂಟರ್-ವ್ಯವಹಾರ [illegible]ಕಾರ್ಯಕ್ಕೆ ಅಡ್ಡಿಯಾಗಿದೆಯೋ?

ಸಾಕ್ಷಿ-ಹೌದು. ಟೆಲಿಗ್ರಾಫ್ ಮತ್ತು ಟೆಲಿಫೋನ್ ತಂತಿಗಳನ್ನು ಕತ್ತರಿಸಲಾಗಿದೆ.

ಪಬ್ಲಿಕ್ ಪ್ರಾಸಿಕ್ಯೂಟರ್-ಬಸ್ ಪ್ರಯಾಣಕ್ಕೆ ತೊಂದರೆಯಾಗಿದೆಯೋ?

ಸಾಕ್ಷಿ-ಹೌದು, ಟಿಕೆಟ್ಟಿಲ್ಲದೆ ಪ್ರಯಾಣ ನಡೆದಿದೆ.

ಪಬ್ಲಿಕ್ ಪ್ರಾಸಿಕ್ಯೂಟರ್-ಈ ಕೃತ್ಯಗಳೆಲ್ಲವೂ ಆಗಸ್ಟ್ ೧೦ರಿಂದ ನಡೆದಿವೆ? ಸಾಕ್ಷಿ-ಹೌದು.

ಪಬ್ಲಿಕ್ ಪ್ರಾಸಿಕ್ಯೂಟರ್-ಈ ಕೃತ್ಯಗಳು ಬೆಂಗಳೂರಿನ ಯಾವುದಾದರೂ ಒಂದು ಭಾಗದಲ್ಲಿ ನಡೆದಿವೆಯೋ?

ಸಾಕ್ಷಿ-ಎಲ್ಲಾ ಕಡೆಯೂ ನಡೆದಿವೆ.

ಬೆಂಗಳೂರಿನಲ್ಲಿ ನಡೆದ ಘಟನೆಗಳ ಕೆಲವು ವರದಿಗಳು ವಿಶ್ವಕರ್ಣಾಟಕದ ಸೆಪ್ಟೆಂಬರ್ ೨೪ ಮತ್ತು ೭ರ ಸಂಚಿಕೆಗಳಲ್ಲಿ ಪ್ರಕಟವಾಗಿರುವುವೆಂದು ಹೇಳಿ, ಅವನ್ನು ಸಾಕ್ಷಿಯು ಗುರ್ತಿಸಿದರು. ಈ ಘಟನೆಗಳೆಲ್ಲವೂ ತಮಗೆ ಸ್ವತಃ ಗೊತ್ತೆಂದೂ ಸಾಕ್ಷಿಯು ಹೇಳಿದರು. ಈ ಘಟನೆಗಳೆಲ್ಲವೂ ಕಾಂಗ್ರೆಸ್ ಚಟುವಟಿಕೆಯ ಭಾಗ. ಇವುಗಳಲ್ಲಿ ಎಲ್ಲರೂ ಭಾಗವಹಿಸುತ್ತಿದ್ದರು. ಈ ಚಟುವಟಿಕೆಗಳೆಲ್ಲವೂ ನಡೆಯುತ್ತಲೇ ಇದ್ದುವು.

ಶ್ರೀ ಎಲ್. ಎಸ್. ರಾಜುರವರಿಂದ ಪಾಟೀಸವಾಲು

ಅಪಾದಿತರ ಪರ ಅಡ್ವೋಕೇಟರಾದ ಶ್ರೀ ಎಲ್. ಎಸ್. ರಾಜುರವರು ಸಾಕ್ಷಿಯೊಡನೆ ಪಾಟೀಸವಾಲು ನಡೆಸಿದರು.

ಕಳೆದ ೧೦ ತಿಂಗಳಿನಿಂದ ತಾವು ಎಮರ್ಸನ್ನಿ ಬ್ರಾಂಚಿಗೆ ಸೇರಿರುವುದಾಗಿಯೂ, ಅದಕ್ಕೆ ಮುಂಚೆ ೧೯೪೧ನೇ ಸಪ್ಟೆಂಬರ್‌ನಿಂದ ಬೆಂಗಳೂರಿನಲ್ಲಿ ಇನ್ಸ್‌ಪೆಕ್ಟರಾಗಿದ್ದರೆಂದೂ, ಅದಕ್ಕೂ ಮುಂಚೆ ಐ.ಜಿ.ಪಿ. ಯವರ ಕಚೇರಿಯ ಮ್ಯಾನೇಜರಾಗಿ ೫ ವರ್ಷವಿದ್ದರೆಂದೂ ಸಾಕ್ಷಿಯು ಹೇಳಿದರು.

ಶ್ರೀ ರಾಜು-ಪ್ರದರ್ಶನಗಳಲ್ಲಿ ಸಾರ್ವಜನಿಕರಲ್ಲಿ ಎಲ್ಲ ತರಗತಿಯವರೂ ಭಾಗವಹಿಸಿರುವುದಾಗಿ ಹೇಳಿದಿರಿ. ಆದರೆ ಸರ್ಕಾರಿ ಅಧಿಕಾರಿಗಳು ಮತ್ತು ಪೋಲೀಸರು ಇವರಲ್ಲಿ ಸೇರಿಲ್ಲವಷ್ಟೇ?

ಸಾಕ್ಷಿ-ಸೇರಿಲ್ಲ.

ಶ್ರೀ ರಾಜು-ವರ್ತಕರೂ ಸೇರಿಲ್ಲವೋ?

ಸಾಕ್ಷಿ-ಕೆಲವರು ಸೇರಿರುವರು.

ಶ್ರೀ ರಾಜು-ಲಾಯರುಗಳೋ?

ಸಾಕ್ಷಿ-ಅವರಲ್ಲಿಯೂ ಕೆಲವರು ಸೇರಿರುವರು.

ಶ್ರೀ ರಾಜು-ಕೆಲಸದಿಂದ ನಿವೃತ್ತರಾದವರು?

ಸಾಕ್ಷಿ-ನನಗೆ ತಿಳಿಯದು.

ಶ್ರೀ ರಾಜು-ಎಲ್ಲಾ ಕೋಮಿನವರೂ ಸೇರಿರುವರೋ?

ಸಾಕ್ಷಿ-ಹೌದು.

ಶ್ರೀ ರಾಜು-ಅವರೆಲ್ಲರೂ ಕಾಂಗ್ರೆಸ್ಸಿಗೆ ಸೇರಿದವರೋ?

ಸಾಕ್ಷಿ-ಅವರು ಕಾಂಗ್ರೆಸ್ಸಿಗೆ ಸೇರಿದವರು ಅಥವಾ ಕಾಂಗ್ರೆಸ್ಸಿನ ವಿಷಯದಲ್ಲಿ ಸಹಾನುಭೂತಿಯುಳ್ಳವರು.

ಶ್ರೀ ರಾಜು-ಅವರಲ್ಲಿ ಯಾರನ್ನು ಕಾಂಗ್ರೆಸ್ಸಿನವರೆನ್ನುವಿರಿ ಮತ್ತು ಯಾರನ್ನು ಕಾಂಗ್ರೆಸ್ಸಿನ ವಿಷಯದಲ್ಲಿ ಸಹಾನುಭೂತಿಯುಳ್ಳವರೆನ್ನುವಿರಿ?

ಸಾಕ್ಷಿ-ಪ್ರದರ್ಶನಗಳಲ್ಲಿ ಪ್ರತ್ಯಕ್ಷವಾಗಿ ಪಾತ್ರವಹಿಸಿದವರು ಕಾಂಗ್ರೆಸ್ಸಿನವರು ಮತ್ತು ಅವಕ್ಕೆ ಉತ್ತೇಜನ ಕೊಟ್ಟವರು ಕಾಂಗ್ರೆಸ್ಸಿನ ವಿಷಯದಲ್ಲಿ ಸಹಾನುಭೂತಿಯುಳ್ಳವರು.

ಶ್ರೀ ರಾಜು-ಒಬ್ಬೊಬ್ಬ ಅಥವ ಕೆಲವರು ಪ್ರತ್ಯಕ್ಷವಾಗಿ ಈ ರೀತಿಯ ಪ್ರದರ್ಶನದಲ್ಲಿ ಭಾಗವಹಿಸಿದರೆ ಅವನನ್ನು ಕಾಂಗ್ರೆಸ್ಸಿನವನೆಂದು ನೀವು ತಿಳಿಯುವಿರೋ?

ಸಾಕ್ಷಿ-ಕಾಂಗ್ರೆಸ್ಸಿನ ಕಾರ್ಯಕ್ರಮ ನಡೆಸಬೇಕೆಂದಾಗ ಅವನು ಈ ರೀತಿಯ ಪ್ರದರ್ಶನಗಳಲ್ಲಿ ಭಾಗವಹಿಸಿದರೆ, ಅವನನ್ನು ಕಾಂಗ್ರೆಸ್ಸಿನವನೆನ್ನುವೆನು.

ಶ್ರೀ ರಾಜು-ನೀವು ಪೋಲೀಸ್ ಅಧಿಕಾರಿ. ಏಕೆಂದರೆ ನೀವು ಪೋಲೀಸ್ ಇಲಾಖೆಗೆ ಸೇರಿದವರು?

ಸಾಕ್ಷಿ-ಹೌದು. ಆದರೆ ಈ ಸಂಸ್ಥೆಗೂ ಕಾಂಗ್ರೆಸ್ ಸಂಸ್ಥೆಗೂ ವ್ಯತ್ಯಾಸವಿದೆ.

ಶ್ರೀ ರಾಜು-ಯಾರಾದರೂ ಕಾಂಗ್ರೆಸ್ಸಿನವನೆನಿಸಿಕೊಳ್ಳಬೇಕಾದರೆ, ಅವನು ಕಾಂಗ್ರೆಸ್ ಸಂಸ್ಥೆಗೆ ಸೇರಬೇಕೆ?

ಸಾಕ್ಷಿ-ನನ್ನ ಅಭಿಪ್ರಾಯದಲ್ಲಿ, ಸೇರಬೇಕಾದ್ದು ಅಗತ್ಯವಿಲ್ಲ.

ಕಾಂಗ್ರೆಸ್ ಸಂಸ್ಥೆ

ಶ್ರೀ ರಾಜು-ಕಾಂಗ್ರೆಸ್ ಸಂಸ್ಥೆ ಎಂಬುದೊಂದಿದೆಯಷ್ಟೇ?

ಸಾಕ್ಷಿ-ಹಾಗೆ ಕೇಳಿದ್ದೇನೆ.

ಶ್ರೀ ರಾಜು-ಚಂದಾ ಕೊಟ್ಟು ಸದಸ್ಯರಾಗಬೇಕಷ್ಟೆ, ಮತ್ತು ಅಧಿಕಾರ ಸ್ಥಾನಗಳಿಗೆ ಚುನಾವಣೆ ನಡೆಯುವುದಷ್ಟೇ?

ಸಾಕ್ಷಿ-ಹೌದು.

ಶ್ರೀ ರಾಜು-ಮೈಸೂರು ಕಾಂಗ್ರೆಸ್ಸನ್ನು ಮೈಸೂರು ಸರ್ಕಾರವು ಅಕ್ರಮಕೂಟವೆಂದು ಕರೆದಿರುವುದು ಗೊತ್ತೇ?

ಸಾಕ್ಷಿ-ಗೊತ್ತು. ಈ ವಿಷಯವು ಆಗಸ್ಟ್ ಮಧ್ಯಭಾಗದಲ್ಲಿ ತಿಳಿಯಿತು.

ಶ್ರೀ ರಾಜು-ಅದುದರಿಂದ ಈಗ ಶಾಸನಬದ್ಧವಾದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಿಲ್ಲವಷ್ಟೇ?

ಸಾಕ್ಷಿ-ನಾನು ಹೇಳಲಾರೆ.

ಶ್ರೀ ರಾಜು-ನೀವು ಕಾಂಗ್ರೆಸ್ ಚಟುವಟಿಕೆಗಳೆಂದಿರಿ. ಆ ಚಟುವಟಿಕೆಗಳೆಲ್ಲವೂ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿಗೆ ಸೇರಿದ್ದುವೋ?

ಸಾಕ್ಷಿ-ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಸೂಚನೆಯಂತೆ ಮೈಸೂರಿನಲ್ಲಿ ನಡೆಯುತ್ತಿರುವ ಕಾಂಗ್ರೆಸ್ ಚಟುವಟಿಕೆಗಳು.

ಶ್ರೀ ರಾಜು-ಕಾಂಗ್ರೆಸ್ ಚಟುವಟಿಕೆಯ ಕಾರ್ಯಕ್ರಮವನ್ನು ನೀವು ಯಾವಾಗ ತಿಳಿದಿರಿ?

ಸಾಕ್ಷಿ-ಸುಮಾರು ಆಗಸ್ಟ್ ೧೦ರಲ್ಲಿ.

ರಾಜು-ಕಳೆದ ಆಗಸ್ಟ್ ೧೦ರ ಹಿಂದೆ ಕಾಂಗ್ರೆಸ್ ಚಟುವಟಿಕೆಗಳೇ ಇರಲಿಲ್ಲವೋ?

ಸಾಕ್ಷಿ-ಇದ್ದುವು.

ಶ್ರೀ ರಾಜು-ಅವು ಯಾವ ರೀತಿಯವು?

ಸಾಕ್ಷಿ-ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸಲು ಪ್ರಯತ್ನ ನಡೆಯಿತು. ಜನಕ್ಕೆ ಸರಕಾರದಲ್ಲಿ ಹೆಚ್ಚಿನ ಅಧಿಕಾರ ಕೊಡಿಸಲು ಅಪೇಕ್ಷಿಸಲಾಗಿತ್ತು. ಉಳಿದ ಚಟುವಟಿಕೆಗಳು ನನಗೆ ಜ್ಞಾಪಕವಿಲ್ಲ.

ಶ್ರೀ ರಾಜು-ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಚಟುವಟಿಕೆಗಳು?

ಸಾಕ್ಷಿ-ಹಲವು ಪ್ರಾಂತಗಳಲ್ಲಿ ಕಾಂಗ್ರೆಸ್ಸಿನವರು ಸರ್ಕಾರವನ್ನು ನಡೆಸಿದ್ದರು. ಅವರು ಕೂಡ ಜನಕ್ಕೆ ಹೆಚ್ಚಿನ ಅಧಿಕಾರ ದೊರಕಿಸಲು ಪ್ರಯತ್ನಿಸಿದರು.

ಕಾಂಗ್ರೆಸ್ಸಿನ ಸೂತ್ರ

ಶ್ರೀ ರಾಜು-ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಸೂತ್ರ [ಕ್ರೀಡ್] ಏನು?

ಸಾಕ್ಷಿ-ಅಹಿಂಸೆ ಎಂದು ಹೇಳಿಕೊಂಡಿದೆ.

ಶ್ರೀ ರಾಜು-ಮೈಸೂರು ಕಾಂಗ್ರೆಸ್ಸಿನ ಸೂತ್ರವೇನು?

ಸಾಕ್ಷಿ-ಅದೂ ಹಾಗೆಯೇ ಹೇಳಿಕೊಂಡಿದೆ.

ಶ್ರೀ ರಾಜು-ಈ ಸೂತ್ರವನ್ನು ಯಾರಾದರೂ ಅನುಸರಿಸದಿದ್ದವರಿದ್ದರೆ, ಅವರನ್ನು ನೀವು ಕಾಂಗ್ರೆಸ್ಸಿನವರಲ್ಲವೆನ್ನುವಿರೋ?

ಸಾಕ್ಷಿ-ನಾನು ಹಾಗೆ ಹೇಳಲಾರೆ. ಅಂತಹವರನ್ನು ಕಾಂಗ್ರೆಸ್ಸಿಗೆ ವಿರೋಧಿ ಎಂದು ಕರೆಯುತ್ತೇನೆ.

ಶ್ರೀ ರಾಜು-ನೀವು ಹೇಳಿದ ಪ್ರದರ್ಶನಗಳಲ್ಲಿ ಎಷ್ಟು ಜನರು ಕಾಂಗ್ರೆಸ್ಸಿನವರೆಂಬುದನ್ನು ತಿಳಿಯಲು ಪ್ರಯತ್ನಿಸಿದಿರಾ?

ಸಾಕ್ಷಿ-ಇಲ್ಲ.

ಶ್ರೀ ರಾಜು-ಅವರಲ್ಲಿ ಎಷ್ಟು ಜನ ಕಾಂಗ್ರೆಸ್ ಸಂಸ್ಥೆಗೆ ಸದಸ್ಯರಾಗಿದ್ದಾರೆಂಬುದು ಗೊತ್ತೆ?

ಸಾಕ್ಷಿ-ಇಲ್ಲ.

ಶ್ರೀ ರಾಜು-ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಕಾರ್ಯಕ್ರಮವನ್ನು ಯಾರು ನಿರ್ಧರಿಸಿದರೆಂಬುದು ನಿಮಗೆ ಸ್ವತಃ ಗೊತ್ತೇ?

ಸಾಕ್ಷಿ-ಇಲ್ಲ. ಆದರೆ ಪತ್ರಿಕೆಗಳಲ್ಲಿ ಓದಿದ್ದೇನೆ.

ಶ್ರೀ ರಾಜು-ಕಾಂಗ್ರೆಸ್ಸಿನ ಕಾರ್ಯಕ್ರಮವನ್ನು ಕೊಟ್ಟಿರುವ ಪತ್ರಿಕೆಯಾವುದು?

ಸಾಕ್ಷಿ-ಹಿಂದೂ ಪತ್ರಿಕೆಯಲ್ಲಿ ಕಾಂಗ್ರೆಸ್ಸಿನ ಕಾರ್ಯಕ್ರಮವೆಂದು ಒಂದು ವರದಿಯನ್ನು ಓದಿದ ಜ್ಞಾಪಕವಿದೆ.

ಶ್ರೀ ರಾಜು-ಹಿಂದೂವಿನ ಯಾವ ತಾರೀಕಿನ ಸಂಚಿಕೆ ಅದು?

ಸಾಕ್ಷಿ-ಬೊಂಬಾಯಿಯಲ್ಲಿ ಎ.ಐ.ಸಿ.ಸಿ. ಸಭೆ ಯಾವ ಒಡನೆಯೇ ಇರಬೇಕು. ಪ್ರಾಯಶಃ ಆಗಸ್ಟ್ ೯ ಅಥವಾ ೧೦ನೇ ತಾರೀಖಿನದು.

ಕಾರ್ಯಕ್ರಮವನ್ನು ಕೊಟ್ಟವರ್‍ಯಾರು?

ಶ್ರೀ ರಾಜು-ಆ ಕಾರ್ಯಕ್ರಮವನ್ನು ಯಾರು ಕೊಟ್ಟವರು?

ಸಾಕ್ಷಿ-ನನಗೆ ಜ್ಞಾಪಕವಿಲ್ಲ.

ಶ್ರೀ ರಾಜು-ಹಿಂದೂ ಸಂಪಾದಕೀಯದಲ್ಲಿತ್ತೇ? ಅಥವಾ ಯಾರಾದರೂ ಆ ಪತ್ರಿಕೆಗೆ ಕೊಟ್ಟರೋ?

ಸಾಕ್ಷಿ-ನನಗೆ ಗೊತ್ತಿಲ್ಲ.

ಶ್ರೀ ರಾಜು-ಆ ಸಂಚಿಕೆಯೊಂದನ್ನು ಹಾಜರುಪಡಿಸುವಿರಾ?

ಸಾಕ್ಷಿ-ಹಿಂದೂವಿನಲ್ಲಿಲ್ಲದಿದ್ದರೆ, ಸ್ಥಳೀಯ ಪತ್ರಿಕೆ ಯಾವುದಾದರೊಂದರಲ್ಲಿ ಇರಬಹುದು. ನಾನು ಸಂಚಿಕೆಯನ್ನು ಹಾಜರುಪಡಿಸುತ್ತೇನೆ.

. ಪಬ್ಲಿಕ್ ಪ್ರಾಸಿಕ್ಯೂಟರ್-ಹಿಂದೂವಿನಲ್ಲಿಯೆ ಇದೆ. ನಾನೇ ಹಾಜರುಪಡಿಸುತ್ತೇನೆ.

ಶ್ರೀ ರಾಜು-ಆ ವರದಿಯ ಸಾರಾಂಶವೇನು?

ಸಾಕ್ಷಿ-ಅದು ಎ.ಐ.ಸಿ.ಸಿ. ಯ ಕಾರ್ಯಕ್ರಮವನ್ನು ಕೊಟ್ಟಿತು. ಆ ಕಾರ್ಯಕ್ರಮದಲ್ಲಿ ನಾನು ಸೂಚಿಸಿರುವ ಪ್ರದರ್ಶನಗಳೆಲ್ಲವನ್ನೂ ನಮೂದಿಸಿದೆ.

ಶ್ರೀ ರಾಜು-ಆ ಕಾರ್ಯಕ್ರಮವಾವುದು?

ಸಾಕ್ಷಿ-ಶಾಲಾ ಕಾಲೇಜುಗಳ ಮುಷ್ಕರ, ಗಿರಣಿಗಳ ಮುಷ್ಕರ, ಟೆಲಿಫೋನ್ ಮತ್ತು ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸುವುದು, ರೈಲುಗಳನ್ನು ತಡೆಯುವುದು, ಟಿಕೆಟ್ಟಿಲ್ಲದ ಪ್ರಯಾಣ, ಪಿಕೆಟಿಂಗು.

ಶ್ರೀ ರಾಜು-ಎ.ಐ.ಸಿ.ಸಿ.ಯ ಅಧ್ಯಕ್ಷರ್‍ಯಾರು?

ಸಾಕ್ಷಿ-ಮಿ|| ಅಬುಲ್ ಕಲಾಂ ಆಜಾದ್.

ಶ್ರೀ-ರಾಜು ಕಾಂಗ್ರೆಸ್ಸಿನ ಕಾರ್ಯಕ್ರಮವನ್ನು ಸೂಚಿಸಿ ಅವರು ಹೇಳಿಕೆಯನ್ನು ಕೊಟ್ಟರುವರೋ? ಸಾಕ್ಷಿ-ನನಗೆ ಜ್ಞಾಪಕವಿಲ್ಲ.

ಶ್ರೀ ರಾಜು-ಮಹಾತ್ಮಾ ಗಾಂಧಿಯವರೇನಾದರೂ ಆ ರೀತಿ ಹೇಳಿಕೆಯನ್ನು ಕೊಟ್ಟಿರುವರೇ? ಸಾಕ್ಷಿ-ನಾನು ನೋಡಿಲ್ಲ.

ಶ್ರೀ ರಾಜು-ಬೊಂಬಾಯಿನಲ್ಲಿ ಎ.ಐ.ಸಿ.ಸಿ. ಸಭೆಯು ಮುಗಿದೊಡನೆಯೇ ಮಹಾತ್ಮಾ ಗಾಂಧೀ ಮತ್ತು ಕಾಂಗ್ರೆಸ್ ಮುಖಂಡರನ್ನು ಬಂಧಿಸಲಾಯಿತೋ? ಸಾಕ್ಷಿ-ಹೌದು.

ಶ್ರೀ ರಾಜು-ಅವರ ದಸ್ತಗಿರಿಯಾದೊಡನೆಯೇ, ಅವರ ದಸ್ತಗಿರಿಯನ್ನು ಪ್ರತಿಭಟಿಸಲು ಹರತಾಳ ಮತ್ತು ಸಭೆ ನಡೆಯಿತೇ? ಸಾಕ್ಷಿ-ನನಗೆ ಗೊತ್ತಿಲ್ಲ.

ಶ್ರೀ ರಾಜು-ಈ ಪ್ರದರ್ಶನಗಳು ಯಾವಾಗ ನಡೆದುವು? ಸಾಕ್ಷಿ-ಎ.ಐ.ಸಿ.ಸಿ. ಸಭೆ ಮತ್ತು ದಸ್ತಗಿರಿ ಆದಮೇಲೆ

ಶ್ರೀ ರಾಜು-ಆ ತಾರೀಕಿಗೆ ಮುಂಚೆಯೂ ರಾಷ್ಟ್ರೀಯ ಮುಖಂಡರು ದಸ್ತಗಿರಿಯಾದಾಗಲೆಲ್ಲಾ, ಪ್ರತಿಭಟನಾ ಸಭೆಗಳೂ ನಡೆಯುತ್ತಿರಲಿಲ್ಲವೇ? ಸಾಕ್ಷಿ-ಹೌದು.

ಶ್ರೀ ರಾಜು-ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರನ್ನು ಇದೇ ಆಗಸ್ಟ್ ೯ ಅಥವ ೧೦ ರಲ್ಲಿ ಬಂಧಿಸಲಾಯಿತೋ? ಸಾಕ್ಷಿ-ಹೌದು.

ಸಾಕ್ಷಿಯು ತನ್ನನ್ನು ಈ ಕೇಸಿನ ಇನ್ವೆಸ್ಟಿಗೇಟಿಂಗ್ ಆಫೀಸರು ಪರೀಕ್ಷಿಸಲಿಲ್ಲವೆಂದರು. ತಾವು ಸ್ಥಳೀಯ ಪತ್ರಿಕೆಗಳನ್ನು ಓದುವುದುಂಟೆಂದೂ, ಹಿಂದೆ ತಾಯಿನಾಡಿಗೆ ಚಂದಾದಾರರಾಗಿದ್ದರೆಂದೂ, ಈಗ ಚಂದಾದಾರರಾಗಿಲ್ಲವೆಂದೂ ಸಾಕ್ಷಿಯು ಹೇಳಿದರು.

ಪಬ್ಲಿಕ್ ಪ್ರಾಸಿಕ್ಯೂಟರ್-ಅವರು ಈಗ ಚಂದಾದಾರರಾಗಿಲ್ಲದಿರುವುದಕ್ಕೂ ಈಗಿನ ಮೊಕದ್ದಮೆಗೂ ಏನೂ ಸಂಬಂಧವಿಲ್ಲ.

"ಲಾಘವನಾಗಿ ಎಣಿಸಬಾರದು"

ಶ್ರೀ ರಾಜು-ಆ ಪ್ರಶ್ನೆಯನ್ನು ಹಾಕುವುದರಲ್ಲಿ ಉದ್ದೇಶವಿದೆ. ಪಬ್ಲಿಕ್ ಪ್ರಾಸಿಕ್ಯೂಟರು ಈ ವಿಷಯವನ್ನು ಲಾಘವವಾಗಿ ಎಣಿಸಬಾರದು. ಅಪಾದಿತರ ಮೇಲೆ ಹೂಡಲಾಗಿರುವ ಮೊಕದ್ದಮೆಯು ತೀವ್ರವಾದುದು. ನನ್ನ ಪಾರ್ಟಿ ಸವಾಲಿಗೆ ಆತಂಕ ತರಬಾರದು.

ತಾಯಿನಾಡಿನ ಆಗಸ್ಟ್ ೧೦ ರ ಸಂಚಿಕೆಯನ್ನು ಸಾಕ್ಷಿಯ ಕೈಗೆ ಕೊಟ್ಟು, ಅದರಲ್ಲಿ ಮುಖಂಡರ ದಸ್ತಗಿರಿಯನ್ನು ಪ್ರತಿಭಟಿಸಲು ಬೆಂಗಳೂರಿನಲ್ಲಿ ಹರತಾಳ ಮತ್ತು ಸಾರ್ವಜನಿಕ ಸಭೆ ನಡೆಯಿತೆಂದು ವರದಿಯಾಗಿರುವುದನ್ನು ತೋರಿಸಿ, ಆ ವರದಿಯನ್ನು ಓದಿರುವಿರಾ ಎಂದು ಸಾಕ್ಷಿಯನ್ನು ಕೇಳಲಾಗಿ, ತಮಗೆ ಜ್ಞಾಪಕವಿಲ್ಲವೆಂದರು.

ಮುಂದುವರಿಯುತ್ತ, ಸಾಕ್ಷಿಯು ಆಗಸ್ಟ್ ೧೦ ರಲ್ಲಿ ಚಿಕ್ಕಲಾಲ್ ಬಾಗಿನಲ್ಲಿ ಒಂದು ಸಾರ್ವಜನಿಕ ಸಭೆ ನಡೆದುದು ತಮಗೆ ಗೊತ್ತೆಂದೂ, ಆದರೆ ಅದು ಪ್ರತಿಭಟನಾ ಸಭೆ ಎಂಬುದು ಗೊತ್ತಿಲ್ಲವೆಂದೂ ಹೇಳಿದರು. ಬೆಂಗಳೂರಿನ ಕೆಲವು ಪ್ರಮುಖ ನಾಗರಿಕರು "ವಿದ್ಯಾರ್ಥಿಗಳಿಗೆ ಹಿತೋಕ್ತಿ" ಎಂದು ಹೊರಡಿಸಿದ ಪ್ರಕಟಣೆಯು ತಮಗೆ ಗೊತ್ತೆಂದೂ ಸಾಕ್ಷಿಯು ಹೇಳಿದರು.

"ಬಾರ್ಫೈಸ್‌ರ್"

ಸಾಕ್ಷಿಯು ತಾವು ೩-೪ "ಬಾರ್ಫೈರು"ಗಳನ್ನು ನೋಡಿರುವುದಾಗಿ ಹೇಳಿದರು, ಒಂದು ಆಗಸ್ಟ್ ೧೩ ರಲ್ಲಿ ಅವೆನ್ಯೂ ರಸ್ತೆಯಲ್ಲಿರುವ ಕೃಷ್ಣಾ ಬಿಲ್ಡಿಂಗ್ಸ್ ಮುಂದೆ ನಡೆಯಿತು. ಅಲ್ಲಿ ಹ್ಯಾಟುಗಳನ್ನು ಸುಡಲಾಯಿತು. ಅವು ಹೊಸದೋ ಹಳೆಯದೋ ಸಾಕ್ಷಿಗೆ ತಿಳಿಯದು. ಯಾರು ಸುಟ್ಟರೆಂಬುದೂ ತಿಳಿಯದು. ಸಾಕ್ಷಿ ಮತ್ತು ಇನ್ನೂ ಕೆಲವು ಪೋಲೀಸ್ ಆಫೀಸರುಗಳೂ ಈ ಸ್ಥಳಕ್ಕೆ ಸುಮಾರು ೧೦೦ ಗಜದೊಳಗಿದ್ದರು. ಈ ಘಟನೆಯ ಸಂಬಂಧವಾಗಿ ಪೋಲೀಸರಿಗೆ ಯಾರಿಂದಲೂ ಫಿರ್ಯಾದು ಬರಲಿಲ್ಲ.

ಶ್ರೀ ರಾಜು-ಯಾರನ್ನೂ ದಸ್ತಗಿರಿ ಮಾಡಬೇಕಾಗಿಲ್ಲದಂತಹ ಘಟನೆಯೋ ಇದು? ಸಾಕ್ಷಿ-ನಾನು ಹೇಳಲಾರೆ.

ಶ್ರೀ ರಾಜು-ಈ ಘಟನೆಯನ್ನು ಮಹತ್ವವಾದುದೆಂದು ನೀವು ಭಾವಿಸಲಿಲ್ಲ? ಸಾಕ್ಷಿ-ನಾನು ಹೇಳಲಾರೆ.

ಶ್ರೀ ರಾಜು-ಅನಂತರ ನಡೆದ ಬಾರ್ಫೈರುಗಳ ಬಗ್ಗೆಯೂ ನೀವು ಯಾರನ್ನೂ ದಸ್ತಗಿರಿ ಮಾಡಲಿಲ್ಲ? ಸಾಕ್ಷಿ-ಇಲ್ಲ.

ಶ್ರೀ ರಾಜು-ನೀವಿದ್ದ ಇತರ ಘಟನೆಗಳ ಬಗ್ಗೆ ಯಾರನ್ನಾದರೂ ದಸ್ತಗಿರಿ ಮಾಡಿದಿರಾ? ಸಾಕ್ಷಿ-ಮ್ಯಾಜಿಸ್ಟ್ರೇಟರ ಆಜ್ಞೆಗೆ ವಿರೋಧವಾಗಿ ಸಭೆ ಅಥವ ಮೆರವಣಿಗೆ ನಡೆಸಿದ್ದಕ್ಕೆ ಕೆಲವರನ್ನು ದಸ್ತಗಿರಿ ಮಾಡಿದೆ. ಈ ಬಗ್ಗೆ ಸ್ಟೇಷನ್ ಪೋಲೀಸರು ಕೆಲವು ಮೊಕದ್ದಮೆಗಳನ್ನೂ ಹೂಡಿರಬಹುದು.

ಶ್ರೀ ರಾಜು-ಈ ದಸ್ತಗಿರಿಗಳನ್ನು ಹೊರತು; ಇನ್ಯಾವ ದಸ್ತಗಿರಿಗಳನ್ನೂ ನೀವು ಮಾಡಲಿಲ್ಲವೇ? ಸಾಕ್ಷಿ-ಇಲ್ಲ.

ಶ್ರೀ ರಾಜು:-ಕಾಂಗ್ರೆಸ್ ಸಂಸ್ಥೆಯು ಕಾರ್ಯಕ್ರಮವನ್ನು ಗೊತ್ತು ಮಾಡಿದರೆ, ಅದಕ್ಕೆ ಅಧಿಕಾರ ಮುದ್ರೆ ಒತ್ತುವವರಾರು?

ಸಾಕ್ಷಿ:-ಕಾರ್ಯಕಾರಿ ಸಮಿತಿ.

ಸಾಕ್ಷಿಯ ಪಾಟಿಸವಾಲು ಇಲ್ಲಿಗೆ ಮುಗಿಯಿತು. ಸಾಕ್ಷಿಯನ್ನು ಪುನಃ ವಿಚಾರಣೆ ಪ್ರಾಸಿಕ್ಯೂಷನ್ನಿನ ಪರವಾಗಿ ಮಾಡಲಿಲ್ಲ.

ಮೊಕದ್ದಮೆಯನ್ನು ಅಕ್ಟೋಬರ್ ೨೬ಕ್ಕೆ ಮುಂದುವರಿಸಲಾಯಿತು.

ಅಪಾದಿತರ ಪರ ಶ್ರೀ ಎಲ್.ಎಸ್. ರಾಜುರವರು ಶ್ರೀಗಳಾದ ದೊರೆಸ್ವಾಮಿ ಮತ್ತು ಎಂ. ಎಲ್ ವೆಂಕಟನರಸಿಂಹಂರೊಡನೆ ವಕಾಲತ್ತು ವಹಿಸಿರುವರು ಮತ್ತು ಸರ್ಕಾರದ ಪರ ಪಬ್ಲಿಕ್ ಪ್ರಾಸಿಕ್ಯೂಟರು [ಶ್ರೀ ಜಿ.ಎಸ್. ದೊರೆಸ್ವಾಮಯ್ಯರ್‌ರವರು] ವಕಾಲತ್ತು ವಹಿಸಿರುವರು.

ತಿದ್ದುಪಡಿ

ಶ್ರೀ ಪಿ.ಬಿ. ಶ್ರೀನಿವಾಸಾಚಾರ ಮೇಲೆ ಹೂಡಲಾಗಿರುವ ಮೊಕದ್ದಮೆಯಲ್ಲಿ ಮೊನ್ನೆ ನಡೆದ ವಿಚಾರಣೆ ಬಗ್ಗೆ ನಿನ್ನೆಯ ತಾಯಿನಾಡು ಸಂಚಿಕೆಯಲ್ಲಿ ಪ್ರಕಟವಾಗಿರುವ ವರದಿಯಲ್ಲಿ ಸಾಕ್ಷಿಯೊಬ್ಬರ ಹೆಸರು "ಶ್ರೀ ಜೆ. ನರಸಿಂಹಮೂರ್ತಿ" ಎಂದಿದೆ. ಅವರ ಹೆಸರು "ಶ್ರೀ ಜೆ.ಎಂ. ಮೂರ್ತಿ" ಅಥವಾ "ಶ್ರೀ ಜೆ. ಮನೋಹರಮೂರ್ತಿ" ಎಂದಿರಬೇಕು.. ಈ ತಪ್ಪಿಗಾಗಿ ವಿಷಾದಿಸಲಾಗಿದೆ.

(ತಾ ೭ ಬಾ) ಬೆಂಗಳೂರು ಅ ೨

ಡೈಲಿನ್ಯೂಸ್ ಪತ್ರಿಕಾ ಸಂಪಾದಕರಾಗಿದ್ದ ಶ್ರೀ ಪಿ. ಆರ್. ರಾಮಯ್ಯನವರ ಮೇಲಿನ ಮೊಕದ್ದಮೆಯು ಈ ದಿನ ವಿಚಾರಣೆಗಿದ್ದಿತು. ಆದರೆ ಅದನ್ನು ಅಕ್ಟೋಬರ್ ೨೯ನೇ ತಾರೀಖಿಗೆ ಮುಂದುಹಾಕಲಾಗಿದೆ.

ಶ್ರೀ ಬಿ.ಎನ್. ಗುಪ್ತರ ಮೇಲಿನ ಮೊಕದ್ದಮೆ

(ತಾ ೭ ಬಾ) ಬೆಂಗಳೂರು ಅ ೧೨

"ಜನವಾಣಿ" ಪತ್ರಿಕೆಯ ಮಾಲೀಕರಾದ ಶ್ರೀ ಬಿ.ಎನ್ ಗುಪ್ತರ ಮೇಲೆ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಹೂಡಲಾಗಿರುವ ಮೊಕದ್ದಮೆಯ ವಿಚಾರಣೆಯು ಈ ದಿನ ಇದ್ದುದು ನವೆಂಬರ್ ೨ಕ್ಕೆ ಮುಂದುವರಿಯಿತು.

ಶ್ರೀ ಪಿ ಬಿ ಶ್ರೀನಿವಾಸಾಚಾರರವರ ಮೇಲಿನ ಮೊಕದ್ದಮೆ

(ತಾ ೭ ಬಾ) ಬೆಂಗಳೂರು ಅ ೬೧

ತಾಯಿನಾಡು ಸಂಪಾದಕರಾಗಿದ್ದ ಶ್ರೀ ಪಿ ಬಿ ಶ್ರೀನಿವಾಸಾಚಾರರವರ ಮೇಲಿನ ಮೊಕದ್ದಮೆ ಈ ದಿನ ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ಬರಬೇಕಾಗಿತ್ತು. ಆದರೆ ಅದು ನವೆಂಬರ್ ೬ನೇ ತಾರೀಕಿಗೆ ಮುಂದುಹಾಕಲ್ಪಟ್ಟಿದೆ.

ಸಿ. ಐ. ಡಿ. ೯ನೇ ಸಾಕ್ಷಿ

'ವಿಶ್ವಕರ್ನಾಟಕ' ಪತ್ರಿಕೆಯ ಮೇಲಿನ ಮೊಕದ್ದಮೆಯಲ್ಲಿ ಶ್ರೀ ಎಲ್. ಎಸ್. ರಾಜುರವರ ಪಾಟೀಸವಾಲು

"ಚಳುವಳಿಯನ್ನು ಎ. ಐ. ಸಿ. ಸಿ. ಯವರು ಮಂಜೂರು ಮಾಡಿದರೋ ಅಥವಾ ಇಲ್ಲವೋ ?"

[ತಾ ೭ ಬಾ] ಬೆಂಗಳೂರು ಅ ೨೬

'ವಿಶ್ವಕರ್ನಾಟಕ' ಪತ್ರಿಕೆಯ ಪ್ರಧಾನ ಸಂಚಾಲಕರಾದ ಶ್ರೀ ಟಿ ಟಿ ಶರ್ಮರು ಮತ್ತು ಮಾಜಿ ಸಂಪಾದಕರಾದ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರು ಮೈಸೂರು ಸರ್ಕಾರದ ಡಿಫೆನ್ಸ್ ಆಫ್ ಇಂಡಿಯಾ ರೂಲ್ ೪೧ (೧ [ಬಿ] ಪ್ರಕಾರ ಕಳೆದ ಆಗಸ್ಟ್ ೧೦ರಲ್ಲಿ ಹೊರಡಿಸಿದ ನೋಟಿಫಿಕೇಷನ್ನನ್ನು ಉಲ್ಲಂಘಿಸಿದರೆಂಬ ಅಪಾದನೆಯ ಮೇಲೆ, ಅವರ ಮೇಲೆ ಹೂಡಲಾಗಿರುವ ಮೊಕದ್ದಮೆಯಲ್ಲಿ ಸಿಟಿ ಮ್ಯಾಜಿಸ್ಟ್ರೇಟರಾದ ಶ್ರೀ ಪಿ ರಾಮಚಂದ್ರರಾಯರ ಮುಂದೆ ಈ ದಿನ ಸಿ. ಐ. ಡಿ ಇನ್ಸ್‌ಪೆಕ್ಟರಾದ ಶ್ರೀ ಬಿ. ಆರ್. ಗುಂಡೂರಾಯರನ್ನು ಪ್ರಾಸಿಕ್ಯೂಷನ್ನಿನ ಪರ ಎಂಟನೇ ಸಾಕ್ಷಿಯಾಗಿ ವಿಚಾರಣೆ ಮಾಡಲಾಯಿತು.

ಅಪಾದಿತರುಗಳು ಹಾಜರಿದ್ದರು

ಪಬ್ಲಿಕ್ ಪ್ರಾಸಿಕ್ಯೂಟರಾದ ಶ್ರೀ ಜಿ ಎಸ್. ದೊರೆಸ್ವಾಮಯ್ಯರ್‌ರವರು ಇನ್ಸ್‌ಪೆಕ್ಟರ್ ಗುಂಡೂರಾಯರಂತಹ ಕೆಲವು ಸಾಕ್ಷಿಗಳು ನಾಲ್ಕು ಮೊಕದ್ದಮೆಗಳಲ್ಲಿಯೂ ಸಾಕ್ಷ್ಯವೀಯುವರೆಂದೂ, ಆದುದರಿಂದ ಅವರ ಒಂದು ಮೊಕದ್ದಮೆಯ ಸಾಕ್ಷ್ಯವು ಉಳಿದ ಮೊಕದ್ದಮೆಗಳಲ್ಲಿಯೂ ಅದೇ ರೀತಿಯಿರುವುದೆಂದೂ ಹೇಳಿದರು.

ಸಾಮೂಹಿಕ ಚಳುವಳಿಯ ವರದಿ

ಪಬ್ಲಿಕ್ ಪ್ರಾಸಿಕ್ಯೂಟರ್‌ರ ಪ್ರಶ್ನೆಗಳಿಗೆ ಉತ್ತರವಾಗಿ, ಸಾಕ್ಷಿಯಾದ ಇನ್ಸ್‌ಪೆಕ್ಟರ್ ಗುಂಡೂರಾಯರು ತಾವು ಸಿ ಐ ಡಿ ಗೆ ಸೇರಿದವರೆಂದೂ, ತಮ್ಮ ಅಧಿಕಾರವು ಇಡೀ ಸಂಸ್ಥಾನದಲ್ಲಿ ವ್ಯಾಪ್ತವಾಗಿದೆಯೆಂದೂ ಹೇಳಿದರು. ಬೊಂಬಾಯಿಯಲ್ಲಿ ನಡೆದ ಎ.ಐ.ಸಿ.ಸಿ. ಯು ಜಾರಿ ಮಾಡಿದ "ಸಾಮೂಹಿಕ ಚಳುವಳಿ" ಗೆ ಸಂಬಂಧಪಟ್ಟ ಘಟನೆಗಳ ವರದಿಯೆಂದು ವಿಶ್ವಕರ್ನಾಟಕ ಪತ್ರಿಕೆಯ ಸೆಪ್ಟೆಂಬರ್ ೩, ೪ ಮತ್ತು ೭ರ ಸಂಚಿಕೆಗಳಲ್ಲಿ ಪ್ರಕಟವಾದ ಕೆಲವು ವರದಿಗಳನ್ನು ಸಾಕ್ಷಿಯು ಸೂಚಿಸಿದರು. ಈ ವರದಿಗಳ ಬಗ್ಗೆ ಅವು ಎಲ್ಲಿಂದ ಬಂತೆಂಬುದನ್ನು ಪತ್ರಿಕೆಯಲ್ಲಿ ನಮೂದಿಸಿಲ್ಲವೆಂದೂ ಸಾಕ್ಷಿಯು ಹೇಳಿದರು.

ಪಬ್ಲಿಕ್ ಪ್ರಾಸಿಕ್ಯೂಟರ್-ಈ "ಸಾಮೂಹಿಕ ಚಳುವಳಿ" ಯು ಯಾವಾಗ ಆರಂಭವಾಯಿತು?

ಸಾಕ್ಷಿ-ಸುಮಾರು ಆಗಸ್ಟ್ ೧೧ರಲ್ಲಿ.

ಸಾಕ್ಷಿಯು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯವನ್ನೊಳಗೊಂಡಿದ್ದ ಮತ್ತು 'ಸಾಮೂಹಿಕ ಚಳುವಳಿ' ಕುರಿತು ಗಾಂಧೀಜಿಯವರ ಲೇಖನವನ್ನೊಳಗೊಂಡಿದ್ದ ೧೯ನೇ ಜುಲೈ ತಾರೀಖಿನ ಹರಿಜನ ಪತ್ರಿಕೆಯನ್ನೂ, ಎ ಐ ಸಿ ಸಿ ನಿರ್ಣಯವನ್ನೊಳಗೊಂಡಿದ್ದ ಮತ್ತು ಶ್ರೀ ಮಹದೇವ ದೇಸಾಯಿಯವರ "ಅಹಿಂಸೆಯ ಮತ್ತು ಅಸಹಕಾರದ ಮಾರ್ಗಗಳು" ಎಂಬ ಲೇಖನವನ್ನೊಳಗೊಂಡಿದ್ದ ೯ನೇ ಆಗಸ್ಟ್ ತಾರೀಖಿನ ಹರಿಜನ ಪತ್ರಿಕೆಯನ್ನೂ ಹಾಜರುಪಡಿಸಿದರು. ಆಗಸ್ಟ್ ೭ರ ಮತ್ತು ೯ರ ಡೈಲಿ ನ್ಯೂಸ್ ಪತ್ರಿಕೆಗಳನ್ನೂ ಹಾಜರುಪಡಿಸಿ, ಮೊದಲನೆಯದರಲ್ಲಿ ವರ್ಕಿಂಗ್ ಕಮಿಟಿಯ ನಿರ್ಣಯವೂ, ಎರಡನೆಯದರಲ್ಲಿ ಎ ಐ ಸಿ ಸಿ ನಿರ್ಣಯವೂ ಪ್ರಕಟವಾಗಿರುವುದೆಂದರು. ಆಗಸ್ಟ್ ೧೬ರ ಹರಿಜನ ಪತ್ರಿಕೆಯನ್ನು ಹಾಜರುಪಡಿಸಿ, ಅದರಲ್ಲಿ "ಪೋಲೀಸ್, ಜೈಲಿನಧಿಕಾರಿಗಳು ಮತ್ತು ಮ್ಯಾಜಿಸ್ಟ್ರೇಟರು" ಇವರನ್ನು ಕುರಿತು ಒಂದು ಲೇಖನವಿದೆ ಎಂದರು.

ಆಗಸ್ಟ್ ೧೧ರ ಅನಂತರ ತಾವು ಸಂಸ್ಥಾನದ ಕೆಲವು ಕಡೆಗಳಿಗೆ ಹೋಗಿದ್ದುದಾಗಿ ಸಾಕ್ಷಿಯು ಹೇಳಿದರು. ಆ ತಾರೀಕಿನ ಅನಂತರ ಸಾಮೂಹಿಕ ಚಳುವಳಿಯು ಭಾರತದ ಇತರೆಡೆಗಳಲ್ಲಿ ನಡೆಯುತ್ತಿರುವಂತೆ ಸಂಸ್ಥಾನದಲ್ಲಿಯೂ ನಡೆಯುತ್ತಿದೆ. ಇದು ಎ ಐ ಸಿ ಸಿ ನಿರ್ಣಯವಾದ ಮೇಲೆ.

'ಚಳುವಳಿ' ಯ ಸ್ವರೂಪ

ಪಬ್ಲಿಕ್ ಪ್ರಾಸಿಕ್ಯೂಟರ್-ಸಂಸ್ಥಾನದಲ್ಲಿ ನಡೆಯುತ್ತಿರುವ ಈ ಸಾಮೂಹಿಕ ಚಳುವಳಿಯ ಸ್ವರೂಪವೇನು?

ಸಾಕ್ಷಿ-ಕಾಲೇಜುಗಳ ಮತ್ತು ಸ್ಕೂಲುಗಳ ಮುಷ್ಕರ, ಕಾನೂನು ಬದ್ಧ ಆಜ್ಞೆಗಳ ಉಲ್ಲಂ

ಘನೆ, ರಸ್ತೆಯಲ್ಲಿಯೂ, ಕಾಲೇಜು ಮತ್ತು ಸ್ಕೂಲುಗಳ ಮುಂದೆಯೂ ಕುಳಿತು ಸತ್ಯಾಗ್ರಹಾಚರಣೆ, ಆಕ್ಷೇಪಣೀಯ ಪ್ಲಕಾರ್ಡುಗಳ ಪ್ರದರ್ಶನ, "ಬ್ರಿಟಿಷರ್ಸ್ ಕ್ವಿಟ್ ಇಂಡಿಯಾ", "ಮಿಲಿಟರಿ ಅಂಡ್ ಪೋಲೀಸ್ ರಿಸೈನ್", "ಡೌನ್ ವಿತ್ ಬ್ರಿಟಿಷ್ ಇಂಪೀರಿಯಲಿಸಂ" ಎಂದು ಮುಂತಾದ ಘೋಷಣೆಗಳು, ಅನೇಕ ಕಡೆಗಳಲ್ಲಿ ಪರದೇಶಿ ವಸ್ತ್ರದಹನ, ಅಂಗಡಿಗಳನ್ನು ಮುಚ್ಚುವಂತೆ ಪ್ರೇರೇಪಣೆ, ಆಕ್ಷೇಪಣೀಯಪತ್ರಗಳ ಮತ್ತು ಪೋಸ್ಟರುಗಳ ಪ್ರದರ್ಶನ ಮತ್ತು ಹಂಚಿಕೆ, ರಸ್ತೆಗಳ ಮೇಲೆ "ಬ್ರಿಟಿಷರ್ಸ್ ಕ್ವಿಟ್ ಇಂಡಿಯಾ" ಎಂಬ ಮುಂತಾದ ಬರವಣಿಗೆ, ಟಿಕೆಟ್ಟಿಲ್ಲದ ಪ್ರಯಾಣದಿಂದ ರೈಲ್ವೆ ಮತ್ತು ಬಸ್ ಪ್ರಯಾಣಕ್ಕೆ ತೊಂದರೆ, ತಂತಿಯನ್ನು ಕತ್ತರಿಸುವುದರಿಂದ ಟೆಲಿಫೋನ್ ಸೌಕರ್ಯಕ್ಕೆ ಅಡಚಣೆ, ಪಬ್ಲಿಕ್ ಸೆಕ್ಯೂರಿಟಿ ಕಾನೂನಿನ ಪ್ರಕಾರ ಅಪರಾಧಗಳು, ಮತ್ತು ಮಿಲ್ ಕೆಲಸಗಾರರ ಮುಷ್ಕರ.

ಪಬ್ಲಿಕ್ ಪ್ರಾಸಿಕ್ಯೂಟರ್-ಈ ನಡವಳಿಕೆಗಳು ಯಾವುದೊಂದು ಪ್ರದೇಶಕ್ಕಾಗಲೀ, ಕೋಮಿನವರಿಗಾಗಲೀ ಮಾತ್ರ ಸೇರಿರಲಿಲ್ಲ?

ಸಾಕ್ಷಿ-ಇವು ಸಂಸ್ಥಾನದಲ್ಲೆಲ್ಲಾ ನಡೆದಿವೆ.

'ಚಳುವಳಿ' ಬಗ್ಗೆ ಸರ್ಕಾರಿ ಹೇಳಿಕೆಗಳು

ಸಾಕ್ಷಿಯು ಒಂದು ಲಿಖಿತ ಹೇಳಿಕೆಯನ್ನು ಹಾಜರುಪಡಿಸಿ, ಅದರಲ್ಲಿ ಸಂಸ್ಥಾನದಲ್ಲಿ ಆಗಸ್ಟ್ ೧೧ರಿಂದ ೨೦ರವರೆಗೆ ನಡೆದ 'ಚಳುವಳಿ' ಗೆ ಸಂಬಂಧಪಟ್ಟ ಘಟನೆಗಳನ್ನು ನಮೂದಿಸಿದೆ ಎಂದರು. 'ಸಾಮೂಹಿಕ ಚಳುವಳಿ' ಬಗ್ಗೆ ಮ್ಯಾಜಿಸ್ಟ್ರೇಟರ ಆಜ್ಞೆಯನ್ನು ಬೆಂಗಳೂರಿನಲ್ಲಿ ಜಾರಿ ಮಾಡಲಾಗಿತ್ತು. ಮೈಸೂರು ಸರ್ಕಾರವು ಈ 'ಚಳುವಳಿ' ಯ ಬಗ್ಗೆ ಕೆಲವು ಪ್ರಕಟಣೆಗಳನ್ನು ಹೊರಡಿಸಿದ್ದರು. ಗೌರ್ನರ್-ಜನರಲ್ಲರು ಆಗಸ್ಟ್ ೮ರಲ್ಲಿ ಮಾಡಿದ ನಿರ್ಣಯವನ್ನು ಪ್ರಕಟಿಸಿದ್ದ ಫೋರ್ಟ್‌ಸೆಂಟ್ ಜಾರ್ಜ್ ಗೆಜೆಟ್ಟಿನ ಆಗಸ್ಟ್ ೧೮ರ ಕಾಪಿಯನ್ನು ಸಾಕ್ಷಿಯು ಹಾಜರುಪಡಿಸಿದರು. ಮದ್ರಾಸ್ ಸರ್ಕಾರವು ಈ 'ಚಳುವಳಿ' ಯ ಬಗ್ಗೆ ಒಂದು ಪ್ರೆಸ್ ನೋಟನ್ನು ಹೊರಡಿಸಿದ್ದರು. ಈ 'ಚಳುವಳಿ' ಗೆ ವಿರೋಧವಾಗಿ ಮೈಸೂರು ಸರ್ಕಾರವು ಹಲವು ಕ್ರಮಗಳನ್ನು ಜರುಗಿಸಿದ್ದಾರೆ. ಸಾರ್ವಜನಿಕ ಮುಖಂಡರು ಮತ್ತು ಮೈಸೂರಿನ ವೃತ್ತ ಪತ್ರಿಕೆಗಳವರು ಈ 'ಚಳುವಳಿ' ಯನ್ನು "ಸಾಮೂಹಿಕ ಚಳುವಳಿ" ಎಂದು ಕರೆದಿದ್ದಾರೆ. ಎ ಐ ಸಿ ಸಿ ಯಾಗಲೀ, ಎ ಎಂ ಪಿ ಸಿ ಯಾಗಲೀ ಈ ನಡವಳಿಕೆಗಳಿಗೆ ಆಕ್ಷೇಪಣೆಯನ್ನು ಸೂಚಿಸಿಲ್ಲ. ಮೈಸೂರಿನ ಕೆಲವು ಕಾಂಗ್ರೆಸ್ ಮುಖಂಡರು ಎ ಐ ಸಿ ಸಿ ಅಧಿವೇಶನದಲ್ಲಿ ಹಾಜರಾಗಲು ಬೊಂಬಾಯಿಗೆ ಹೋಗಿದ್ದರು. ಇಂಡಿಯಾ ಸರ್ಕಾರದ ಹೋಂ ಮೆಂಬರು ಮತ್ತು ಇನ್‌ಫರ್ಮೇಷನ್ ಮೆಂಬರು, ಮತ್ತು ಇಂಡಿಯಾದ ಸೆಕ್ರೆಟರಿ ಆಫ್ ಸ್ಟೇಟರು ಈ ಚಳುವಳಿಯನ್ನು "ಸಾಮೂಹಿಕ ಚಳುವಳಿ" ಎಂದಿದ್ದಾರೆಂದು ಸಾಕ್ಷಿಯು ಹೇಳಿದರು. ಮಹಾತ್ಮಾಗಾಂಧಿಯವರ ಹೇಳಿಕೆಯನ್ನೊಳಗೊಂಡಿರುವುದೆಂದು ಜುಲೈ ೧೬ರ ಮದ್ರಾಸ್ ಮೇಲ್ ಪತ್ರಿಕೆಯನ್ನೂ ಸಾಕ್ಷಿಯು ಹಾಜರುಮಾಡಿದರು.

ಸಾಕ್ಷಿಯೊಡನೆ ಪಾಟಿಸವಾಲು

ಅಪಾದಿತರ ಪರ ಅಡ್ವೊಕೇಟರಾದ ಶ್ರೀ ಎಲ್. ಎಸ್. ರಾಜುರವರು ಸಾಕ್ಷಿಯೊಡನೆ ಪಾಟಿಸವಾಲು ಮಾಡಿದಾಗ, ತಾವು ಒಂದು ವರ್ಷದ ಹಿಂದೆ ಸಿ ಐ ಡಿ ಗೆ ಸೇರಿದುದಾಗಿಯೂ ಮೈಸೂರಿನಿಂದ ಯಾವ ಡಿಟೆಕ್ಟಿವ್ ಅಧಿಕಾರಿಯೂ ಬೊಂಬಾಯಿಗೆ ಎ ಐ ಸಿ ಸಿ ಅಧಿವೇಶನದಲ್ಲಿ ಹಾಜರಾಗಲು ಹೋಗಲಿಲ್ಲವೆಂದೂ ಸಾಕ್ಷಿಯು ಹೇಳಿದರು. ತಮ್ಮನ್ನು ಈ ಮೊಕದ್ದಮೆಯ ಇನ್ವೆಸ್ಟಿಗೇಟಿಂಗ್ ಆಫೀಸರು ಪರೀಕ್ಷಿಸಿಲ್ಲವೆಂದೂ ಮತ್ತು ತಾವು ಅವರಿಗೆ ಕೋರ್ಟಿಗೆ ಹಾಜರುಮಾಡಿದ ಪತ್ರಿಕೆಗಳು ಮುಂತಾದುವನ್ನು ಮೊದಲು ಹಾಜರುಮಾಡಿಲ್ಲವೆಂದೂ ಸಾಕ್ಷಿಯು ಹೇಳಿದರು. ತಾವು ಹಾಜರುಪಡಿಸಿದ ಮದ್ರಾಸ್ ಸರ್ಕಾರದ ಪ್ರೆಸ್ ನೋಟ್, ಫೋರ್ಟ್‌ಸೆಂಟ್ ಜಾರ್ಜ್ ಗೆಜೆಟ್ ಮುಂತಾದುವುಗಳಲ್ಲಿ ಪ್ರಕಟವಾದ ಅಂಶಗಳ ನಿಜತ್ವದ ಬಗ್ಗೆ ತಾವು ಪರಿಶೀಲನೆ ನಡೆಸಿಲ್ಲವೆಂದೂ, ಆದರೆ ಅವು ನಿಜವೆಂದು ತಮ್ಮ ನಂಬಿಕೆಯೆಂದೂ ಅವರು ಹೇಳಿದರು. ಆಕ್ಷೇಪಣೀಯ ಹಸ್ತಪತ್ರಗಳನ್ನು ಹಂಚಿದಾಗಲಾಗಲೀ, ಪೋಸ್ಟರುಗಳನ್ನು ಹಚ್ಚಿದಾಗಲಾಗಲೀ ತಾವು ಸ್ಥಳದಲ್ಲಿ ಹಾಜರಿರಲಿಲ್ಲವೆಂದೂ ಸಾಕ್ಷಿಯು ಹೇಳಿದರು.

'ಚಳುವಳಿ' ಬಗ್ಗೆ ಅಧಿಕೃತ ಕಾರ್ಯಕ್ರಮವಿಲ್ಲ

ಶ್ರೀ ರಾಜು-ಕಾಂಗ್ರೆಸ್ ಅಧ್ಯಕ್ಷರಾದ ಮೌಲಾನ ಅಬುಲ್ ಕಲಾಂ ಅಜಾದರು ಚಳುವಳಿಯ ಕಾರ್ಯಕ್ರಮವೇನೆಂಬುದನ್ನು ಸೂಚಿಸಿರುವ ಯಾವ ಪ್ರಕಟಣೆಯನ್ನಾದರೂ ನೋಡಿರುವಿರಾ? ಸಾಕ್ಷಿ-ಇಲ್ಲ.

ಶ್ರೀ ರಾಜು-ಮಹಾತ್ಮಾಗಾಂಧೀಯವರೇನಾದರೂ ಅಂತಹ ಪ್ರಕಟಣೆಯನ್ನು ಹೊರಡಿಸಿರುವುದನ್ನು ನೋಡಿರುವಿರಾ?

ಸಾಕ್ಷಿ-ಇಲ್ಲ.

ಆಗಸ್ಟ್ ೨೬ರ ಮತ್ತು ೨೭ರ 'ತಾಯಿನಾಡು' ವಿನಲ್ಲಿ ಮುಖಂಡರ ದಸ್ತಗಿರಿಯ ಬಗ್ಗೆ ಅಸಮಾಧಾನವನ್ನು ಸೂಚಿಸಲು ಮುಷ್ಕರ ನಡೆಯಿತೆಂದು ಪ್ರಕಟವಾಗಿರುವ ವರದಿಗಳನ್ನು ಅಕ್ಟೋಬರ್ ೫ರಲ್ಲಿ ತಾವು ನೋಡಿದುದಾಗಿ ಸಾಕ್ಷಿ ಹೇಳಿದರು.

ಶ್ರೀ ರಾಜು-ಎ ಐ ಸಿ ಸಿ ಯಲ್ಲಿ ನಿರ್ಣಯವು ಅಂಗೀಕಾರವಾದೊಡನೆಯೇ, ಕಾಂಗ್ರೆಸ್ಸಿನ ಪ್ರಮುಖ ಮುಖಂಡರೆಲ್ಲರೂ ದಸ್ತಗಿರಿಯಾದರಲ್ಲವೇ?

ಸಾಕ್ಷಿ-ಹೌದು.

ಶ್ರೀ ರಾಜು-ಅವರ ಬಿಡುಗಡೆ ಇನ್ನೂ ಆಗಿಲ್ಲ.

ಸಾಕ್ಷಿ-ಇಲ್ಲ.

ಶ್ರೀ ರಾಜು-ಅವರ ಬಿಡುಗಡೆಗಾಗಿ ಬೇಡಿಕೆಗಳು ಆಗಿವೆ?

ಸಾಕ್ಷಿ-ಹೌದು.

ಶ್ರೀ ರಾಜು-ನೀವು ತಿಳಿಸಿರುವ ಘಟನೆಗಳಾವುವೂ ಮುಖಂಡರ ದಸ್ತಗಿರಿಗೆ ಮುಂಚೆ ನಡೆದಿರಲಿಲ್ಲ?

ಸಾಕ್ಷಿ-ಇಲ್ಲ

ಶ್ರೀ ರಾಜು-ಈ ಘಟನೆಗಳು ಮುಖಂಡರ ದಸ್ತಗಿರಿಯ ಬಗ್ಗೆ ಅಸಮಾಧಾನದ ನಿಮಿತ್ತ ನಡೆದಿರಬಹುದೆಂದು ನಿಮಗೆ ತೋರಲಿಲ್ಲವೇ?

ಸಾಕ್ಷಿ-ಇಲ್ಲ.

ಶ್ರೀ ರಾಜು-ಎ ಐ ಸಿ ಸಿ ನಿರ್ಣಯದ ಪ್ರಕಾರ, ಪೂರ್ತಿ ಜವಾಬ್ದಾರಿಯು ಮಹಾತ್ಮಾಗಾಂಧೀಯವರಿಗೆ ವಹಿಸಲ್ಪಟ್ಟಿತ್ತಲ್ಲವೇ?

ಸಾಕ್ಷಿ-ಹೌದು.

ಶ್ರೀ ರಾಜು-ಸಾಮೂಹಿಕ ಚಳುವಳಿಯನ್ನು ಹೂಡುವುದಕ್ಕೆ ಮುಂಚೆ ತಾವು ವೈಸರಾಯರನ್ನು ನೋಡುವುದಾಗಿ ಮಹಾತ್ಮಾ ಗಾಂಧಿಯವರು ಹೇಳಿದ್ದರಲ್ಲವೇ?

ಸಾಕ್ಷಿ-ಹೌದು.

ಶ್ರೀ ರಾಜು-ಆದರೆ ವೈಸರಾಯರನ್ನು ನೋಡುವುದಕ್ಕೆ ಮುಂಚೆಯೇ ಮಹಾತ್ಮಾ ಗಾಂಧಿಯವರನ್ನು ದಸ್ತಗಿರಿ ಮಾಡಲಾಯಿತಷ್ಟೆ?

ಸಾಕ್ಷಿ-ಹೌದು

ಶ್ರೀ ರಾಜು-ಬೊಂಬಾಯಿಗೆ ಎ ಐ ಸಿ ಸಿ ಅಧಿವೇಶನದಲ್ಲಿ ಹಾಜರಾಗಲು ಹೋದ ಕೆಲವು ಮೈಸೂರು ಕಾಂಗ್ರೆಸ್ಸಿನವರನ್ನು ವಾಪಸು ಬರುವಾಗ್ಗೆ ಯಶವಂತಪುರದ ಸ್ಟೇಷನ್ನಿನಲ್ಲಿಯೇ ದಸ್ತಗಿರಿ ಮಾಡಲಾಯಿತಷ್ಟೇ?

ಸಾಕ್ಷಿ-ಹೌದು.

ಶ್ರೀ ರಾಜು ಬೊಂಬಾಯಿನಲ್ಲಿ ಎ ಐ ಸಿ ಸಿ ನಿರ್ಣಯದ ಮೇಲೆ, ಮೈಸೂರು ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯ ಸಭೆಯಾಗಲೀ ಅಥವಾ ಎ ಎಂ ಸಿ ಸಿ ಸಭೆಯಾಗಲೀ ನಡೆದಿಲ್ಲವಷ್ಟೇ?

ಸಾಕ್ಷಿ-ನನಗೆ ಗೊತ್ತಿಲ್ಲ.

ಶ್ರೀ ರಾಜು-ಆಗಸ್ಟ್ ೧೦ ರ ನಂತರ ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅಥವಾ ಎ ಎಂ ಸಿ ಸಿ ಯ ಸಭೆ ನಡೆದಿರುವುದೇನಾದರೂ ಗೊತ್ತೋ?

ಸಾಕ್ಷಿ-ಇಲ್ಲ.

ಮೌಲಾನ ಅಜಾದರ ಭಾಷಣದಲ್ಲೇನಿದೆ?

ಎ ಐ ಸಿ ಸಿ ಅಧಿವೇಶನದಲ್ಲಿ ಕಾಂಗ್ರೆಸ್ ಅಧ್ಯಕ್ಷರಾದ ಮೌಲಾನ ಅಜಾದರು ಮಾಡಿದ ಕೊನೆಯ ಭಾಷಣದಲ್ಲಿ ನಿರ್ಣಯವನ್ನು ಪ್ರೆಸಿಡೆಂಟ್ ರೂಸ್‌ವೆಲ್ಟರಿಗೂ, ಮಾರ್ಷಲ್ ಚಿಯಾಂಗ್ ಕೈಷೇಕ್‌ರಿಗೂ ಲಂಡನಿನಲ್ಲಿರುವ ರಷ್ಯಾ ರಾಯಭಾರಿಗೂ ಕಳುಹಿಸಿ ಅನಂತರವೂ ಪ್ರಯತ್ನವು ವಿಫಲವಾದರೆ ಭಾರತೀಯರು ಮುಷ್ಕರ ಹೂಡಬೇಕೆಂದು ಹೇಳಿರುವರೆಂದು ವರದಿಯಾಗಿದೆ ಎಂಬುದನ್ನು ಸಾಕ್ಷಿಯು ಒಪ್ಪಿಕೊಂಡರು. ಮದ್ರಾಸ್ ಸರ್ಕಾರವು "ಸಾಮೂಹಿಕ ಚಳುವಳಿ" ಯ ಬಗ್ಗೆ ಹೊರಡಿಸಿದ ಪ್ರೆಸ್ ನೋಟಿನ ಬಗ್ಗೆ ಮದರಾಸಿನ ಹಿಂದೂ ಪತ್ರಿಕೆಯು ಆಗಸ್ಟ್ ೩೦ ರಲ್ಲಿ ಬರೆದ ಸಂಪಾದಕೀಯವನ್ನು ಓದಿಲ್ಲವೆಂದು ಸಾಕ್ಷಿಯು ಹೇಳಿದರು.

ಶ್ರೀ ರಾಜು-ಎ ಐ ಸಿ ಸಿ ಯ ಮುಖಂಡರಾಗಲೀ ಅಥವಾ ಎ ಎಂ ಸಿ ಸಿ ಯ ಮುಖಂಡರಾಗಲೀ ಈ ನಡುವಳಿಕೆಗಳನ್ನು ಆಕ್ಷೇಪಿಸಿಲ್ಲವೆಂದಿರಿ ಜೈಲಿನಲ್ಲಿರುವವರೂ ಆಕ್ಷೇಪಣೆ ಮಾಡಲಿಲ್ಲವಲ್ಲಾ ಎಂದೋ?

ಸಾಕ್ಷಿ-ಕರ್ನಲ್ ಎಮರಿಯವರ ಪ್ರಕಾರ, ಮಹಾತ್ಮಾ ಗಾಂಧಿಯವರು............

ಶ್ರೀ ರಾಜು-ಈ ಪ್ರಶ್ನೆಯ ಬಗ್ಗೆ ಮಿ॥ ಎಮರಿಯವರ ವಿಷಯವೇತಕ್ಕೆ? ಮಿ॥ ಎಮರಿಯವರು ಸಾಕ್ಷ್ಯವೀಯುವ ಸಮಯ ಬಂದರೆ ಆಗ ಬೇಕಾದಷ್ಟು ಅವಕಾಶವಿರುತ್ತದೆ.

ಸಾಕ್ಷಿ-ಮಹಾತ್ಮಾ ಗಾಂಧಿಯವರೂ ಸೇರಿ ಜೈಲಿನಲ್ಲಿರುವ ಕೆಲವು ಮುಖಂಡರು.

ಶ್ರೀ ರಾಜು-ಅವರಿಗೆ ಹೊರಗೆ ನಡೆಯುತ್ತಿರುವ ಘಟನೆಗಳು ತಿಳಿಯುತ್ತಿದೆಯೋ?

ಸಾಕ್ಷಿ-ನನಗೆ ಗೊತ್ತಿಲ್ಲ.

ಶ್ರೀ ರಾಜು-ಒಳಗಿರುವವರಿಗೆ ಹೊರಗೆ ನಡೆಯುತ್ತಿರುವ ಘಟನೆಗಳೇ ತಿಳಿಯದಿದ್ದಲ್ಲಿ ಅವರು ಆ ಬಗ್ಗೆ ತಮ್ಮ ಅಭಿಪ್ರಾಯ ಕೊಡುವುದು ಹೇಗೆ?

ಮ್ಯಾಜಿಸ್ಟ್ರೇಟರು-ಅದು ಸ್ಪಷ್ಟವಾಗಿಯೇ ಇದೆ.

ಇಂಡಿಯಾ ಸರ್ಕಾರದ ಆಗಸ್ಟ್ ೮ ರ ನಿರ್ಣಯವನ್ನು ಪ್ರತಿಭಟಿಸಿ ಮಹಾತ್ಮಾ ಗಾಂಧಿಯವರು ವೈಸರಾಯರಿಗೆ ಪತ್ರ ಬರೆದಿರುವರೆಂದು ಆಗಸ್ಟ್ ೨೧ರ ಹಿಂದೂವಿನಲ್ಲಿ ಪ್ರಕಟವಾಗಿರುವ ವರದಿಯನ್ನು ಸಾಕ್ಷಿಯು ಓದಿ ತಿಳಿಸಿದರು. ಪಂಡಿತ ಮದನಮೋಹನ ಮಾಳವೀಯರು ಹಿಂಸಾತ್ಮಕ ನಡವಳಿಕೆಗಳನ್ನು ಖಂಡಿಸಿ, ಅವುಗಳಿಗೆ ಕಾರಣರಾದವರು ಗಾಂಧೀಜಿಯವರು ಇಟ್ಟಿರುವ ನಂಬಿಕೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿರುವರೆಂದು ಹೇಳಿರುವುದನ್ನು ತಾವು ಪತ್ರಿಕೆಯಲ್ಲಿ ಓದಿರುವುದಾಗಿ ಸಾಕ್ಷಿಯು ಒಪ್ಪಿಕೊಂಡರು

ವಿಶ್ವಕರ್ಣಾಟಕ ಪತ್ರಿಕೆಯು ಸೆಪ್ಟೆಂಬರ್ ೩೦ ಮತ್ತು ೭೦ ಸಂಚಿಕೆಗಳ ಪ್ರಕಾರ, ಆ ಪತ್ರಿಕೆಗೆ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರು ಸಂಪಾದಕರಾಗಿಯೂ ಪ್ರಕಟಣಕಾರರಾಗಿಯೂ ಇದ್ದರೆಂದು ಸಾಕ್ಷಿಯು ಹೇಳಿದರು. ಗಲಭೆಗಳ ವಿಚಾರದಲ್ಲಿ ತಿರುಚನಾಪಳ್ಳಿ ಕಲೆಕ್ಟರು ವ್ಯಕ್ತಪಡಿಸುವ ಅಭಿಪ್ರಾಯವು ಅಕ್ಟೋಬರ್ ೨೬ ರ ಹಿಂದೂ ಪತ್ರಿಕೆಯಲ್ಲಿ ವರದಿಯಾಗಿರುವುದಾದರೂ ಅದನ್ನು ತಾವು ಓದಿಲ್ಲವೆಂದು ಸಾಕ್ಷಿಯು ಹೇಳಿದರು.

ವಿದ್ಯಾರ್ಥಿ ಮುಷ್ಕರದ ಬಗ್ಗೆ ವಿದ್ಯಾಮಂತ್ರಿಯ ಹೇಳಿಕೆ

ವಿಶ್ವಕರ್ಣಾಟಕ ಪತ್ರಿಕೆಯಲ್ಲಿ ವರದಿಯಾಗಿರುವ ಕೆಲವು ಘಟನೆಗಳು ವಿದ್ಯಾರ್ಥಿ ಮುಷ್ಕರಕ್ಕೆ ಸಂಬಧಪಟ್ಟವೆಂದೂ, ಮೈಸೂರು ಸರ್ಕಾರದ ವಿದ್ಯಾ ಮಂತ್ರಿಗಳು ಪ್ರಜಾಪ್ರತಿಧಿಸಭೆಯಲ್ಲಿ ಅಕ್ಟೋಬರ್ ೨೩ ರಲ್ಲಿ ಮಾಡಿದ ಭಾಷಣವನ್ನು ರೇಡಿಯೋ ಮೂಲಕ ಕೇಳಿದರೆಂದೂ ಸಾಕ್ಷಿಯು ಹೇಳಿದರು.

ಶ್ರೀ ರಾಜು-ಈ ಭಾಷಣದಲ್ಲಿ ವಿದ್ಯಾ ಮಂತ್ರಿಗಳು ಮಹಾತ್ಮಾ ಗಾಂಧಿಯವರು ವಿದ್ಯಾರ್ಥಿಗಳನ್ನು ಮುಷ್ಕರ ಹಿಡಿಯಬೇಕೆಂದು ಹೇಳಿಲ್ಲವೆಂದೂ, ಮುಖಂಡರ ದಸ್ತಗಿರಿಯ ಬಗ್ಗೆ ಸಹಜವಾಗಿ ಉಂಟಾದ ಸಹಾನುಭೂತಿಯನ್ನು ತೋರ್ಪಡಿಸಲು ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ಹೋಗಲಿಲ್ಲವೆಂದೂ, ಆದುದರಿಂದ ಶಾಲೆಗಳನ್ನೂ ಕಾಲೇಜುಗಳನ್ನೂ ತಾವಾಗಿಯೇ ಕೊಂಚ ಕಾಲ ಮುಚ್ಚಿಸಿದರೆಂದೂ ಹೇಳಿರುವುದು ಜ್ಞಾಪಕವಿದೆಯೋ? ಸಾಕ್ಷಿ-ಇಲ್ಲ. ವಿದ್ಯಾ ಮಂತ್ರಿಗಳ ಭಾಷಣವು ವರದಿಯಾಗಿರುವ ದೇಶಬಂಧುವಿನ ಅಕ್ಟೋಬರ್ ೨೪ ರ ಸಂಚಿಕೆಯನ್ನು ಹಾಜರುಪಡಿಸಲಾಯಿತು. ಮೈಸೂರು ಸರ್ಕಾರವು ಹೊರಡಿಸಿದ ಪ್ರಕಟಣೆಯಲ್ಲಿ "ಸಾಮೂಹಿಕ ಚಳುವಳಿ" ಎಂಬ ಪದಗಳನ್ನು ಉಪಯೋಗಿಸಿಲ್ಲವೆಂದೂ ಸಾಕ್ಷಿಯು ಒಪ್ಪಿಕೊಂಡರು. ವಿಶ್ವಕರ್ಣಾಟಕವು ಬೆಂಗಳೂರಿನಲ್ಲಿ ಪ್ರಕಟವಾಗುವುದೆಂದೂ, ಸೂಚಿಸಲ್ಪಟ್ಟ ವರದಿಗಳು ಬೆಂಗಳೂರಿನ ಘಟನೆಗಳೆಂದೂ ಸಾಕ್ಷಿಯು ಹೇಳಿದರು. ಮತ್ತು ಮದ್ರಾಸಿನ ಹಿಂದೂ ಪತ್ರಿಕೆಯಲ್ಲಿ ಮದರಾಸಿನ ವರದಿಗಳಿಗೆ ವರದಿಗಳ ಮೂಲವನ್ನು ನಮೂದಿಸುವುದಿಲ್ಲವೆಂದೂ ಸಾಕ್ಷಿಯು ಹೇಳಿದರು.

ಶ್ರೀ ರಾಜುರವರು ಈ ಮೊಕದ್ದಮೆಯಲ್ಲಿ ಇನ್ನೂ ಕೆಲವು ಪತ್ರಿಕೆಗಳನ್ನು ಹಾಜರುಪಡಿಸಬೇಕಾಗಿದೆಯೆಂದರು.

ಮ್ಯಾಜಿಸ್ಟ್ರೇಟರು-ಪತ್ರಿಕೆಗಳನ್ನು ಹಾಜರುಪಡಿಸುವುದರಲ್ಲಿ ಇಬ್ಬರ 'ಪ್ರೈವೇಟ್'ವೋ?

ಶ್ರೀ ರಾಜು-ಹಾಗಿಲ್ಲ ಶ್ರೀ ದೊರೆಸ್ವಾಮಯ್ಯನವರು ಸುಮ್ಮನೆ ಪತ್ರಿಕೆಗಳನ್ನು ಹಾಜರುಪಡಿಸಿಲ್ಲ. ಅವರು ಕೆಲವು ತೀರ್ಮಾನಗಳಿಗೆ ಬರುತ್ತಾರೆ. ನಾನು ಅವರ ತೀರ್ಮಾನಗಳನ್ನು ವಿರೋಧಿಸಿ, ಕೋರ್ಟು ಬೇರೆ ತೀರ್ಮಾನಗಳಿಗೆ ಬರುವಂತೆ ನಾನು ಮಾಡಬೇಕಾಗಿದೆ.

ಮೊಕದ್ದಮೆಯನ್ನು ನವೆಂಬರ್ ೧೬ ಕ್ಕೆ ಮುಂದುವರಿಸಲಾಯಿತು ಆ ದಿನ ಇದೇ ಸಾಕ್ಷಿಯ ವಿಚಾರಣೆಯು ನಡೆಯುವುದು.

ಶ್ರೀ ಎಲ್ ಎಸ್ ರಾಜುರವರು ಶ್ರೀ ಜಿ ಆರ್ ದೊರೆಸ್ವಾಮಯ್ಯ ಮತ್ತು ಶ್ರೀ ಎಂ ಎಲ್ ವೆಂಕಟನರಸಿಂಹರೊಡನೆ ಅಪಾದಿತರ ಪರ ವಕಾಲತ್ತು ವಹಿಸಿರುವರು. ಪಬ್ಲಿಕ್ ಪ್ರಾಸಿಕ್ಯೂಟರಾದ ಶ್ರೀ ಜಿ ಎಸ್ ದೊರೆಸ್ವಾಮಯ್ಯನವರು ಸರ್ಕಾರದ ಪರ ವಕಾಲತ್ತು ವಹಿಸಿರುವರು

"ಡೈಲಿ ನ್ಯೂಸ್" ಮೊಕದ್ದಮೆ

ಪ್ರಾಸಿಕ್ಯೂಷನ್ ಪರ ಸಿ.ಐ.ಡಿ. ಇನ್ಸ್‌ಪೆಕ್ಟರ ಸಾಕ್ಷ್ಯ

ಹಿಂಸಾಕೃತ್ಯಗಳ ಬಗ್ಗೆ ಗಾಂಧೀಜಿಯ ಕೊನೆ ಹೇಳಿಕೆ

(ತಾ ೦ ಬಾ) ಬೆಂಗಳೂರು ಅ ೨೯

ಮೈಸೂರು ಸರ್ಕಾರವು ಕಳೆದ ಆಗಸ್ಟ್ ೧೧ ರಲ್ಲಿ ಡಿಫೆನ್ಸ್ ಆಫ್ ಇಂಡಿಯಾ ರೂಲ್ ೪೧ (೧) (ಬಿ) ಪ್ರಕಾರ ಹೊರಡಿಸಿದ ನೋಟಿಫಿಕೇಷನ್ನನ್ನು "ಡೈಲಿ ನ್ಯೂಸ್" ಪತ್ರಿಕೆಯ ಸಂಪಾದಕರಾಗಿದ್ದಾಗ ಉಲ್ಲಂಘಿಸಿದರೆಂದು ಶ್ರೀ ಪಿ. ಆರ್. ರಾಮಯ್ಯನವರ ಮೇಲೆ ಹೂಡಲಾಗಿರುವ ಮೊಕದ್ದಮೆಯಲ್ಲಿ ಸಿಟಿ ಮ್ಯಾಜಿಸ್ಟ್ರೇಟರಾದ ಶ್ರೀ ಸಿ ರಾಮಚಂದ್ರರಾಯರ ಮುಂದೆ ಈ ದಿನ ಮಧ್ಯಾಹ್ನ ಪ್ರಾಸಿಕ್ಯೂಷನ್ನಿನ ಕಡೆ ಎರಡನೇ ಸಾಕ್ಷಿಯಾಗಿ ಸಿ ಐ ಡಿ. ಇನ್ಸ್‌ಪೆಕ್ಟರಾದ ಶ್ರೀ ಬಿ ಆರ್. ಗುಂಡೂರಾಯರ ವಿಚಾರಣೆಯಾಯಿತು.

ಶ್ರೀ ಪಿ. ಆರ್. ರಾಮಯ್ಯನವರು ಕುರ್ಚಿಯ ಮೇಲೆ ಕುಳಿತಿದ್ದರು.

ಪಬ್ಲಿಕ್ ಪ್ರಾಸಿಕ್ಯೂಟರ್‌ರವರ ಪ್ರಶ್ನೆಗಳಿಗೆ ಉತ್ತರವೀಯುತ್ತ, ಸಾಕ್ಷಿಯು ಎ.ಐ.ಸಿ.ಸಿ ಯು ಕಳೆದ ಆಗಸ್ಟ್ ೮ರಲ್ಲಿ ನಿರ್ಣಯ ಮಾಡಿದ ಮೇಲೆ "ಸಾಮೂಹಿಕ ಚಳುವಳಿ"ಯನ್ನು ಜಾರಿ ಮಾಡಲಾಯಿತೆಂದೂ, ಡೈಲಿ ನ್ಯೂಸ್ ಪತ್ರಿಕೆಯ ಸೆಪ್ಟೆಂಬರ್ ೧೦ರ ಒಳಗಿನ ಸಂಚಿಕೆಗಳಲ್ಲಿ ಈ "ಚಳುವಳಿಗೆ" ಸಂಬಂಧಪಟ್ಟ ಘಟನೆಗಳ ವರದಿಗಳಿವೆಯೆಂದೂ ಹೇಳಿ, ಕೆಲವು ವರದಿಗಳನ್ನು ತೋರಿಸಿದರು. ಈ ವರದಿಗಳಿಗೆ ಮೂಲವನ್ನು ಪತ್ರಿಕೆಯಲ್ಲಿ ನಮೂದಿಸಿಲ್ಲವೆಂದರು. ಈ "ಸಾಮೂಹಿಕ ಚಳುವಳಿ"ಯು ಸಂಸ್ಥಾನದಲ್ಲೆಲ್ಲಾ ಹಬ್ಬಿತ್ತು ಈ "ಚಳುವಳಿ"ಯು ವಿದ್ಯಾರ್ಥಿಗಳ ಮತ್ತು ಕೆಲಸಗಾರರ ಮುಷ್ಕರ, ಮಾರ್ಗಗಳಿಗೆ ಆತಂಕ, ಆಕ್ಷೇಪಣೀಯವಾದ ಪ್ಲಕಾರ್ಡುಗಳ ಪ್ರದರ್ಶನ, ಆಕ್ಷೇಪಣೀಯವಾದ ಹಸ್ತಪತ್ರಿಕೆಗಳ ಹಂಚಿಕೆ, "ಬ್ರಿಟಿಷರ್ ಕ್ವಿಟ್ ಇಂಡಿಯಾ" ಮುಂತಾದ ಘೋಷಣೆಗಳು ಮೊದಲಾದ ರೀತಿಯಲ್ಲಿ ನಡೆಯಿತು. ಮೈಸೂರು ಸರ್ಕಾರವು ಮೈಸೂರು ಕಾಂಗ್ರೆಸ್ ಕಮಿಟಿಗಳನ್ನು ಅಕ್ರಮಕೂಟಗಳೆಂದು ನೋಟಿಫಿಕೇಷನ್ ಹೊರಡಿಸಿತ್ತು. ಗೌರ್ನರ್ ಜನರಲ್ಲರು ಕಳೆದ ಆಗಸ್ಟ್ ೮ರಲ್ಲಿ ಈ 'ಚಳುವಳಿ'ಯ ಬಗ್ಗೆ ಒಂದು ನಿರ್ಣಯವನ್ನು ಹೊರಡಿಸಿದ್ದರು ಈ ಚಳುವಳಿಯನ್ನು "ಸಾಮೂಹಿಕ ಚಳುವಳಿ" ಎಂದು ಅನೇಕ ಪ್ರಮುಖರು ಮತ್ತು ವೃತ್ತಪತ್ರಿಕೆಗಳು ಕರೆದಿದ್ದಾರೆ

ಈ ಚಳುವಳಿಯ ಬಗ್ಗೆ ಎ.ಐ.ಸಿ.ಸಿ. ಯಾಗಲೀ, ಮೈಸೂರು ಕಾಂಗ್ರೆಸ್ಸಿನವರಾಗಲೀ ಆಕ್ಷೇಪಣೆ ಎತ್ತಿಲ್ಲ. ಮೈಸೂರು ಕಾಂಗ್ರೆಸ್ಸಿನ ಕೆಲವು ಮುಖಂಡರು ಬೊಂಬಾಯಿಗೆ ಎ ಐ ಸಿ. ಸಿ. ಸಭೆಯಲ್ಲಿ ಹಾಜರಿರಲು ಹೋಗಿದ್ದರು

ಶ್ರೀ ರಾಜುರವರ ಪಾಟೀಸವಾಲು

ಅಪಾದಿತರ ಪರ ಅಡ್ವೋಕೇಟರಾದ ಶ್ರೀ ಎಲ್. ಎಸ್. ರಾಜುರವರು ಸಾಕ್ಷಿಯೊಡನೆ ಪಾಟೀಸವಾಲು ನಡೆಸಿದರು ತಾವು ಹೇಳಿದ ಘಟನೆಗಳು "ಸಾಮೂಹಿಕ ಚಳುವಳಿ"ಯ ಕಾರ್ಯಕ್ರಮವನ್ನಾಗಲೀ ಕಾಂಗ್ರೆಸ್ ಅಧ್ಯಕ್ಷರ ಅಥವ ಮಹಾತ್ಮಾ ಗಾಂಧಿಯವರ ಯಾವ ಪ್ರಕಟಣೆಯನ್ನು ತಾವು ನೋಡಿಲ್ಲವೆಂದು ಸಾಕ್ಷಿಯು ಒಪ್ಪಿಕೊಂಡರು ಎ ಐ ಸಿ ಸಿ ಯ ನಿರ್ಣಯವನ್ನು ಮಾಡಿದೊಡನೆಯೇ ಮಹಾತ್ಮಾ ಗಾಂಧಿಯವರು ಮತ್ತು ಅನೇಕ ಪ್ರಮುಖ ಕಾಂಗ್ರೆಸ್ ಮುಖಂಡರ ದಸ್ತಗಿರಿಯಾಯಿತು. ಅವರ ಬಿಡುಗಡೆಗಾಗಿ ನಾನಾ ಕಡೆಗಳಲ್ಲಿ ಕೋರಿಕೆಗಳನ್ನು ಮಾಡಲಾಗಿದೆ. ಆದರೆ ಅವರ ಬಿಡುಗಡೆ ಇನ್ನೂ ಆಗಿಲ್ಲ ಕಾಂಗ್ರೆಸ್ ಮುಖಂಡರ ದಸ್ತಗಿರಿಗೆ ಮುಂಚೆ ತಾವು ಸೂಚಿಸಿದ ಘಟನೆಗಳಾವುವೂ ನಡೆಯಲಿಲ್ಲವೆಂದು ಸಾಕ್ಷಿಯು ಒಪ್ಪಿಕೊಂಡರು. ಈ ಘಟನೆಗಳು ಮುಖಂಡರ ದಸ್ತಗಿರಿಯಿಂದ ಜನರಲ್ಲಿ ಉಂಟಾದ ಪ್ರತಿಕ್ರಿಯೆಯ ಫಲವೆಂಬುದನ್ನು ತಮಗೆ ಹೇಳಲಿಕ್ಕಿಲ್ಲವೆಂದೂ ಸಾಕ್ಷಿಯು ಹೇಳಿದರು.

ಇನ್ನೂ ಪಾಟೀಸವಾಲಿಗೆ ಉತ್ತರವಾಗಿ, ಸಾಕ್ಷಿಯು ಶ್ರೀಮತಿ ಕಮಲಾದೇವಿಯವರು ತಮ್ಮ ದಸ್ತಗಿರಿಗೆ ಸುಮಾರು ಒಂದು ವಾರದ ಮುಂಚೆ ಬೆಂಗಳೂರಿಗೆ ಬಂದಿರಬಹುದೆಂದು ಹೇಳಿದರು ಕಳೆದ ಆಗಸ್ಟ್ ೧೧ ರಲ್ಲಿ ಸರ್ಕಾರವು ನೋಟಿಫಿಕೇಷನ್ನನ್ನು ಹೊರಡಿಸಿದ ಮೇಲೆ ಮತ್ತು ಅಪಾದಿತರು ಕಳೆದ ಸೆಪ್ಟೆಂಬರ್ ೧೦ರಲ್ಲಿ ದಸ್ತಗಿರಿಯಾದ ದಿವಸದೊಳಗೆ ಡೈಲಿ ನ್ಯೂಸ್ ಪತ್ರಿಕೆಯಲ್ಲಿ ಈ 'ಚಳುವಳಿ'ಗೆ ಸಂಬಂಧಪಟ್ಟ ವರ್ತಮಾನಗಳಿಗೆ ಮೂಲವನ್ನು ಸೂಚಿಸಿರಲಿಲ್ಲವೆಂದೂ, ಆದರೆ ಆಗಾಗ್ಗೆ ತಾವು ವರದಿ ಮಾಡಲಿಲ್ಲವೆಂದೂ, ಇನ್ನಾರಾದರೂ ಪೋಲೀಸ್ ಆಫೀಸರು ವರದಿ ಮಾಡಿರುವರೋ ಇಲ್ಲವೋ ತಮಗೆ ಗೊತ್ತಿಲ್ಲವೆಂದೂ ಸಾಕ್ಷಿಯು ಹೇಳಿದರು. ಡೈಲಿನ್ಯೂಸ್ ಪತ್ರಿಕೆಯು ಕಳೆದ ಆಗಸ್ಟ್ ೧೭ರಿಂದ ೩೧ರವರೆಗೆ ಪ್ರಕಟವಾಗಲಿಲ್ಲವೆಂದೂ ಸಾಕ್ಷಿಯು ಹೇಳಿದರು.

ನ್ಯಾಯಮಂತ್ರಿಯೊಡನೆ ಆಪಾದಿತರ ಭೇಟಿ

ಶ್ರೀ ರಾಜು:-ಈ ಅವಧಿಯಲ್ಲಿ ಅಪಾದಿತರು ಮತ್ತು ಉಳಿದ ಸಂಪಾದಕರು ನ್ಯಾಯಮಂತ್ರಿಯನ್ನು ಭೇಟಿಮಾಡಿದ್ದು ಗೊತ್ತೋ? ಸಾಕ್ಷಿ:-ಇಲ್ಲ. ಮೈಸೂರಿನಲ್ಲಿಯೂ ಮೈಸೂರಿನ ಹೊರಗೂ ನಡೆದ ಗಲಭೆಗಳು ಮುಖಂಡರ ದಸ್ತಗಿರಿಯ ಪರಿಣಾಮವಾಗಿ ನಡೆದುವೆಂದೂ, ಈ ಗಲಭೆಗಳಿಗೆ ಅಹಿಂಸಾವ್ರತಿಗಳಾದ ಮಹಾತ್ಮಾ ಗಾಂಧಿಯವರು ಒಪ್ಪಿರುವರೆಂದು ಹೇಳುವುದು ತಪ್ಪೆಂದೂ ಬೆಂಗಳೂರಿನ ಕೆಲವು ಗಣ್ಯ ಪ್ರಜೆಗಳು ಹೊರಡಿಸಿದ ಮನವಿಯನ್ನು ನೋಡಿರುವುದಾಗಿ ಸಾಕ್ಷಿಯು ಒಪ್ಪಿಕೊಂಡರು.

ಶ್ರೀ ರಾಜು:-ನೀವು ಮಹಾತ್ಮಾ ಗಾಂಧಿಯವರ ಜೀವನ ಚರಿತ್ರೆಯನ್ನೂ, ಅವರ ಉಪದೇಶಗಳನ್ನೂ ಬಲ್ಲಿರೋ? ಸಾಕ್ಷಿ:-ಸ್ವಲ್ಪಮಟ್ಟಿಗೆ ಬಲ್ಲೆ.

ಶ್ರೀ ರಾಜು:-ಅಹಿಂಸೆಯು ಅವರ ಜೀವನ ಸೂತ್ರವಷ್ಟೆ?

ಸಾಕ್ಷಿ:-ಇತ್ತು. ಆದರೆ ಅದು ಇತ್ತೀಚೆಗೆ ಸ್ವಲ್ಪ ಬದಲಾವಣೆ ಹೊಂದಿದೆ ಅವರ ಇತ್ತೀಚಿನ ಹೇಳಿಕೆಗಳ ಪ್ರಕಾರ, ಆಕ್ರಮಣಕಾರರೊಡನೆ ಭಾರತೀಯ ಸೈನ್ಯಗಳು ಹೋರಾಡಲು ಅವರು ಒಪ್ಪಿದರು.

ಶ್ರೀ ರಾಜು:- ಆಕ್ರಮಣಕಾರರೆಂದರೆ ಆಕ್ಸಿಸ್ ರಾಷ್ಟ್ರಗಳ.? ಸಾಕ್ಷಿ:-ಆಕ್ಸಿಸ್ ರಾಷ್ಟ್ರಗಳೇ ಅಲ್ಲದೆ. ಬ್ರಿಟಿಷ್ ಸರಕಾರ ಮತ್ತು ಭಾರತೀಯ ಸ್ವಾತಂತ್ರ್ಯಕ್ಕೆ ಆತಂಕವಾಗುವ ಇತರ ರಾಷ್ಟ್ರ.

ಶ್ರೀ ರಾಜು:-ಅವರು ಭಾರತೀಯ ಸೈನ್ಯವು ಬ್ರಿಟಿಷರೊಡನೆ ಹೋರಾಡಬೇಕೆಂದು ಅಪೇಕ್ಷಿಸಿದರೇ? ಸಾಕ್ಷಿ:-ನನಗೆ ಗೊತ್ತಿಲ್ಲ.

ಗಾಂಧಿಜಿ ಮತ್ತು ಅಹಿಂಸೆ

ಸಾಕ್ಷಿಯು ಎ.ಐ.ಸಿ.ಸಿ ಯಲ್ಲಿ ಮಹಾತ್ಮಾ ಗಾಂಧಿಯವರು ಮಾಡಿದ ಮೊದಲನೇ ಭಾಷಣವನ್ನು ಕಳೆದ ಆಗಸ್ಟ್ ೯ರ ಹಿಂದೂ ಪತ್ರಿಕೆಯಲ್ಲಿ ಓದಿರುವುದಾಗಿ ಹೇಳಿದರು. ಈ ಭಾಷಣದಲ್ಲಿ ಮಹಾತ್ಮಾ ಗಾಂಧಿಯವರು "ನನ್ನ ಜೀವಮಾನದಲ್ಲಿಯೇ ಅತ್ಯಂತ ಹಿರಿದಾದ ಸಂಗ್ರಾಮವನ್ನು ಹೂಡುವ ಸಮಯದಲ್ಲಿ ಕೂಡ ನನ್ನಲ್ಲಿ ಬ್ರಿಟಿಷರ ಬಗ್ಗೆ ದ್ವೇಷವಿಲ್ಲ. ಅವರು ಕಷ್ಟದಲ್ಲಿರುವುದರಿಂದ ಅವರಿಗೆ ಅತಿ ಕಷ್ಟಂಟುಮಾಡಬೇಕೆಂಬ ಬುದ್ಧಿಯೇ ನನ್ನಲ್ಲಿಲ್ಲ. ಅಂತಹ ಬುದ್ಧಿಯು ನನಗೆ ಯಾವಾಗಲೂ ಬಂದಿಲ್ಲ. ಕೋಪ ಬಂದಾಗ ಅವರು ನಿಮ್ಮನ್ನು ಉದ್ರೇಕಿಸಲು ಪ್ರಯತ್ನಿಸಬಹುದು. ಆದರೆ ನೀವು ಯಾವಾಗಲೂ ಹಿಂಸೆಮಾಡಕೂಡದು ಮತ್ತು ಅಹಿಂಸೆಗೆ ಅಗೌರವ ತರಕೂಡದು. ಅಂತಹದೇನಾದರೂ ಆದರೆ ನಾನು ಎಲ್ಲಿದ್ದರೂ ಜೀವಂತವಾಗಿರುವುದಿಲ್ಲ. ಅವರ ರಕ್ತ ನಿಮ್ಮ ಮೇಲೆ. ಇದನ್ನು ನೀವು ತಿಳಿಯದಿದ್ದರೆ, ನೀವು ಈ ನಿರ್ಣಯವನ್ನು ತಿರಸ್ಕರಿಸುವುದೇ ಮೇಲು. ಅದು ನಿಮಗೆ ಘನತೆಗೆ ಒಳಿತು" ಎಂದೂ, ಮತ್ತು ನಿಮ್ಮ ಮುಂದಿರುವ ನಿರ್ಣಯವು ನೀವು ಕೂಡಮುಂದೂಕದಂತಿರಲು ಆಶಿಸುವುದಿಲ್ಲವೆಂದು ತಿಳಿಸುತ್ತದೆ. ನಾವು ಪ್ರಪಂಚ ಫೆಡರೇಷನ್ನಿಗಾಗಿ ಪ್ರಯತ್ನಿಸುತ್ತಿದ್ದೇವೆ. ಅದು ಅಹಿಂಸೆಯಿಂದ ಮಾತ್ರವೇ ಸಾಧ್ಯ. ಸಾಟಿಯೇ ಇಲ್ಲದ ಅಹಿಂಸೆಯನ್ನು ಪ್ರಯೋಗಿಸುವುದರಿಂದಲೇ ಶಸ್ತ್ರಸನ್ಯಾಸವು ಸಾಧ್ಯ. ನಾನು ಕೆಲವರು ಕೇವಲ ತಾತ್ವಿಕನೆನ್ನುವರು. ಆದರೆ ನಾನು ನಿಜವಾಗಿಯೂ ವ್ಯಾಪಾರಿ. ಸ್ವರಾಜ್ಯವನ್ನು ಸಂಪಾದಿಸುವುದೇ ನನ್ನ ಕಾರ್ಯ. ನೀವು ಈ ನಿರ್ಣಯವನ್ನು ಅಂಗೀಕರಿಸದಿದ್ದರೆ ನನಗೆ ವ್ಯಸನವಾಗದು. ಅದಕ್ಕೆ ಬದಲಾಗಿ ನನಗೆ ಸಂತೋಷವೇ. ಏಕೆಂದರೆ ಅದರಿಂದ ನನ್ನ ಮೇಲೆ ನೀವು ಹೊರಿಸುವುದರಲ್ಲಿರುವ ಪ್ರಚಂಡ ಜವಾಬ್ದಾರಿಯು ಹೋಗಿಬಿಡುವುದು. ನೀವು ಅಹಿಂಸೆಯನ್ನು ನೀತಿಯನ್ನಾಗಿ ಒಪ್ಪಬೇಕೆಂಬುದು ನನ್ನ ಅಪೇಕ್ಷೆ. ನನಗೆ ಅದು ಜೀವನ ಸೂತ್ರ. ನೀವು ಅದನ್ನು ನೀತಿಯನ್ನಾಗಾದರೂ ಒಪ್ಪಬೇಕು. ಶಿಸ್ತಿನ ಶಿಪಾಯಿಗಳಂತೆ ನೀವು ಹೋರಾಟದಲ್ಲಿ ತೊಡಗುವಾಗ ಅದನ್ನು ಪೂರ್ತಿ ಪಾಲಿಸಬೇಕು" ಎಂದು ಹೇಳಿರುವರು.

ಅಪಾದಿತರ ಹೇಳಿಕೆ

ಶ್ರೀಗಳಾದ ಟಿ. ಟಿ. ಶರ್ಮನ್, ಓ. ಆರ್. ರಾಮಯ್ಯ, ಬಿ. ಎನ್. ಗುಪ್ತ, ಪಿ. ಟಿ. ಶ್ರೀನಿವಾಸನ್ ರವರು ಒಂದು ಸಂಯುಕ್ತ ಹೇಳಿಕೆಯನ್ನು ಆಗಸ್ಟ್ ೧೫ರಲ್ಲಿ ಕೊಟ್ಟಿದ್ದು, ಅದರಲ್ಲಿ "ಪೋಲೀಸ್ ಸ್ಟೇಷನ್ ಗಳಿಗೂ ರೈಲ್ವೆ ಸ್ಟೇಷನ್ ಗಳಿಗೂ ಬೆಂಕಿ ಹಚ್ಚುವುದನ್ನು ಪ್ರಾಣಾಪಾಯಕರವಾದ ಕ್ರೂರವೂ ಅಸಭ್ಯವೂ ಆದ ಕೃತ್ಯಗಳನ್ನು ನಡೆಸುವುದನ್ನು ಗಾಂಧೀಜಿಯವರು ಖಂಡಿತವಾಗಿಯೂ ಒಪ್ಪುವುದಿಲ್ಲ. ಆದಕಾರಣ ಮೈಸೂರಿನಲ್ಲಿ ಯಾರೂ ಅಂತಹ ಘೋರ ಕೃತ್ಯಗಳನ್ನು ಮಾಡಬಾರದೆಂದು ನಾವು ವಿಜ್ಞಾಪನೆ ಮಾಡಿಕೊಳ್ಳುತ್ತೇವೆ" ಎಂದು ಹೇಳಿರುವುದನ್ನು ಓದಿರುವುದಾಗಿ ಸಾಕ್ಷಿಯು ಹೇಳಿದರು. ಶ್ರೀ ಎಲ್. ಎಸ್. ರಾಜುರವರು ಒಂದು ಹೇಳಿಕೆಯನ್ನು ಕೊಟ್ಟು, ಅದರಲ್ಲಿ ಮಹಾತ್ಮಾ ಗಾಂಧಿಯವರು ಹಿಂಸಾತ್ಮಕ ಕಾರ್ಯವನ್ನು ಒಪ್ಪುವುದಿಲ್ಲವೆಂದೂ ಅದು ಅವರ ಅಹಿಂಸೆಗೆ ವಿರೋಧವೆಂದೂ ಮುಂತಾಗಿ ಹೇಳಿರುವುದು ಆಗಸ್ಟ್ ೧೭ರ ಡೈಲಿ ನ್ಯೂಸ್ ಪತ್ರಿಕೆಯಲ್ಲಿ ಪ್ರಕಟವಾಗಿರುವುದನ್ನು ದಾಖಲುಮಾಡಲಾಯಿತು. ಮುಷ್ಕರ ನಡವಳಿಕೆಯು ಕಾಂಗ್ರೆಸ್ ಕಾರ್ಯಕ್ರಮವಲ್ಲವೆಂದು ರಾಜಾಜಿಯವರು ಹೇಳಿರುವುದನ್ನು ಒಪ್ಪಿ ನ್ಯಾಯಮಂತ್ರಿಗಳು ಆಗಸ್ಟಿನಲ್ಲಿ ಸಿಟಿ ವೈ.ಎಂ.ಸಿ.ಎ.ಯಲ್ಲಿ ಮಾಡಿದ ಭಾಷಣದಲ್ಲಿ ಹೇಳಿದರೆಂಬುದನ್ನು ಸಾಕ್ಷಿಯು ಒಪ್ಪಿದರು.

ಶ್ರೀ ರಾಜುರವರು ಆಗಸ್ಟ್ ೨೦ರ ಡೈಲಿ ನ್ಯೂಸ್ ಪತ್ರಿಕೆಯಲ್ಲಿ ಬೆಂಗಳೂರಿನ ಘಟನೆ ಬಗ್ಗೆ ಪ್ರಕಟವಾಗಿರುವ ವರದಿಯಲ್ಲಿ ಪೋಲೀಸರು ಪರಿಸ್ಥಿತಿಯನ್ನು ಅನುಕರಣೀಯ ಸಹನೆಯಿಂದ ಎದುರಿಸಿದರೆಂದು ಸೂಚಿಸಿರುವುದನ್ನು ತೋರಿಸಿದರು. ಸಾಕ್ಷಿಯು ಒಪ್ಪಿದರು.

ಮ್ಯಾಜಿಸ್ಟ್ರೇಟ್:- ಪೋಲೀಸರಿಗೆ ಪ್ರಶಂಸೆ.

ಶ್ರೀ ರಾಜು: ಪೋಲೀಸರನ್ನು ಪ್ರಶಂಸಿಸುವ ಕಡೆ ಪತ್ರಿಕೆಗಳು ಹಾಗೆ ಮಾಡಲು ಹಿಂಜರಿದಿಲ್ಲ.

ಸಾಕ್ಷ್ಯವು ಮುಗಿಯಿತು. ಮೊಕದ್ದಮೆಯನ್ನು ನವೆಂಬರ್ ೧೩ಕ್ಕೆ ಮುಂದೂಡಿಸಲಾಯಿತು.

ಅಪಾದಿತರ ಪರ ಶ್ರೀ ಎಲ್. ಎಸ್. ರಾಜುರವರು, ಶ್ರೀಗಳಾದ ಜಿ. ಆರ್. ದೊರೆಸ್ವಾಮಯ್ಯರ್ ಮತ್ತು ಎಂ.ಎಲ್. ವೆಂಕಟನರಸಿಂಹಂ ರವರೊಡನೆ ವಕಾಲತ್ತು ವಹಿಸಿರುವರು. ಪಬ್ಲಿಕ್ ಪ್ರಾಸಿಕ್ಯೂಟರಾದ ಶ್ರೀ ಜಿ. ಎಸ್. ದೊರೆಸ್ವಾಮಯ್ಯರವರು ಸರ್ಕಾರದ ಪರ ವಕಾಲತ್ತು ವಹಿಸಿರುವರು.

"ಜನವಾಣಿ" ಮೇಲಿನ ಮೊಕದ್ದಮೆ

ಜಿಲ್ಲಾ ಮ್ಯಾಜಿಸ್ಟ್ರೇಟರ ಗುಮಾಸ್ತೆಯು ವಿಚಾರಣೆ

(ತಾ ೦ ಬಾ) ಬೆಂಗಳೂರು ನ ೨

ಮೈಸೂರು ಸರ್ಕಾರದವರು ಕಳೆದ ಆಗಸ್ಟ ೧೦ರಲ್ಲಿ "ಜನವಾಣಿ" ಸಂಪಾದಕರಾಗಿದ್ದಾಗ ಡಿಫೆನ್ಸ್ ಆಫ್ ಇಂಡಿಯ ರೂಲ್ ೪೧(೧)(ಬಿ) ಪ್ರಕಾರ ಹೊರಡಿಸಿದ ನೋಟಿಫಿಕೇಷನ್ನನ್ನು ಉಲ್ಲಂಘಿಸಿದರೆಂದು ಶ್ರೀ ಬಿ ಎನ್. ಗುಪ್ತರಮೇಲೆ ಹೂಡಲಾಗಿರುವ ಮೊಕದ್ದಮೆಯಲ್ಲಿ ಪ್ರಾಸಿಕ್ಯೂಷನ್ನಿನ ಕಡೆ ಬೆಂಗಳೂರು ಜಿಲ್ಲಾ ಮ್ಯಾಜಿಸ್ಟ್ರೇಟರ ಕೋರ್ಟಿನ ಜ್ಯುಡಿಷಿಯಲ್ ಹೆಡ್ ಕ್ಲಾರ್ಕ ಶ್ರೀ ಹೆಚ್. ಸುಬ್ಬರಾಯರ ವಿಚಾರಣೆಯು ಸಿಟಿ ಮ್ಯಾಜಿಸ್ಟ್ರೇಟರಾದ ಶ್ರೀ ಸಿ. ರಾಮಚಂದ್ರರಾಯರ ಮುಂದೆ ಈ ಮಧ್ಯಾಹ್ನ ನಡೆಯಿತು.

ಅಸ್ವಸ್ಥತೆಯ ನಿಮಿತ್ತ ಶ್ರೀ ಬಿ ಎನ್. ಗುಪ್ತರು ಹಾಜರಿರಲಿಲ್ಲ.

ಪಬ್ಲಿಕ್ ಪ್ರಾಸಿಕ್ಯೂಟರಾದ ಶ್ರೀ ಜಿ. ಎಸ್. ದೊರೆಸ್ವಾಮಯ್ಯರ್‌ರವರು ಕೇಳಿದ ಪ್ರಶ್ನೆಗಳಿಗೆ ಉತ್ತರವಾಗಿ ಸಾಕ್ಷಿಯು ಶ್ರೀ ಗುಪ್ತರು ಕಳೆದ ಜೂನ್ ೨೪ರಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದೆ ತಾವು ಜನವಾಣಿ ಪತ್ರಿಕೆಯ ಸಂಪಾದಕರಾಗಿಯೂ, ಮುದ್ರಣಕಾರರಾಗಿಯೂ ಪ್ರಕಟಣಕಾರರಾಗಿಯೂ 'ಡಿಕ್ಲೇರ್' ಮಾಡಿಕೊಂಡರೆಂದೂ, ಕಳೆದ ಸೆಪ್ಟೆಂಬರ್ ೯ರಿಂದ ೨೫ರೊಳಗೆ ಮೂರು ಜನರು ಜನವಾಣಿಯ ಬಾತ್ಮೀದಾರರಾಗಿ ರಿಜಿಸ್ಟರಾಗಿರುವರೆಂದೂ ಸಾಕ್ಷ್ಯವಿತ್ತರು.

ಪಾಟಿ ಸವಾಲು

ಆಪಾದಿತರ ಪರ ಅಡ್ವೋಕೇಟರಾದ ಶ್ರೀ ಎಲ್ ಎಸ್. ರಾಜುರವರು ಪಾಟಿಸವಾಲು ನಡೆಸಿದರು. ಸಾಕ್ಷಿಯು ತಮಗೆ ಆಗಸ್ಟ ೧೦ರ ನೋಟಿಫಿಕೇಷನ್ನು ಗೊತ್ತೆಂದರು. ಜಿಲ್ಲಾ ಮ್ಯಾಜಿಸ್ಟ್ರೇಟರು ಶ್ರೀ ಗುಪ್ತರಿಗೆ ಜನವಾಣಿ ಪತ್ರಿಕೆಯ ಬಾತ್ಮೀದಾರರುಗಳ ಹೆಸರನ್ನು ನೋಟಿಫಿಕೇಷನ್ ಪ್ರಕಾರ ರಿಜಿಸ್ಟರ್ ಮಾಡಿಸಬೇಕೆಂದು ಪತ್ರ ಬರೆದರೋ ಇಲ್ಲವೋ ಎನ್ನುವುದು ತಮಗೆ ಗೊತ್ತಿಲ್ಲವೆಂದರು.

ಶ್ರೀ ರಾಜು-ಈ ಪತ್ರವ್ಯವಹಾರವು ನಿಮ್ಮ ಮೂಲಕ ನಡೆಯುವುದಿಲ್ಲವೋ?

ಸಾಕ್ಷಿ-ರಹಸ್ಯ ರೀತಿಯ ವ್ಯವಹಾರವನ್ನು ಮ್ಯಾಜಿಸ್ಟ್ರೇಟರ ಪರ್ಸನಲ್ ಕ್ಲಾರ್ಕೇ ನೋಡಿಕೊಳ್ಳುವರು. ಇದು ಅಂತಹ ವ್ಯವಹಾರವಿರಬಹುದು.

ಪಬ್ಲಿಕ್ ಪ್ರಾಸಿಕ್ಯೂಟರ್‌ರವರು ಪರ್ಸನಲ್ ಕ್ಲಾರ್ಕನ್ನು ಹಾಜರುಪಡಿಸುವುದಾಗಿ ಹೇಳಿದರು.

ಶ್ರೀ ರಾಜು-ಪತ್ರಿಕೆಯ ಸಂಪಾದಕರು ತಮ್ಮ ಬಾತ್ಮೀದಾರರುಗಳ ಹೆಸರನ್ನು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ತಿಳಿಸಿದ ಪತ್ರವನ್ನು ತಂದಿದ್ದೀರಾ?

ಸಾಕ್ಷಿ- ಇಲ್ಲ. ಹಾಜರುಪಡಿಸುತ್ತೇನೆ.

ಸಾಕ್ಷಿಯ ವಿಚಾರಣೆಯು ಮುಗಿಯಿತು. ಮುಂದಿನ ವಿಚಾರಣೆಯನ್ನು ನವೆಂಬರ್ ೨೩ಕ್ಕೆ ಮುಂದುವರಿಸಲಾಯಿತು.

ಶ್ರೀ ಪಿ. ಬಿ. ಶ್ರೀನಿವಾಸರವರ ಮೇಲಿನ ಮೊಕದ್ದಮೆ

(ತಾ ೦ ಬಾ) ಬೆಂಗಳೂರು ಸ ೬

ಶ್ರೀ ಪಿ. ಬಿ. ಶ್ರೀನಿವಾಸರವರ ಮೇಲಿನ ಮೊಕದ್ದಮೆಯು ಈ ದಿನ ಸಿಟಿ ಮ್ಯಾಜಿಸ್ಟ್ರೇಟರ ಸಮ್ಮುಖದಲ್ಲಿ ಮುಂದುವರೆಯಿತು. ಸಬ್ ಇನ್ಸ್‌ಪೆಕ್ಟರಾದ ಶ್ರೀ ಜೆ.ಎಂ. ಮೂರ್ತಿಯವರ ಪಾಟಿಸವಾಲು ನಡೆದು ಮೊಕದ್ದಮೆಯನ್ನು ಗುರುವಾರಕ್ಕೆ ಹಾಕಲಾಯಿತು.

ಚಾರ್ಜ್ ಫ್ರೇಂ ಆಯಿತು

ಬೆಂಗಳೂರು ಸಂಪಾದಕರುಗಳ ಮೇಲಿನ ಮೊಕದ್ದಮೆ

ಈ ದಿನ ಸಿಟಿ ಮ್ಯಾಜಿಸ್ಟ್ರೇಟರ ಆರ್ಡರ್ಸ್

[ತಾ ೦ ಬಾ] ಬೆಂಗಳೂರು ಡಿ ೪

ಶ್ರೀಗಳಾದ ಪಿ. ಆರ್. ರಾಮಯ್ಯ. ಪಿ. ಬಿ. ಶ್ರೀನಿವಾಸ, ತಿರುಮಲೆ ತಾತಾಚಾರ್ಯ ಶರ್ಮ, ಸಿದ್ಧವ್ವನಹಳ್ಳಿ ಕೃಷ್ಣಶರ್ಮ ಮತ್ತು ಬಿ. ಎನ್. ಗುಪ್ತ ಇವರುಗಳ ಮೇಲಿನ ಮೊಕದ್ದಮೆಯಲ್ಲಿ ಸಿಟಿಮ್ಯಾಜಿಸ್ಟ್ರೇಟರು ಈ ದಿನ ಆರ್ಡರ್ಸ್ ಕೊಡುತ್ತಾ ಆಪಾದಿತರುಗಳು ತಮ್ಮ ಪತ್ರಿಕೆಗಳಲ್ಲಿ ಸುದ್ದಿಗಳಿಗೆ ಆಧಾರವನ್ನು ತಿಳಿಸಲಿಲ್ಲವೆಂದು ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್‌ನ ೪೧ (೩)ನೇ ರೂಲ್ ಪ್ರಕಾರ ಅವರ ಮೇಲೆ ಚಾರ್ಜ್‌ಫ್ರೇಂ ಮಾಡಿರುತ್ತಾರೆ.

ಸುಬೋಧ ಮುದ್ರಣಾಲಯದ ಮ್ಯಾನೇಜರ್ ಶ್ರೀ ರಂಗನಾಥರಾವ್ ಮತ್ತು ವಿಶ್ವಕರ್ಣಾಟಕದ ಶ್ರೀ ಸಿದ್ದವ್ವನಹಳ್ಳಿ ಕೃಷ್ಣಶರ್ಮರವರುಗಳನ್ನು ತಲಾ ೫೦೦ ರೂ.ಗಳ ಎರಡು ಶೂರಿಟಿಗಳನ್ನು ಕೊಟ್ಟು ಜಾಮೀನಿನ ಮೇಲೆ ಬಿಡುಗಡೆಯಾಗಬಹುದೆಂದು ಸಿಟಿ ಮ್ಯಾಜಿಸ್ಟ್ರೇಟರು ಆಜ್ಞೆಯಿತ್ತರು.

ಸಂಪಾದಕರುಗಳ ಮೇಲಿನ ಮೊಕದ್ದಮೆ

ಇಬ್ಬರು ಹೈ ಕೋರ್ಟ್ ಜಡ್ಜರ ಪರಿಶೀಲನೆಗೆ ಒಪ್ಪಿಸಲ್ಪಟ್ಟಿದೆ

ರಿವಿಷನ್ ಅರ್ಜಿ ಬಗ್ಗೆ ಹೈ ಕೋರ್ಟಿನಲ್ಲಿ ಆಜ್ಞೆ

ಬೆಂಗಳೂರು ಜ ೪

ಬೆಂಗಳೂರು ಸಂಪಾದಕರುಗಳ ಮೊಕದ್ದಮೆಯ ರಿವಿಷನ್ ಅರ್ಜಿಗಳ ಮೇಲೆ ಮೈಸೂರು ಹೈಕೋರ್ಟಿನಲ್ಲಿ ಶ್ರೀ ಜಸ್ಟಿಸ್ ವೆಂಕಟರಂಗಯ್ಯಂಗಾರ್‌ರವರು ಆಜ್ಞೆ ಮಾಡಿ ಈ ಅರ್ಜಿಗಳನ್ನು ಇಬ್ಬರು ಹೈ ಕೋರ್ಟ್ ಜಡ್ಜರನ್ನೊಳಗೊಂಡ ಬೆಂಚು ಪರಿಶೀಲಿಸಬೇಕೆಂದು ತಿಳಿಸಿದ್ದಾರೆ.

ಸಂಪಾದಕರುಗಳ ಮೇಲಿನ ಮೊಕದ್ದಮೆ

—:o:—

ಇಬ್ಬರು ಹೈಕೋರ್ಟ್ ಜಡ್ಜರ ಬೆಂಚಿನ ಪರಿಶೀಲನೆಗೆ

——

ಬೆಂಗಳೂರು ಜ ೫

ಶ್ರೀ ಪಿ. ಬಿ ಶ್ರೀನಿವಾಸ, ಶ್ರೀ ಪಿ. ಆರ್. ರಾಮಯ್ಯ. ಶ್ರೀ ಟಿ ಟಿ. ಶರ್ಮ, ಶ್ರೀ ಎಸ್. ಕೆ. ಶರ್ಮ ಮತ್ತು ಶ್ರೀ ಬಿ ಎನ್. ಗುಪ್ತ ಇವರುಗಳು ೧೯೪೨ನೇ ಆಗಸ್ಟ್ ೧೦ನೇ ತಾರೀಖಿನ ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸಿದರೆಂಬ ಆಪಾದನೆಯ ಮೇಲೆ, ಇವರ ಮೇಲೆ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರು ಮಾಡಿರುವ ಚಾರ್ಜ್ ಬಗ್ಗೆ ಇವರುಗಳು ಹಾಕಿದ್ದ ರಿವಿಜನ್ ಅರ್ಜಿಯಲ್ಲಿ ಮೈಸೂರು ಹೈ ಕೋರ್ಟಿನ ಶ್ರೀ ಜಸ್ಟಿಸ್ ವೆಂಕಟರಂಗಯ್ಯಂಗಾರ್‌ರವರು ನಿನ್ನೆ ದಿವಸ ಈ ಕೆಳಕಂಡಂತೆ ಆಜ್ಞೆಯಿತ್ತರು.

"ಯಾವ ಆಗಸ್ಟ್ ೧೦ನೇ ತಾರೀಖಿನ ಸರಕಾರಿ ಆಜ್ಞೆಯನ್ನು ಉಲ್ಲಂಘಿಸಿದರೆಂದು ಅರ್ಜಿದಾರರ ಮೇಲೆ ಚಾರ್ಜ್ ಹೊರಿಸಲಾಗಿದೆಯೋ ಆ ಆಜ್ಞೆಯನ್ನು ೧೯೪೨ನೇ ಡಿಸೆಂಬರ್ ೧೪ನೇ ತಾರೀಖು ಯಾವ ಷರತ್ತೂ ಇಲ್ಲದೆ ವಜಾ ಮಾಡಿ ಆಜ್ಞೆಯಿತ್ತಿದ್ದಾರೆ ಎಂದೂ, ಆದ್ದರಿಂದ ಈ ಚಾರ್ಜು ನಿಲ್ಲುವ ಹಾಗಿಲ್ಲವೆಂದೂ ಅರ್ಜಿದಾರರ ಪರವಾಗಿ ಶ್ರೀ ರಾಜುರವರು ಹೇಳುತ್ತಾರೆ. ೧೯. ಎಂ. ಎಲ್. ಜೆ. ೨೭೯ ರಲ್ಲಿ ಶ್ರೀ ರಾಜುರವರ ಈ ವಾದವನ್ನು ಸಮರ್ಥಿಸುವಂತೆ ಕಾಣುವುದು. ಆ ಮೊಕದ್ದಮೆಯಲ್ಲಿ

ಶ್ರೀ ಜಸ್ಟಿಸ್ ಶಂಕರನಾರಾಯಣರಾಯರವರು 'ಯಾವುದಾದರೂ ಕಾನೂನನ್ನು ವಾಪಸು ತೆಗೆದುಕೊಂಡರೆ ಮತ್ತು ಅದರಲ್ಲಿ ಏನೊಂದೂ ಷರತ್ತನ್ನು ಉಳಿಸದೇ ಇದ್ದಲ್ಲಿ, ಅಲ್ಲದೇ ಹಾಗೆ ಅದನ್ನು ವಜಾ ಮಾಡಲು ಬೇರೊಂದು ಉದ್ದೇಶವಿದೆ ಎಂಬುದನ್ನು ತಿಳಿಸದೇ ಇದ್ದಲ್ಲಿ ಆಗ್ಗೆ, ಜನರಲ್ ಕ್ಲಾಸಸ್ ಆಕ್ಟಿನ ಸೆಕ್ಷನ್ ೬ [ಇ] ಪ್ರಕಾರ, ಆ ಕಾನೂನು ಇರಲಿಲ್ಲವೆಂದೇ ಪರಿಗಣಿಸಬೇಕು ಎಂದು ನನಗೆ ಕಾಣುತ್ತದೆ' ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಜನರಲ್ ಕ್ಲಾಸಸ್ ಆಕ್ಟಿನ ಸೆಕ್ಷನ್ ೬ [ಇ] ಯ ಅರ್ಥದ ಪ್ರಶ್ನೆಯು ಮುಖ್ಯವಾದುದರಿಂದಲೂ ಅಲ್ಲದೆ ಈ ಮೊಕದ್ದಮೆಗಳಲ್ಲಿ ಇನ್ನೂ ಇತರ ಕೆಲವು ಕಾನೂನು ಅಂಶಗಳು ಇರುವುವಾದುದರಿಂದಲೂ ಈ ನಾಲ್ಕು ರಿವಿಷನ್ ಅರ್ಜಿಗಳನ್ನೂ ಇಬ್ಬರು ಹೈ ಕೋರ್ಟ್ ಜಡ್ಜರ ಬೆಂಚಿನಲ್ಲಿ ವಿಚಾರಣೆ ನಡೆಸಿ ನಿರ್ಣಯಿಸಬೇಕೆಂದು ಸೂಚಿಸುತ್ತೇನೆ."

ಅರ್ಜಿಗಳನ್ನು ಒತ್ತಾಯ ಪಡಿಸಲಿಲ್ಲ

ಹೈಕೋರ್ಟಿನಲ್ಲಿ ಸಂಪಾದಕರ ರಿವಿಜನ್ ಅರ್ಜಿಗಳು

ಬೆಂಗಳೂರು ಫೆ ೧

"ಡೈಲಿನ್ಯೂಸ್" ಸಂಪಾದಕರಾಗಿದ್ದ ಶ್ರೀ ಪಿ ಆರ್. ರಾಮಯ್ಯನವರು, "ತಾಯಿನಾಡು" ಸಂಪಾದಕರಾಗಿದ್ದ ಶ್ರೀ ಪಿ ಬಿ. ಶ್ರೀನಿವಾಸರವರು, "ವಿಶ್ವಕರ್ಣಾಟಕ" ಪ್ರಧಾನ ಸಂಚಾಲಕರಾದ ಶ್ರೀ ಟಿ ಟಿ ಶರ್ಮರು ಮತ್ತು ಸಂಪಾದಕರಾಗಿದ್ದ ಶ್ರೀ ಎಸ್ ಕೃಷ್ಣಶರ್ಮರು, ಮತ್ತು "ಜನವಾಣಿ" ಸಂಪಾದಕರಾಗಿದ್ದ ಶ್ರೀ ಬಿ.ಎನ್. ಗುಪ್ತರು ತಮ್ಮ ಮೊಕದ್ದಮೆಗಳಲ್ಲಿ ಸಿಟಿ ಮ್ಯಾಜಿಸ್ಟ್ರೇಟರು ಮಾಡಿದ್ದ ಚಾರ್ಜಿನ ಮೇಲೆ ಹೈಕೋರ್ಟಿಗೆ ಹಾಕಿದ್ದ ರಿವಿಜನ್‌ಗಳ ಬಗ್ಗೆ ಚೀಫ್ ಜಸ್ಟಿಸ್‌ರಾದ ಸರ್ ಡಾರ್ಸಿ ರೈಲಿಯವರು ಮತ್ತು ಶ್ರೀ ಜಸ್ಟಿಸ್ ಸುಬ್ರಹ್ಮಣ್ಯಯ್ಯರ್‌ರವರು ಈ ದಿವಸ "ಆರ್ಡರ್" ಇತ್ತರು. ಆರ್ಡರು ಈ ರೀತಿಯಿದೆ: —

"ಶ್ರೀ ರಾಜುರವರು ಈ ಮೊಕದ್ದಮೆಗಳ ಈಗಿರುವ ಸ್ಥಿತಿಯಲ್ಲಿಯೇ ತೀರ್ಮಾನ ಕೊಡಬೇಕೆಂದು ಒತ್ತಾಯ ಮಾಡುವುದಿಲ್ಲ. ಆದರೆ ಅವರು ಈ ಮೊಕದ್ದಮೆಗಳ ಬಗ್ಗೆ ಹೊಂದಿರುವ ವಾದಾಂಶಗಳನ್ನು ಹೊಂದೇ ಇರುವವೆಂಬುದನ್ನು ನಾವು ಗಮನಿಸಬೇಕೆಂದೂ ತಿಳಿಸುತ್ತಾರೆ. ಅರ್ಜಿಗಳನ್ನು ವಜಾ ಮಾಡಿದೆ. ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಈ ಮೊಕದ್ದಮೆಗಳ ವಿಚಾರಣೆಯು ನಿಧಾನ ರೀತಿಯ ನಡುವಳಿಕೆಯಿಂದ ಇನ್ನೂ ತೀರ್ಮಾನವಾಗದಿರುವುದು ಬಹಳ ದುರದೃಷ್ಟ ಮತ್ತು ಈ ಅರ್ಜಿಗಳನ್ನು ಈ ಕೋರ್ಟಿಗೆ ತರುವುದರಲ್ಲಿ ಇನ್ನೂ ಕಾಲಾತ್ಯಯವಾಯಿತು. ವಿಚಾರಣೆ ಮಾಡುತ್ತಿರುವ ಮ್ಯಾಜಿಸ್ಟ್ರೇಟರು ಏನೂ ಕಾಲವಿಳಂಬ ಮಾಡದೆ ಈ ಮೊಕದ್ದಮೆಗಳನ್ನು ಪೂರೈಸಬೇಕು".

ಶ್ರೀ ಎಲ್. ಎಸ್. ರಾಜುರವರು ಅರ್ಜಿದಾರರ ಪರವಾಗಿಯೂ ಅಡ್ವೋಕೇಟ್-ಜನರಲ್ಲರು ಸರ್ಕಾರದ ಪರವಾಗಿಯೂ ಇದ್ದರು

ಸಂಪಾದಕರುಗಳ ಖುಲಾಸೆ

ಆಪಾದಿತರು ನಿರ್ದೋಷಿಗಳೆಂದು ತೀರ್ಪು

ಬೆಂಗಳೂರು ಫೆ೧೯

ಶ್ರೀಗಳಾದ ಪಿ. ಆರ್. ರಾಮಯ್ಯ, ಪಿ. ಬಿ. ಶ್ರೀನಿವಾಸ, ಬಿ.ಎನ್. ಗುಪ್ತ, ಟಿ. ಟಿ. ಶರ್ಮ ಮತ್ತು ಸಿದ್ದವ್ವನಹಳ್ಳಿ ಕೃಷ್ಣಶರ್ಮ ಈ ಐದು ಜನ ಸಂಪಾದಕರುಗಳ ಮೇಲೆ ಪ್ರೆಸ್ ಕಾನೂನು ಪ್ರಕಾರ ಇದ್ದ ಮೊಕದ್ದಮೆಯಲ್ಲಿ ಈ ದಿನ ಸಿಟಿ ಮ್ಯಾಜಿಸ್ಟ್ರೇಟರು ತೀರ್ಪಿತ್ತು ಎಲ್ಲ ಆಪಾದಿತರನ್ನೂ ಖುಲಾಸೆ ಮಾಡಿದರು.

ಶ್ರೀ ಎಲ್ ಎಸ್ ರಾಜುರವರು ಆಪಾದಿತರ ಪರವಾಗಿಯೂ ಶ್ರೀ ಜಿ ಎಸ್ ದೊರೆಸ್ವಾಮಿ ಅಯ್ಯಂಗಾರ್‌ರವರು ಪ್ರಾಸಿಕ್ಯೂಷನ್ ಪರವಾಗಿಯೂ ಈ ಮೊಕದ್ದಮೆಯಲ್ಲಿ ವಾದಿಸಿದ್ದರು.

ಸಂಪಾದಕರ ಖುಲಾಸೆ

ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ತೀರ್ಪು

"ವಾಪಸ್ಸಾದ ನೋಟಿಫಿಕೇಷನ್ ಪ್ರಕಾರದ ವ್ಯವಹಾರ ನಿಲ್ಲದು"

ಬೆಂಗಳೂರು ಫೆ ೨೦

"ಯಾವ ನೋಟಿಫಿಕೇಷನ್ ಆಧಾರದ ಮೇಲೆ ಮೊಕದ್ದಮೆಗಳನ್ನು ಹಾಕಲಾಗಿತ್ತೋ, ಆ ನೋಟಿಫಿಕೇಷನನ್ನು ಮೊಕದ್ದಮೆಯು ನಡೆಯುತ್ತಿರುವಾಗ ಹಿಂದಕ್ಕೆ ತೆಗೆದುಕೊಂಡರೆ, ಆ ನೋಟಿಫಿಕೇಷನ್‌ಗೆ ವಿರೋಧವಾಗಿ ನಡೆದಿರುವುದು ತಪ್ಪಾಗಿ ಪರಿಣಮಿಸಲಾರದು" ಎಂಬುದಾಗಿ ಮೈಸೂರು ಹೈಕೋರ್ಟಿನಲ್ಲಿ ರಾಜಧರ್ಮ ಪ್ರಸಕ್ತ ಜಸ್ಟಿಸ್ ಕೆ. ಶಂಕರನಾರಾಯಣರಾಯರು ೬೦



ಶ್ರೀ ಎಲ್. ಎಸ್. ರಾಜು

[ಇವರು ಆಪಾದಿತ ಸಂಪಾದಕರ ಪರವಾಗಿ ಅತ್ಯಂತ ಸಾಮರ್ಥ್ಯದಿಂದಲೂ ಶ್ರದ್ಧೆಯಿಂದಲೂ ವಕಾಲತ್ತು ನಡಿಸಿ ವಿಜಯೋತ್ಸವ ಪಡೆದ ಪ್ರಸಿದ್ಧ ವಕೀಲರು]

ದು ಮೊಕದ್ದಮೆಯಲ್ಲಿ ಕೊಟ್ಟ ತೀರ್ಪನ್ನು ಆಧಾರವಾಗಿಟ್ಟುಕೊಂಡು, ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇ

ಟರು ಬೆಂಗಳೂರು ಸಂಪಾದಕರುಗಳ ಮೊಕದ್ದಮೆಯಲ್ಲಿ ಆಪಾದಿತರುಗಳಾದ ಶ್ರೀ ಪಿ. ಆರ್. ರಾಮಯ್ಯ (ಡೈಲಿ ನ್ಯೂಸ್) ಶ್ರೀ ಪಿ ಬಿ. ಶ್ರೀನಿವಾಸನ್ (ತಾಯಿನಾಡು), ಶ್ರೀ ಟಿ. ಟಿ. ಶರ್ಮ (ಪ್ರಧಾನ ಸಂಚಾಲಕ, ವಿಶ್ವಕರ್ಣಾಟಕ) ಶ್ರೀ ಸಿದ್ದವ್ವನಹಳ್ಳಿ ಕೃಷ್ಣಶರ್ಮ, [ವಿಶ್ವಕರ್ಣಾಟಕ] ಶ್ರೀ ಬಿ ಎನ್. ಗುಪ್ತ [ಜನವಾಣಿ] ಇವರುಗಳನ್ನು ಖುಲಾಸೆ ಮಾಡಿದರು

೧೯೬೩ನೇ ಆಗಸ್ಟ್ ೧೦ ರಲ್ಲಿ ಮೈಸೂರು ಸರಕಾರದವರು ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ಪ್ರಕಾರ ಒಂದು ನೋಟಿಫಿಕೇಷನ್ನನ್ನು ಹೊರಡಿಸಿ ಎಐ.ಸಿ.ಸಿ. ಯು ಜಾರಿ ಮಾಡಿರುವ ಸಾಮೂಹಿಕ ಚಳುವಳಿಗೆ ಮತ್ತು ಆ ಚಳುವಳಿಗೆ ವಿರೋಧವಾಗಿ ಸರ್ಕಾರದವರು ಕೈಗೊಳ್ಳುವ ಕಾರ್ಯಕ್ಕೆ ಸಂಬಂಧಪಟ್ಟ ಸುದ್ದಿಗಳನ್ನು ಎ.ಪಿ ಐ. ಸರ್ಕಾರ ಮತ್ತು ರಿಜಿಸ್ಟರ್ಡ್ ಬಾತ್ಮೀದಾರರ ಮೂಲಕ ಬಂದರೆ ಮಾತ್ರ ಪ್ರಕಟಿಸಬೇಕೆಂದೂ ಮತ್ತು ಯಾರ ಮೂಲಕ ಬಂತೆಂಬುದನ್ನು ಪತ್ರಿಕೆಯಲ್ಲಿಯೇ ತಿಳಿಸಬೇಕೆಂದೂ ಸೂಚಿಸಿದ್ದರು. ಸೆಪ್ಟೆಂಬರ್ ಆರಂಭದಲ್ಲಿ ಈ ಪತ್ರಿಕೆಗಳಲ್ಲಿ ಪ್ರಕಟವಾದ ಈ ಚಳುವಳಿಗಳಿಗೆ ಸಂಬಂಧಪಟ್ಟಿದ್ದೆಂದು ಹೇಳಲಾದ ಸುದ್ದಿಗಳ ಬಗ್ಗೆ ಅವು ಯಾರಿಂದ ಬಂತೆಂಬುದನ್ನು ಸೂಚಿಸಲಿಲ್ಲವೆಂದು ಈ ಪತ್ರಿಕೆಗಳ ಸಂಪಾದಕರ ಮೇಲೆ ಸರ್ಕಾರದವರು ಮೊಕದ್ದಮೆ ಹೂಡಿದ್ದರು.

ತೀರ್ಪನ್ನು ನಿನ್ನೆ ಮಧ್ಯಾಹ್ನ ಸುಮಾರು ೬ ಗಂಟೆ ಹೊತ್ತಿಗೆ ತಿಳಿಸಿದರು. ಆ ಸಮಯದಲ್ಲಿ ಶ್ರೀ ಪಿ.ಬಿ ಶ್ರೀನಿವಾಸನ್‌ರವರು ಬಿಟ್ಟು ಉಳಿದ ಆಪಾದಿತರೆಲ್ಲರೂ ಹಾಜರಿದ್ದರು. ಶ್ರೀ ಶ್ರೀನಿವಾಸನ್‌ರವರು ಊರಿನಲ್ಲಿ ಇರಲಿಲ್ಲ.

ತೀರ್ಪಿನ ವಿವರ

ತೀರ್ಪಿನ ಪ್ರಾರಂಭದಲ್ಲಿ ನ್ಯಾಯಾಧೀಶರು ಆಪಾದಿತರುಗಳ ದಸ್ತಗಿರಿಗೆ ಕಾರಣವನ್ನೂ, ಆಪಾದಿತರು ಡಿಸೆಂಬರ್ ೬ ರಲ್ಲಿ ಚಾರ್ಜ್ ಮಾಡಲ್ಪಟ್ಟ ಮೇಲೆ ಅದನ್ನು ತೆಗೆದುಹಾಕಲು ಆಪಾದಿತರು ಹೈಕೋರ್ಟಿಗೆ ಅಪೀಲು ಮಾಡಿದ್ದ ವಿಚಾರವನ್ನೂ, ಹೈಕೋರ್ಟ್ ನ್ಯಾಯಾಧೀಶರಾದ ಶ್ರೀ ಎಸ್. ವೆಂಕಟರಂಗಯ್ಯಂಗಾರ್ಯರು ಮೊಕದ್ದಮೆಯಲ್ಲಿ ಮುಖ್ಯವಾದ ನ್ಯಾಯಾಂಗ ರೀತಿಯ ಪ್ರಶ್ನೆ ಇರುವುದೆಂದು ತಿಳಿದು ಅದನ್ನು ಇಬ್ಬರು ಹೈಕೋರ್ಟ್ ನ್ಯಾಯಾಧೀಶರ ಮುಂದೆ ಹೋಗಬೇಕೆಂದು ತಿಳಿಸಿದ್ದನ್ನೂ ವಿವರಿಸಿದ್ದಾರೆ. ರಿವಿಜನ್ ಅರ್ಜಿಯು ಹೈಕೋರ್ಟಿನಲ್ಲಿ ಚೀಫ್ ಜಸ್ಟಿಸರ ಮತ್ತು ಜಸ್ಟಿಸ್ ಶ್ರೀ ಸುಬ್ರಹ್ಮಣ್ಯ ಅಯ್ಯರ್‌ರವರ ಮುಂದೆ ಬಂದಾಗ ಆಪಾದಿತರ ಪರ ಶ್ರೀ ಎಲ್. ಎಸ್ ರಾಜುರವರು ಅದನ್ನು ಹಿಂದಕ್ಕೆ ತೆಗೆದುಕೊಂಡ ವಿಚಾರವನ್ನೂ ನ್ಯಾಯಾಧೀಶರು ಪ್ರಸ್ತಾಪ ಮಾಡಿದ್ದಾರೆ.

೧೯೬೪ನೇ ಫೆಬ್ರವರಿ ೧೧ ರಲ್ಲಿ ಯಾವ ಪ್ರಾಸಿಕ್ಯೂಷನ್ ಸಾಕ್ಷ್ಯಗಳನ್ನು ಪಾಟೀಸವಾಲು ಮಾಡುವುದಿಲ್ಲವೆಂದೂ ವಾದ ವಿವಾದವನ್ನು ಪ್ರಾರಂಭ ಮಾಡಿ ಮೊಕದ್ದಮೆಯನ್ನು ಮುಗಿಸುವುದಾಗಿಯೂ ಆಪಾದಿತರ ಪರ ತಿಳಿಸಿದರು.

ಸಾಮೂಹಿಕ ಚಳುವಳಿಯ ಪ್ರಶ್ನೆ

ವಾದವಿವಾದವನ್ನು ನ್ಯಾಯಾಧೀಶರು ಪ್ರಸ್ತಾಪ ಮಾಡಿ ಎ.ಐ ಸಿ.ಸಿ. ಯು ಸಾಮೂಹಿಕ ಚಳುವಳಿಯನ್ನು ಅಂಗೀಕಾರ ಮಾಡಿತು ಮತ್ತು ಆಪಾದಿತರು ಆ ಸಾಮೂಹಿಕ ಚಳುವಳಿಯ ಸುದ್ದಿಯನ್ನು ಪ್ರಕಟಿಸಿದರು ಎಂಬ ಬಗ್ಗೆ ಪಬ್ಲಿಕ್ ಪ್ರಾಸಿಕ್ಯೂಟರ್ ವಾದವನ್ನು ಒಪ್ಪಲಿಲ್ಲ. ನ್ಯಾಯಾಧೀಶರು ದೆಹಲಿಯ ಅಡಿಷನಲ್ ಡಿ॥ ಮ್ಯಾಜಿಸ್ಟ್ರೇಟರಾದ ಶ್ರೀ ಇಸಾರ್‌ರವರು ಶ್ರೀ ದೇವದಾಸ್ ಗಾಂಧಿಯವರ ಮೇಲೆ ಹೂಡಲಾಗಿದ್ದ ಇದೇ ರೀತಿಯ ಮೊಕದ್ದಮೆಯಲ್ಲಿ ಆಪಾದಿತರನ್ನು ಖುಲಾಸೆ ಮಾಡಿ ಕೊಟ್ಟ ತೀರ್ಪನ್ನು ವಿವರಿಸಿದ್ದಾರೆ

ಮೈಸೂರು ಹೈಕೋರ್ಟಿನಲ್ಲಿ ಶ್ರೀ ಜಸ್ಟಿಸ್ ಶಿಂಗಾರುವೇಲು ಮೊದಲಿಯಾರ್‌ರವರು ಒಂದು ಕ್ರಿಮಿನಲ್ ಅಪೀಲಿನಲ್ಲಿ (೧೯೬೩-ಆರ ೨೭, ೨೮, ೨೯ ಮತ್ತು ೩೦) ಕೊಟ್ಟ ತೀರ್ಮಾನದ ಪ್ರಕಾರ, ಮೈಸೂರು ಸರಕಾರದವರು ತಿದ್ದುಪಡಿಯೊಡನೆ ಆಗಸ್ಟ್ ೧೦ರಲ್ಲಿ ರೂಲ್ ೬೧(೧)[ಬಿ] ಪ್ರಕಾರ ಹೊರಡಿಸುವ ನೋಟಿಫಿಕೇಷನ್ನು ಸರಿಯಾಗುವುದಿಲ್ಲ. ಏಕೆಂದರೆ ತಿದ್ದುಪಡಿಗಳೇ ಸರಿಯಾಗಿಲ್ಲವೆಂದು ಆಪಾದಿತರ ಪರ ಲಾಯರು ಮಾಡಿದ ವಾದವನ್ನೂ ನ್ಯಾಯಾಧೀಶರು ಪ್ರಸ್ತಾಪ ಮಾಡಿದ್ದಾರೆ. ೯-೧೦-೬೩ರಲ್ಲಿ ಸರ್ಕಾರದವರು ಹೊರಡಿಸಿದ ಆಜ್ಞೆಯು ಈ ನೋಟಿಫಿಕೇಷನ್ನನ್ನು ಕಾನೂನುಬದ್ಧವಾಗಿರುವಂತೆ ಮಾಡಿದೆ ಎಂದು ಪಬ್ಲಿಕ್ ಪ್ರಾಸಿಕ್ಯೂಟರು ಅಭಿಪ್ರಾಯಪಟ್ಟರು. ಆಜ್ಞೆಯು ೯-೧೦-೬೩ ರಲ್ಲಿ ಹೊರಟಿತು. ಈ ಆಜ್ಞೆಯು ಆ ತಾರೀಖಿನಿಂದ ಮಾಡಿದ ತಪ್ಪುಗಳಿಗೆ ಮಾತ್ರ ಅನ್ವಯಿಸುವುದು. ಮೈಸೂರು ಹೈಕೋರ್ಟ್ ತೀರ್ಪಿನ ಪ್ರಕಾರ, ಆಗಸ್ಟ್ ೧೦ನೇ ತಾರೀಖಿನ ಪ್ರಕಟಣೆಯನ್ನು ಉಲ್ಲಂಘಿಸಿದಕ್ಕೆ ಈ ಆಜ್ಞೆಯು ಅನ್ವಯಿಸುವುದಿಲ್ಲವೆಂದು ಶ್ರೀ ಎಲ್. ಎಸ್. ರಾಜುರವರು ವಾದ ಮಾಡಿದ್ದನ್ನು ನ್ಯಾಯಾಧೀಶರು ಪ್ರಸ್ತಾಪ ಮಾಡಿದ್ದಾರೆ. ೧೯೬೦ರಲ್ಲಿ ಬೊಂಬಾಯಿ ಹೈಕೋರ್ಟಿನ ಸ್ಪೆಷಲ್ ಬೆಂಚ್‌ನಲ್ಲಿ ಪ್ರಸಿದ್ಧವಾದ ಅಬ್ಕಾರಿ ಕೇಸಿನಲ್ಲಿ ಕೊಟ್ಟ ತೀರ್ಪಿನ ಸಾರಾಂಶವನ್ನು ಪ್ರಸ್ತಾಪ ಮಾಡಿ ಈ ತೀರ್ಪಿನ ಆಧಾರದ ಪ್ರಕಾರ ಆಪಾದಿತರ ಪರ ವಕೀಲರು ಕೊಟ್ಟ ಅಭಿಪ್ರಾಯವು ಬೆಲೆಯುಳ್ಳದ್ದಾಗಿದೆಯೆಂದು ನಗರ ನ್ಯಾಯಾಧೀಶರು ತಿಳಿಸಿದ್ದಾರೆ.

ವಾಪಸ್ಸಾದ ನೋಟಿಫಿಕೇಷನ್ ಪ್ರಕಾರದ ವ್ಯವಹಾರ ನಿಲ್ಲದು

ಮುಕ್ತಾಯದಲ್ಲಿ, ಆಗಸ್ಟ್ ನೋಟಿಫಿಕೇಷನನ್ನು ಸರ್ಕಾರದವರು ಯಾವ ಷರತ್ತೂ ಇಲ್ಲದೆ ಡಿಸೆಂಬರ್ ೧೬ರಲ್ಲಿ ಹಿಂದಕ್ಕೆ ತೆಗೆದುಕೊಂಡ ವಿಷಯವನ್ನು ನ್ಯಾಯಾಧೀಶರು ಪ್ರಸ್ತಾಪ ಮಾಡಿದ್ದಾರೆ "ನೋಟಿಫಿಕೇಷನ್ನನ್ನು ಯಾವಷರತ್ತೂ ಇಲ್ಲದೆ ಹಿಂದಕ್ಕೆ ತೆಗೆದುಕೊಂಡರೆ ಆ ನೋಟಿಫಿಕೇಷನ್ ಪ್ರಕಾರ ಹೂಡಿರುವ ಮೊಕದ್ದಮೆಯ ವಿಚಾರಣೆ ನಡೆಸುತ್ತಿದ್ದರೂ ಆ ನೋಟಿಫಿಕೇಷನ್ನು ಜಾರಿಯಲ್ಲಿಲ್ಲವೆಂದೇ ಭಾವಿಸಲ್ಪಡಬೇಕು ಎಂದು ಮೈಸೂರು ಹೈಕೋರ್ಟಿನಲ್ಲಿಯೂ ಮತ್ತು ನಗರ ನ್ಯಾಯಾಸ್ಥಾನದಲ್ಲಿಯೂ ಶ್ರೀ ಎಲ್.ಎಸ್. ರಾಜುರವರು ಅಭಿಪ್ರಾಯಪಟ್ಟಿದ್ದಾರೆ. ಈ ಸಂದರ್ಭದಲ್ಲಿ ಶ್ರೀ ರಾಜೂರವರು ಮೈಸೂರು ಹೈಕೋರ್ಟಿನಲ್ಲಿ ರಾಜಧರ್ಮ ಪ್ರಸಕ್ತಿ ಜಸ್ಟಿಸ್ ಕೆ. ಶಂಕರನಾರಾಯಣರಾಯರು ಕೊಟ್ಟ ತೀರ್ಪನ್ನು ಜಸ್ಟಿಸ್ ವೆಂಕಟರಂಗಯ್ಯಂಗಾರ್ಯರ ಗಮನಕ್ಕೆ ತಂದರು. ಆ ನ್ಯಾಯಾಧೀಶರು ಶ್ರೀ ರಾಜೂರವರ ಅಭಿಪ್ರಾಯವನ್ನು ಸಮರ್ಥಿಸಿದಂತೆ ಕಾಣುತ್ತದೆ. ಆ ನ್ಯಾಯಾಧೀಶರು ಆ ಅಭಿಪ್ರಾಯವನ್ನು ತೆಗೆದುಹಾಕಲಿಲ್ಲ" ಆದ್ದರಿಂದ ನಗರ ನ್ಯಾಯಾಧೀಶರು ಅದನ್ನೇ ಆಧಾರವಾಗಿಟ್ಟುಕೊಂಡು ಮೊಕದ್ದಮೆಯ ಯಾವ ವಿವರಗಳನ್ನೂ ವಿಮರ್ಶಿಸದೆ ಆಪಾದಿತರುಗಳನ್ನೆಲ್ಲಾ ಖುಲಾಸೆ ಮಾಡಿದರು

ಆಪಾದಿತರ ಪರ ಶ್ರೀ ಎಲ್.ಎಸ್. ರಾಜೂರವರೂ ಮತ್ತು ಸರ್ಕಾರದ ಪರ ಶ್ರೀ ಜಿ.ಎಸ್. ದೊರೆಸ್ವಾಮಿ ಅಯ್ಯರ್‌ರವರೂ ವಾದ ಮಾಡಿದರು

ಈ ಮೊಕದ್ದಮೆಗಳ ಕಾಲದಲ್ಲಿ ಬಿಡುಗಡೆ ಹೊಂದಲು ಆಪಾದಿತರು ಕೊಟ್ಟಿದ್ದ ಜಾಮೀನು ಬಾಂಡುಗಳನ್ನು ವಜಾ ಮಾಡಲಾಯಿತು.

ತಾಯಿನಾಡು
ಶನಿವಾರ ೨೦ನೇ ಫೆಬ್ರವರಿ ೧೯೪೩

ಸಂಪಾದಕರ ಮೇಲಿನ ಮೊಖದ್ದಮೆಗಳ ಇತ್ಯರ್ಥ

—:೦:—

ತಾಯಿನಾಡು, ವಿಶ್ವಕರ್ಣಾಟಕ, ಡೈಲಿ ನ್ಯೂಸ್ ಮತ್ತು ಜನವಾಣಿ ಪತ್ರಿಕಾ ಸಂಪಾದಕರುಗಳಾದ ಶ್ರೀಗಳಾದ ಪಿ. ಬಿ. ಶ್ರೀನಿವಾಸನ್, ಸಿದ್ಧವನಹಳ್ಳಿ ಕೃಷ್ಣಶರ್ಮ, ಪಿ. ಆರ್. ರಾಮಯ್ಯ ಮತ್ತು ಬಿ. ಎಸ್. ಗುಪ್ತರವರ ಮೇಲೂ, ವಿಶ್ವಕರ್ಣಾಟಕ ಪತ್ರಿಕೆಯ ಮ್ಯಾನೇಜಿಂಗ್ ಡೈರೆಕ್ಟರಾದ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರವರ ಮೇಲೂ ಸೆಪ್ಟೆಂಬರ್ ೯ನೇ ತಾರೀಕಿನ ದಿವಸ ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ೪೧ (೧) ರ ಪ್ರಕಾರ ದಾಖಲಾದ ಮೊಖದ್ದಮೆಯು ನಿನ್ನೆ ದಿವಸ ಸಿಟಿ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ಇತ್ಯರ್ಥವಾಗಿ ಅಪಾದಿತರುಗಳೆಲ್ಲರೂ ಬಿಡುಗಡೆ ಹೊಂದಿದರು. ಈ ಪತ್ರಿಕಾ ಸಂಪಾದಕರುಗಳ ಮೇಲೆ ಹೂಡಲ್ಪಟ್ಟ ಮೊಖದ್ದಮೆಗಳು ಮೈಸೂರು ಸಂಸ್ಥಾನದ ಪತ್ರಿಕೋದ್ಯಮದಲ್ಲಿ ಅತ್ಯಂತ ಮಹತ್ವ ಪ್ರಕರಣವೆನ್ನಲಡ್ಡಿಯಿಲ್ಲ. ಏಕೆಂದರೆ ಒಂದೇ ರಾತ್ರಿ ಮಾನ್ಯ ಸಂಪಾದಕರುಗಳಲ್ಲಿ ಐವರನ್ನು ಬಂಧಿಸಿದರು. ದೇಶದಲ್ಲೆಲ್ಲ ಕೋಲಾಹಲ ಪರಿಸ್ಥಿತಿಯಿದ್ದ ಕಾಲದಲ್ಲಿ ಇವರ ಬಂಧನವು ಆ ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಾವಸ್ಥೆಗೆ ತಂದಿತೆನ್ನಲಡ್ಡಿಯಿಲ್ಲ. ಪತ್ರಿಕೆಗಳಿಗೂ, ಸರ್ಕಾರಕ್ಕೂ ಒಂದು ವಿಧವಾದ ಮಾಧುರ್ಯ ಪರಿಸ್ಥಿತಿ ಕುದುರಿದ್ದಾಗ್ಯೂ ಹಠಾತ್ತನೆ ಐವರು ಸಂಪಾದಕರ ದಸ್ತಗಿರಿಯು ಇಡೀ ದೇಶದಲ್ಲಿ ಕೋಲಾಹಲವನ್ನೆಬ್ಬಿಸಿತು. ಗೌರವಸ್ಥರಾದ ಈ ಸಂಪಾದಕ ಮಹಾಶಯರನ್ನು ಅರ್ಧ ರಾತ್ರಿ ವೇಳೆಯಲ್ಲಿ ದಸ್ತಗಿರಿ ಮಾಡಿ ಕರೆದೊಯ್ದುದು ವಿಸ್ಮಯಕಾರಕವಾಗಿದೆ. ಕೇವಲ ಪಾರಿಭಾಷಿಕವಾದ ಒಂದು ಅಪಾದನೆಗೋಸ್ಕರ, ಅವರನ್ನು ಆ ಅವೇಳೆಯಲ್ಲಿ ಬಂಧಿಸಲು ಏನು ಕಾರಣವಿತ್ತೋ ಅದನ್ನು ಪೋಲೀಸಿನವರೇ ಸ್ಪಷ್ಟಪಡಿಸಬೇಕು. ಆಗಸ್ಟ್ ೧೧ನೇ ತಾರೀಕು ಸರ್ಕಾರದಿಂದ ಹೊರಟ ನೋಟಿಫಿಕೇಷನ್ನಿನ ವಿಷಯವಾಗಿ ಸರ್ಕಾರಕ್ಕೂ, ಪತ್ರಿಕಾ ಸಂಪಾದಕರುಗಳಿಗೂ ವ್ಯವಹಾರ ನಡೆಯುತ್ತಿದ್ದ ಕಾಲದಲ್ಲಿ ಸಂಪಾದಕರನ್ನು ದಸ್ತಗಿರಿ ಮಾಡಿದುದು ಕೋಲಾಹಲಕರವಾದ ಸನ್ನಿವೇಶವಲ್ಲವೇ?

ಅದಂತಿರಲಿ ಈ ಸಂಪಾದಕರುಗಳ ಜಾಮೀನು ಅರ್ಜಿಯನ್ನು ಪ್ರಾಸಿಕ್ಯೂಷನ್ನಿನವರು ವಿರೋಧಿಸಿದುದು ಮತ್ತೂ ಆಶ್ಚರ್ಯಕರ. ಕಡೆಗೆ ಅಪಾದಿತ ಮಹನೀಯರು ಹೈಕೋರ್ಟಿನವರೆಗೂ ಹತ್ತಿ ಅಲ್ಲಿ ಪರಿಹಾರ ದೊರಕಿಸಿಕೊಂಡರು. ಈ ಮಧ್ಯೆ ಇವರ ಮೇಲಿನ ಮೊಖದ್ದಮೆಯ ಪರಿಣಾಮವಾಗಿ ಜಸ್ಟಿಸ್ ಟಿ. ಶಿಂಗಾರುವೇಲು ಮೊದಲಿಯಾರರು ಡಿಫೆನ್ಸ್ ಆಫ್ ಇಂಡಿಯಾ ರೂಲಿನ ಒಂದು ಲೋಪವನ್ನು ತೋರಿಸಿ ಕೊಟ್ಟ ಕಾರಣ ಸರ್ಕಾರದವರು "ವ್ಯಾಲಿಡೇಟಿಂಗ್ ಆಕ್ಟ್" ಒಂದನ್ನು ಜಾರಿ ಮಾಡಬೇಕಾಯಿತು. ಇವೆಲ್ಲಾ ಈ ಮೊಖದ್ದಮೆಯಿಂದ ಉದ್ಭವಿಸಿದ ಕೋಲಾಹಲ ಪ್ರಕರಣಗಳು. ಕೆಳಗಿನ ಕೋರ್ಟಿನಲ್ಲಿ ಪ್ರಾಸಿಕ್ಯೂಷನ್ನಿನವರು ಜಾಮೀನು ಅರ್ಜಿಯನ್ನು ವಿರೋಧಿಸಿದುದು ಅತ್ಯಂತ ಸಾಹಸಪ್ರದವಾದ ನಡವಳಿಕೆಯೇ ಸರಿ. ಡಿಫೆನ್ಸ್ ಆಫ್ ಇಂಡಿಯಾ ೧೩೦ (೨) ನಿಬಂಧನೆಯು ಲೋಪಯುಕ್ತವಾಗಿ ಸಾದರಾಗಿದ್ದರೂ ಕೂಡ ಅಪಾದಿತರು ಹೈಕೋರ್ಟಿನಿಂದ ಪರಿಹಾರ ದೊರಕುವವರೆಗೂ ಹತ್ತು ದಿವಸಗಳ ಕಾಲ ಕಾರಾಗೃಹವಾಸವನ್ನನುಭವಿಸಿದ್ದು ಈ ಪ್ರಕರಣದಲ್ಲಿ ಅತ್ಯಂತ ವ್ಯಸನಕರವಾದ ಸಂಗತಿ.

ಇನ್ನು ಆಗಸ್ಟ್ ೧೧ನೇ ತಾರೀಕಿನ ದಿವಸ ಹೊರಟ ನೋಟಿಫಿಕೇಷನ್ನಿನ ಪ್ರಕಾರ ತಪ್ಪು ಸಾಬೀತಾಗಬೇಕಾದರೆ ಎ. ಐ. ಸಿ. ಸಿ. ಯವರು ಸಾಮೂಹಿಕ ಚಳವಳಿಯನ್ನು ಅನುಮೋದಿಸಿದರು ಎಂಬುದಕ್ಕೆ ನ್ಯಾಯಬದ್ಧವಾದ ರುಜುವಾತು ಅತ್ಯಗತ್ಯ. ಎ. ಐ. ಸಿ. ಸಿ. ಯವರು ಯಾವ ಚಳವಳಿಯನ್ನು ಆರಂಭಿಸಿದರು, ಅದು ಯಾವ ಸ್ವರೂಪದ್ದು. ಆ ಚಳವಳಿಯ ವಿವರಗಳೇನು ಎಂಬುದನ್ನು ಪ್ರಾಸಿಕ್ಯೂಷನ್ನಿನವರು ರುಜುವಾತು ಪಡಿಸಬೇಕು. ಸಿಟಿ ಮ್ಯಾಜಿಸ್ಟ್ರೇಟರು ತಮ್ಮ ತೀರ್ಪಿನಲ್ಲಿ ಈ ಅಂಶವನ್ನು ಪ್ರಸ್ತಾಪಿಸಿ ಶ್ರೀ ದೇವದಾಸ್ ಗಾಂಧಿಯವರ ಮೊಖದ್ದಮೆಯಲ್ಲಿ ಅಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರಾದ ಮಿ|| ಇಸಾರ್‌ರವರ ಅಭಿಪ್ರಾಯಗಳನ್ನೇ ಪುಷ್ಟೀಕರಿಸಿರುವುದು ಸಮಯೋಚಿತವಾಗಿದೆ. ಎ.ಐ.ಸಿ.ಸಿ. ಯವರು ಯಾವುದಾದರೂ ನಿರ್ದಿಷ್ಟವಾದ ಚಳವಳಿಯನ್ನು ಹೂಡಿ ಆ ಚಳವಳಿಯ ಕಾರ್ಯಕ್ರಮಗಳನ್ನು ತಿಳಿಸಿದ್ದರೆ ಆಗ ಆಗಸ್ಟ್ ೧೧ನೇ ತಾರೀಕು ನೋಟಿಫಿಕೇಷನ್ ಪ್ರಕಾರ ತಪ್ಪನ್ನು ರುಜುವಾತು ಪಡಿಸಲು ಅನುಕೂಲವಾಗುತ್ತಿತ್ತು. ಆ ನೋಟಿಫಿಕೇಷನ್ ರಚನೆಯೇ ಸರಿಯಾಗಿಲ್ಲದಿರುವಾಗ ಪ್ರಾಸಿಕ್ಯೂಷನ್ನಿನವರು ಯಾವ ಧೈರ್ಯದಿಂದ ಮೊಖದ್ದಮೆ ಹೂಡಿದರೋ ಅದನ್ನು ಅವರೇ ವಿವರಿಸಬೇಕಾಗಿದೆ. ಅದರಲ್ಲೂ ಜವಾಬ್ದಾರಿಯುತರಾದ ಪತ್ರಿಕಾ ಸಂಪಾದಕರುಗಳ ಮೇಲೆ ಇಂತಹ ಮೊಖದ್ದಮೆ ದಾಖಲು ಮಾಡುವಾಗ ಸರಿಯಾದ ಮತ್ತು ನ್ಯಾಯಬದ್ಧವಾದ ಸಾಕ್ಷ್ಯದ ಆಧಾರವನ್ನಿಟ್ಟುಕೊಂಡು ಅವರನ್ನು ಬಂಧಿಸಬೇಕಾಗಿತ್ತು. ಈ ಅಂಶದಲ್ಲಿ ಪ್ರಾಸಿಕ್ಯೂಷನ್ನಿನವರು ಮಾಡಿದ ಲೋಪದಿಂದ ಸಂಪಾದಕರು ಅನಾವಶ್ಯಕವಾದ ಕಷ್ಟನಷ್ಟಗಳಿಗೆ ಗುರಿಯಾಗಬೇಕಾಯಿತು. ಅಲ್ಲದೆ ಇದರಿಂದ ಅನೂಚಾನವಾಗಿ ನಡೆದು ಬಂದ ಸರ್ಕಾರ ಮತ್ತು ಪತ್ರಿಕೋದ್ಯಮಿಗಳ ಬಾಂಧವ್ಯಕ್ಕೆ ಚ್ಯುತಿ ತಂದಂತಾಯಿತು. ಯಾವ ಮೊಖದ್ದಮೆಯನ್ನು ದಾಖಲು ಮಾಡಬೇಕಾದರೂ ಸರಿಯೇ ಅದಕ್ಕೆ ಸಾಕ್ಷ್ಯದ ಆಧಾರವಿರಬೇಕಲ್ಲದೆ ಅದರಿಂದ ಶ್ರೀಮನ್ಮಹಾರಾಜರ ಪ್ರಜೆಗಳಿಗೆ ತೊಂದರೆಯಾಗಬಾರದು. ಮೈಸೂರಿನಲ್ಲಿ "ಡೈರೆಕ್ಟರ್ ಆಫ್ ಪ್ರಾಸಿಕ್ಯೂಷನ್ಸ್" ಎಂಬ ಹೊಸ ಹುದ್ದೆ ಇರಬೇಕಾದುದು ಅತ್ಯಂತಾವಶ್ಯಕ.

ವ್ಯಾಲಿಡೇಟಿಂಗ್ ಆಕ್ಟ್ ಪ್ರಕಾರ ಅಪರಾಧಕ್ಕೆ ಜೀವ ಕೊಡಬಹುದೇ ಎಂಬ ಮತ್ತೊಂದು ನ್ಯಾಯ ಪ್ರಶ್ನೆಯು ಈ ಮೊಖದ್ದಮೆಯಿಂದ ಉದ್ಭವಿಸಿತು. ಸಿಟಿ ಮ್ಯಾಜಿಸ್ಟ್ರೇಟರು ೧೯೪೦ ಬೊಂಬಾಯಿ ೩೦೭ ನ್ಯಾಯದ ಆಧಾರಕ್ಕೆ ಬೆಲೆ ಕೊಟ್ಟಿರುವುದು ಸಮಯೋಚಿತವಾಗಿದೆ. ಅಪರಾಧದ ನಿಬಂಧನೆಯು ಯಾವ ತಾರೀಖಿನಿಂದ ಸಾದರಾಗುವುದೋ ಆ ತಾರೀಖಿನಿಂದ ಅದು ಕಾನೂನು ಭದ್ರವಾಗುವುದೇ ಹೊರತು ಹಿಂದಿನಿಂದ ಅದಕ್ಕೆ ಜೀವ ಬರುವುದಿಲ್ಲ. ಈ ಸಿದ್ಧಾಂತವನ್ನು ಎತ್ತಿ ಹಿಡಿದಿರುವುದು ಸರಿಯಾಗಿದೆ.

ಒಟ್ಟಿನಲ್ಲಿ ಈ ಕೋಲಾಹಲಕರವಾದ ಮೊಖದ್ದಮೆಗಳ ಮೇಲೆ ಆಖೈರು ಅಂಕದ ಪರದೆ ಬಿದ್ದು ಅಪಾದಿತರೆಲ್ಲಾ ಖುಲಾಸೆಯಾದುದು ಅತ್ಯಂತವಾಗಿ ಎಲ್ಲರಿಗೂ ಸಂತೋಷವುಂಟುಮಾಡಿದೆ. ಶ್ರೀ ಎಲ್. ಎಸ್. ರಾಜುರವರು ಅಪಾದಿತರ ಪರ ವಕಾಲತ್ತು ವಹಿಸಿ ಅತ್ಯಂತ ಸಾಮರ್ಥ್ಯದಿಂದ ವಾದಾಂಶಗಳನ್ನು ಹೂಡಿದ್ದು ಈ ಮೊಖದ್ದಮೆಯ ಒಂದು ವಿಶೇಷ ಸಂಗತಿ. ಅವರ ಶ್ಲಾಘನೀಯವಾದ ಸೇವೆ, ಅನುಪಮವಾದ ನ್ಯಾಯ ಪಾಂಡಿತ್ಯ, ಮತ್ತು ಉದಾರವಾದ ಅವರ ಮನೋಭಾವ ಇವುಗಳಿಂದ ಅಪಾದಿತರಿಗೆ ಸಕಲ ವಿಧದಲ್ಲಿಯೂ ಪರಿಹಾರ ದೊರೆ

ಯಿತು. ಶ್ರೀ ರಾಜುರವರು ಈ ಇತಿಹಾಸ ಪ್ರಸಿದ್ಧವಾದ ಮೊಖದ್ದಮೆಯಲ್ಲಿ ವಕಾಲತ್ತು ವಹಿಸಿ ಮೈಸೂರು ಪತ್ರಿಕೋದ್ಯಮಕ್ಕೆ ಅಪಾರವಾದ ಸಹಾಯ ಮಾಡಿದ್ದಾರೆ. ಇದಕ್ಕಾಗಿ ಅವರನ್ನು ಎಷ್ಟು ವಂದಿಸಿದರೂ ಸಾಲದು. ಮತ್ತು ತಾಯಿನಾಡು ಪತ್ರಿಕೆಯವರು ಅವರಿಗೆ ಅತ್ಯಂತ ಚಿರಋಣಿಗಳಾಗಿದ್ದಾರೆ. ಅವರುಎಸಗಿದ ಪ್ರಶಂಸನೀಯವಾದ ಸೇವೆಯನ್ನು ಎಷ್ಟು ಕೊಂಡಾಡಿದರೂ ಸಾಲದು. ಅವರ ಕಾಲವು ಅತ್ಯಂತ ಅಮೂಲ್ಯವಾದುದು. ಒಂದೊಂದು ಘಳಿಗೆಯೂ ಅವರಿಗೆ ವಿಶೇಷ ಬೆಲೆಯುಳ್ಳದ್ದಾಗಿದೆ. ಆದಾಗ್ಯೂ ಅವರು ಪತ್ರಿಕಾ ಸಂಪಾದಕರುಗಳಿಗೆ ನ್ಯಾಯರಕ್ಷಣೆ ಕೊಟ್ಟು ವಿಜಯೋತ್ಸವ ಪಡೆದದ್ದು ಅವರ ಔದಾರ್ಯಕ್ಕೆ ಒಂದು ಗುರುತು. ಅವರಿಗೆ ಭಗವಂತನು ಸನ್ಮಂಗಳವನ್ನುಂಟುಮಾಡಲೆಂದು ನಾವು ಪ್ರಾರ್ಥಿಸುತ್ತೇವೆ ಅವರ ಮೇಧಾಶಕ್ತಿ ಇಲ್ಲದೆ ಈ ಮೊಖದ್ದಮೆಯು ಇಷ್ಟು ಪರಿಪೂರ್ಣವಾಗಿಯೂ, ಇಷ್ಟು ನ್ಯಾಯ ಪಾಂಡಿತ್ಯದಿಂದಲೂ ಶೋಭಿಸುತ್ತಿರಲಿಲ್ಲ ಮ್ಯಾಜಿಸ್ಟ್ರೇಟರು ಅವರ ಒಂದೊಂದು ಅಂಶವನ್ನೂ ಎತ್ತಿ ಹಿಡಿದಿರುವುದು ಅವರ ನ್ಯಾಯ ಕೌಶಲ್ಯಕ್ಕೆ ಒಂದು ಉದಾಹರಣೆ ಶ್ರೀ ರಾಜುರವರಿಗೆ ಮತ್ತೊಮ್ಮೆ ತಾಯಿನಾಡು ಪತ್ರಿಕೆಯ ಪರವಾಗಿ ನಾವು ನಮ್ಮ ಅನಂತಾನಂತ ವಂದನೆಗಳನ್ನು ಸಲ್ಲಿಸುತ್ತೇವೆ

ಈ ಮೊಖದ್ದಮೆಯಿಂದ ಸರ್ಕಾರದವರು ಒಂದು ಪಾಠ ಕಲಿತಂತಾಯಿತು. ಇನ್ನು ಮುಂದೆ ಸಂಪಾದಕರ ಮೇಲೆ ಮೊಖದ್ದಮೆ ಹೂಡುವಾಗ ಎಲ್ಲ ನ್ಯಾಯ ಸಾಕ್ಷ್ಯಗಳನ್ನೂ ವಿಮರ್ಶಿಸಿ ಎಲ್ಲಾ ಮಾರ್ಗಗಳನ್ನೂ ಹುಡುಕಿ ಅನಂತರ ಮುಂದುವರಿಯಬೇಕಾಗಿದೆ ಇನ್ನು ಮುಂದೆ ಪತ್ರಿಕೆಗಳಿಗೂ, ಸರ್ಕಾರಕ್ಕೂ ಬಾಂಧವ್ಯ ಕೆಡದಿರಲಿ ಅಷ್ಟೇ ನಮ್ಮ ಆಶೆ.

———

ಮಹಾರಾಣಿ ಕಾಲೇಜ್ ಮುಂದೆ ಪಿಕೆಟಿಂಗ್

ವಿದ್ಯಾರ್ಥಿಗಳ ಮುಷ್ಕರ ಮುಂದುವರೆಯುತ್ತಿದೆ

ಪೋಲೀಸರಿಗೆ ಲಾಠಿ ಮತ್ತು ಬೆತ್ತ

ಬೆಂಗಳೂರು ಸೆ. ೨

ಕಾಲೇಜುಗಳಲ್ಲಿಯೂ ಮತ್ತು ಹೈಸ್ಕೂಲುಗಳಲ್ಲಿಯೂ ವಿದ್ಯಾರ್ಥಿಗಳ ಮುಷ್ಕರವು ಮುಂದುವರೆಯುತ್ತಲಿದೆ. ನಿನ್ನೆಯಿಂದ ಕಾಲೇಜುಗಳು ಪ್ರಾತಃಕಾಲ ೧೧-೩೦ ಗಂಟೆಯಿಂದ ಕಾರ್ಯಕ್ರಮ ಆರಂಭವಾಗಿವೆ. ಇಂಜಿನಿಯರಿಂಗ್ ಕಾಲೇಜಿಗೆ ಕೇವಲ ಒಬ್ಬಿಬ್ಬರು ವಿದ್ಯಾರ್ಥಿಗಳು ಹೋಗಿದ್ದರು. ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಹಾಜರಾತಿಯು ನಿನ್ನೆಗಿಂತ ಕಡಿಮೆಯಾಗಿದ್ದಿತು.

ಮಹಾರಾಣಿ ಕಾಲೇಜಿನಲ್ಲಿ

ಮಹಾರಾಣಿ ಕಾಲೇಜಿನಲ್ಲಿ ವಿದ್ಯಾರ್ಥಿನಿಯರ ಪಿಕೆಟಿಂಗ್ ಮುಂದುವರೆಯುತ್ತಿರುವುದು. ಈ ದಿನ ಕಾಲೇಜಿನ ಹೆಬ್ಬಾಗಿಲಿನ ಮುಂಭಾಗದಲ್ಲಿ ಸುಮಾರು ೮-೧೦ ಮಂದಿ ವಿದ್ಯಾರ್ಥಿನಿಯರು ನಿಂತು ಪಿಕೆಟಿಂಗ್ ನಡೆಸಿದರು. ಕಾಲೇಜುಗಳಿಗೆ ಬರುವ ಬಸ್ಸುಗಳಲ್ಲಿ ವಿದ್ಯಾರ್ಥಿನಿಯರ ಸಂಖ್ಯೆಯು ಬಹಳ ಕಡಿಮೆಯಾಗಿದ್ದಿತು. ಹಲವು ವಿದ್ಯಾರ್ಥಿನಿಯರು ಹೆಬ್ಬಾಗಿಲನ್ನು ಬಿಟ್ಟು ಬೇರೆ ಬಾಗಿಲಿನಿಂದ ಕಾಲೇಜಿಗೆ ಹೋಗುತ್ತಿದ್ದುದು ಕಂಡುಬಂದಿತು. ಕಾಲೇಜಿಗೆ ೩೦೦ ವಿದ್ಯಾರ್ಥಿನಿಯರ ಪೈಕಿ ಸುಮಾರು ಶೇ|| ೨೦ರಷ್ಟು ಮಂದಿ ಹಾಜರಾಗಿದ್ದರು ಎಂದು ಗೊತ್ತಾಗಿದೆ. ಶ್ರೀ ಕಾಂತರಾಜೇ ಅರಸು ಸ್ಕ್ವೇರ್‌ನಲ್ಲಿ ಪೋಲೀಸರು ಲಾಠಿ ಮತ್ತು ಬೆತ್ತಗಳನ್ನು ಹಿಡಿದು ಹಾಜರಿದ್ದರು.

ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾದ ಮಿ|| [illegible] ರವರು ಸುಮಾರು ೧೧ ಗಂಟೆ ಸಮಯದಲ್ಲಿ ಮಹಾರಾಣಿ ಕಾಲೇಜಿಗೆ ಭೇಟಿ ಕೊಟ್ಟಿದ್ದರು.

ಸೆಂಟ್ರಲ್ ಕಾಲೇಜಿನಲ್ಲಿ

ಸೆಂಟ್ರಲ್ ಕಾಲೇಜಿನಲ್ಲಿಯೂ ವಿದ್ಯಾರ್ಥಿಗಳ ಹಾಜರಾತಿಯು ಕಡಿಮೆಯಾಗಿದ್ದಿತೆಂದು ಕೇಳಲಾಗಿದೆ. ಕೆಲವು ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಬಹಳ ಕಡಿಮೆಯಾಗಿದ್ದಿತು. ವಿದ್ಯಾರ್ಥಿಗಳು ಕಾಲೇಜಿನ ಆವರಣದಲ್ಲಿ ಗುಂಪು ಗುಂಪಾಗಿ ಸೇರಿದ್ದರು. ಲಾಠಿ ಮತ್ತು ಬೆತ್ತಗಳನ್ನು ಹಿಡಿದ ಪೋಲೀಸರು ಅವರುಗಳನ್ನು ಮನೆಗೆ ಹೋಗುವಂತೆ ಪ್ರಾರ್ಥಿಸುತ್ತಿದ್ದರು. ಕಾಲೇಜಿನ ಆವರಣದಲ್ಲಿಯೂ ಪೋಲೀಸರು ಉಸ್ತುವಾರಿಯಲ್ಲಿರುವರು.

ಇಂಟರ್ ಮೀಡಿಯೆಟ್ ಕಾಲೇಜ್

ಎಂದಿನಂತೆ ಇಂಟರ್ ಕಾಲೇಜಿನ ಆವರಣದಲ್ಲಿ ಪೋಲೀಸರ ಉಸ್ತುವಾರಿ ಇದೆ. ಕಾಲೇಜಿಗೆ ಸ್ವಲ್ಪ ಮಂದಿ ಹೋಗಿರುವರು ಎಂದು ಗೊತ್ತಾಗಿದೆ. ಅನೇಕ ತರಗತಿಗಳಲ್ಲಿ ಒಬ್ಬೊಬ್ಬ ವಿದ್ಯಾರ್ಥಿಯು ಮಾತ್ರ ಇದ್ದರು. ಉಪಾಧ್ಯಾಯರು ಅವರಿಗೆ ಪಾಠ ಹೇಳುತ್ತಿದ್ದರು. ಒಂದು ತರಗತಿಯಲ್ಲಿ ಬರೀ ಉಪಾಧ್ಯಾಯರೊಬ್ಬರೇ ಇದ್ದರು.

ಸಂಸ್ಕೃತ ಕಾಲೇಜಿನಲ್ಲಿ

ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿಯೂ ವಿದ್ಯಾರ್ಥಿಗಳ ಮುಷ್ಕರವು ಮುಂದುವರೆಯುತ್ತಿರುವುದು. ಈ ದಿನ ಪ್ರಾತಃಕಾಲ ಕಾಲೇಜಿಗೆ ಕೇವಲ ೪-೫ ಮಂದಿ ವಿದ್ಯಾರ್ಥಿಗಳು ಮಾತ್ರ ಹಾಜರಾಗಿದ್ದರು. ಉಪಾಧ್ಯಾಯರುಗಳು ತಮ್ಮ ತಮ್ಮ ತರಗತಿಗಳಲ್ಲಿ ಆಸನಾಲಂಕರಿಸಿದ್ದರು.

ಸ್ಕೂಲುಗಳಲ್ಲಿ

ನ್ಯಾಷನಲ್ ಹೈಸ್ಕೂಲಿನಲ್ಲಿ ಶಾಲೆಯು ಪ್ರಾತಃಕಾಲ ನಡೆಯಿತು. ಎಂದಿನಂತೆ ಪೋಲೀಸಿನವರು ಶಾಲೆಯ ಸುತ್ತಲೂ ಕಾಯುತ್ತಿದ್ದರು. ಈ ಪ್ರಾತಃಕಾಲ ಸುಮಾರು ೧೦-೧೨ ಮಂದಿ ವಿದ್ಯಾರ್ಥಿಗಳು ಮಾತ್ರ ಶಾಲೆಗೆ ಬಂದಿದ್ದರು. ಉಪಾಧ್ಯಾಯರುಗಳು ಅವರುಗಳಿಗೆ ಪಾಠ ಹೇಳುತ್ತಿದ್ದರು. ಕೆಲವು ಪೋಲೀಸರು ಶಾಲೆಯ ಕಾಂಪೌಂಡಿನಲ್ಲಿಯೂ ಇದ್ದರು.

ಶಾಲೆಯ ಆವರಣದಲ್ಲಿಯೂ ಮತ್ತು ಹತ್ತಿರದ ಮೈದಾನದಲ್ಲಿಯೂ ವಿದ್ಯಾರ್ಥಿಗಳು ಗುಂಪು ಗುಂಪಾಗಿ ಸೇರಿದ್ದರು. ಶಾಲೆಯ ಉಪಾಧ್ಯಾಯರಲ್ಲೊಬ್ಬರಾದ ಶ್ರೀ ಕೆ. ಎಸ್. ಕೃಷ್ಣಸ್ವಾಮಿಯವರೂ ಮತ್ತು ಪೋಲೀಸಿನವರೂ ವಿದ್ಯಾರ್ಥಿಗಳಿಗೆ ಗುಂಪು ಸೇರದಂತೆ ಉಪದೇಶ ಮಾಡುತ್ತಿದ್ದರು. ವಿದ್ಯಾರ್ಥಿಗಳು ತಮ್ಮ ಮನೆಗಳಿಗೆ ಹಿಂತಿರುಗಿದರು.

ಕೋಟೆ ಹೈಸ್ಕೂಲಿನಲ್ಲಿಯೂ ಮತ್ತು ಇತರ ಸ್ಕೂಲುಗಳಲ್ಲಿಯೂ ವಿದ್ಯಾರ್ಥಿಗಳ ಮುಷ್ಕರವು ಮುಂದುವರೆಯುತ್ತಿದೆ. ಪೋಲೀಸರ ಬಸ್ತು ಇದೆ. ಶಾಲೆಯ ಸಮೀಪದಲ್ಲಿ ಗುಂಪು ಸೇರಿದ್ದ ವಿದ್ಯಾರ್ಥಿಗಳನ್ನು ಪೋಲೀಸರು ಚದುರಬೇಕೆಂದು ಕೋರಿದರು. ಅದರಂತೆ ವಿದ್ಯಾರ್ಥಿಗಳು ಚದುರಿದರು. ಶಾಲೆಗಳಿಗೆ ಹಾಜರಾತಿಯು ಬಹಳ ಕಡಿಮೆಯಾಗಿದೆ. ಪರಿಸ್ಥಿತಿಯು ಶಾಂತವಾಗಿದೆ

ಮಲ್ಲೇಶ್ವರದಲ್ಲಿ

ಮಲ್ಲೇಶ್ವರದಲ್ಲಿ ಈ ದಿನ ಯಾವ ಘಟನೆಗಳೂ ನಡೆಯಲಿಲ್ಲ. ವಿದ್ಯಾರ್ಥಿಗಳು ಸ್ಕೂಲಿಗೆ ಹೋಗಲಿಲ್ಲ. ಮಲ್ಲೇಶ್ವರದ ಮಹಿಳಾ ಹೈಸ್ಕೂಲು ತೆರೆದಿತ್ತು. ಆದರೆ ವಿದ್ಯಾರ್ಥಿನಿಯರು ಸ್ಕೂಲಿಗೆ ಹೋಗಲಿಲ್ಲ. ಮಲ್ಲೇಶ್ವರಂ ಹೈಸ್ಕೂಲಿನಲ್ಲಿ ವಿದ್ಯಾರ್ಥಿಗಳ ಹಾಜರಾತಿಯು ಬಹಳ ಕಡಿಮೆಯಾಗಿಯೇ ಇದ್ದಿತು.

ಮಲ್ಲೇಶ್ವರದ ಮಹಿಳಾ ಹೈಸ್ಕೂಲು ಬಳಿ ಪೋಲೀಸಿನವರಿದ್ದರು.

ಸಂಸ್ಥಾನದ ಪರಿಸ್ಥಿತಿ

ಸರ್ಕಾರದ ಪ್ರಕಟನೆ

ಬೆಂಗಳೂರು ಸೆ. ೨

ಮೈಸೂರು ಸರ್ಕಾರದ ಪಬ್ಲಿಸಿಟಿ ಆಫೀಸರು ಹೊರಡಿಸಿರುವ ಪ್ರಕಟನೆಯು ತಿಳಿಸುವುದೇನೆಂದರೆ:

ವಿದ್ಯಾರ್ಥಿಗಳ ಪಾಠಬಹಿಷ್ಕಾರದ ಸಂಬಂಧದಲ್ಲಿ ಎರಡು ಘಟನೆಗಳು ನಡೆದಿರುವುದಾಗಿ ವರದಿಯಾಗಿದೆ

ವಿದ್ಯಾರ್ಥಿಗಳ ಸಭೆ

ಬೆಂಗಳೂರು ಸೆ.

ಈ ದಿವಸವೂ ಮಧ್ಯಾಹ್ನ ೨-೪೫ ಗಂಟೆಗೆ ಸೆಂಟ್ರಲ್ ಕಾಲೇಜಿನ ಹೊರ ಆವರಣದಲ್ಲಿ ವಿದ್ಯಾರ್ಥಿಗಳ ಸಭೆ ಮತ್ತು ಭಾಷಣ ನಡೆಯಿತು ಪೋಲೀಸರು ಅಡ್ಡಿಪಡಿಸಲಿಲ್ಲ ಕೆಲವು ಠರಾವುಗಳೂ ಆದವು

ಮೆಡಿಕಲ್ ಸ್ಕೂಲಿನ ಅಧಿಕಾರಿಗಳು ಏನೇ ಆದರೂ ೯ನೇ ತಾರೀಖು ಪರೀಕ್ಷೆಯನ್ನು ನಡೆಸಲು ನಿರ್ಧರಿಸಿರುವುದನ್ನು ಈ ವಿದ್ಯಾರ್ಥಿಗಳ ಸಭೆಯು ಖಂಡಿಸಿ ಠರಾವು ಮಾಡಿತು. ಅಲ್ಲದೆ ಮೆಡಿಕಲ್ ಸ್ಕೂಲಿನ ಅಧಿಕಾರಿಗಳು ವಿದ್ಯಾರ್ಥಿಗಳಲ್ಲಿ ಒಡಕನ್ನುಂಟುಮಾಡುವ ನೀತಿಯನ್ನು ಅನುಸರಿಸುತ್ತಿರುವುದನ್ನು ಖಂಡಿಸಿ ಠರಾವಾಯಿತು.

ವಿದ್ಯಾರ್ಥಿಗಳ ವಿಚಾರದಲ್ಲಿ ಪೋಲೀಸರೂ ಅಧಿಕಾರಿಗಳೂ ಅನುಸರಿಸುತ್ತಿರುವ ನೀತಿಯನ್ನೂ ಸರ್ಕಾರದವರು ತೋರಿಸಿರುವ ಧೋರಣೆಯನ್ನೂ ಖಂಡಿಸಲಾಯಿತು.

ಮಲ್ಲೇಶ್ವರದ ವಿದ್ಯಾರ್ಥಿಗಳ ಅನುಸರಿಸುತ್ತಿರುವ ಕಾರ್ಯನೀತಿಯನ್ನು ಪ್ರಶಂಸಿಸಲಾಯಿತು.

ಮಕ್ಕಳ ಮೇಲೆ ಪೋಲೀಸರ ಬೆತ್ತದ ಪ್ರಹಾರ

ಹಿಂದೂಮಹಾಸಭಾ ಕಾರ್ಯದರ್ಶಿಯವರ ಖಂಡನೆ

ಬೆಂಗಳೂರು ಸೆ. ೨

ಮೈಸೂರು ಸಂಸ್ಥಾನದ ಹಿಂದೂಮಹಾಸಭೆಯ ಪ್ರಧಾನ ಕಾರ್ಯದರ್ಶಿ ಶ್ರೀ ಟಿ. ವಿ. ರಾಮಭಾರ್ಗವರು ಈ ರೀತಿ ಬರೆಯುತ್ತಾರೆ—

ನಿನ್ನೆ ಪೋಲೀಸಿನವರು ಮಕ್ಕಳ ಮೇಲೆ ಮಲ್ಲೇಶ್ವರದಲ್ಲಿ ಬೆತ್ತದ ಪ್ರಹಾರ ಮಾಡಿದರೆಂದು ವರದಿ ಬಂದಿರುವುದನ್ನು ನೋಡಿದರೆ ಪ್ರತಿಯೊಬ್ಬ ನಾಗರೀಕನಿಗೂ ಸಂಕಟ ಉಂಟಾಗುವುದರಲ್ಲಿ ಸಂಶಯವಿಲ್ಲ. ಈ ತರಹ ಕಾರ್ಯಕ್ರಮವನ್ನು ಸರ್ಕಾರದವರು ಮುಂದುವರಿಸುವುದರಿಂದ ಪ್ರಜಾನುರಾಗವನ್ನು ಸಂಪಾದಿಸಲಾರರು. ಮಕ್ಕಳು ಶಾಲಾಕಾಲೇಜಿಗೆ ಹೋಗದೆ ಇರುವುದು ಸ್ವಾತಂತ್ರ್ಯ ಸಾಧನೆಗೆ ಹಾನಿಕರವಲ್ಲದಿದ್ದರೂ, ಅವರು ಈ ಪವಿತ್ರವಾದ ಅವಸರದಲ್ಲಿ ತಮ್ಮ ಉತ್ಸಾಹವನ್ನು ಮಾತ್ರ ತೋರ್ಪಡಿಸುತ್ತಿದ್ದಾರೆ ಹಾಗು ಸರ್ಕಾರದವರಲ್ಲಿ ಈ ಮಾರ್ಗವನ್ನು ಬಿಟ್ಟುಬಿಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಪ್ರತಿಯೊಬ್ಬರ ಮನೆಯಲ್ಲಿಯೂ ಮಕ್ಕಳು ಸಾಧಾರಣವಾಗಿ ಸತ್ಯಾಗ್ರಹ [illegible] ಅಧಿಕಾರಿಗಳೂ ಅನುಭವ ಪಡೆದಿರು[illegible] ವಿದ್ಯಾರ್ಥಿಗಳು ಶಾಲಾಕಾಲೇಜಿಗೆ ಹೋಗದಿದ್ದರೆ ಮೈಸೂರು ಸರ್ಕಾರಕ್ಕೆ ಯಾವ ಧಕ್ಕೆಯೂ ಬರುವುದಿಲ್ಲ. ಆಂಗ್ಲೀಯರ ರೀತಿಗಳ ಅನುಕರಣವನ್ನು ಮೈಸೂರು ಸರ್ಕಾರವು ಬಿಡುವುದು ಉತ್ತಮ.

ಮಲ್ಲೇಶ್ವರದಲ್ಲಿ ವಿದ್ಯಾರ್ಥಿಗಳ ಮೆರವಣಿಗೆ ಮತ್ತು ದಸ್ತಗಿರಿಗಳು

ಆರು ಮಂದಿ ವಿದ್ಯಾರ್ಥಿಗಳನ್ನು ಕ್ರಮವಿಲ್ಲದೆ ಬಂಧಿಸಿದರು

ಸ್ಕೂಲುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯೇ ಇಲ್ಲ

ಬೆಂಗಳೂರು ಸೆ ೩

ಮಲ್ಲೇಶ್ವರದಲ್ಲಿ ಈ ದಿವಸ ವಿದ್ಯಾರ್ಥಿಗಳು ಶಾಂತ ರೀತಿಯಿಂದ ಮೆರವಣಿಗೆ ಹೊರಟರು ಆದರೆ ಹೈಸ್ಕೂಲ್ ಬಳಿ ಪೋಲೀಸಿನವರು ಆ ಮೆರವಣಿಗೆಯನ್ನು ನಿಲ್ಲಿಸಿ ಆರು ಮಂದಿ ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿ ವಿದ್ಯಾರ್ಥಿ ಸಮೂಹದವರನ್ನು ಅವರವರ ಮನೆಗಳಿಗೆ ಹೋಗುವಂತೆ ಹೇಳಿಕೊಂಡರು. ಕೆಲವರು [illegible] ಹೋದರು. ಮಿಕ್ಕ ಕೆಲವರು ಆ ಸ್ಥಳ ಬಿಟ್ಟು ಸ್ವಲ್ಪ ದೂರ ಹೋಗಿ ಪುನಃ ಮೆರವಣಿಗೆ ಹೊರಟರು.

ಶಾಲೆಗಳ ಸ್ಥಿತಿ

ಮಲ್ಲೇಶ್ವರದ ಹೈಸ್ಕೂಲು ಎಂದಿನಂತೆ ಮಧ್ಯಾಹ್ನ ೧೨ ಗಂಟೆಗೆ ತೆರೆಯಿತು. ಉಪಾಧ್ಯಾಯರು ಹಾಜರಿದ್ದರು. ಒಟ್ಟು [illegible] ವಿದ್ಯಾರ್ಥಿಗಳಿಗೆ ಕೇವಲ ೨೪ ಮಂದಿ ವಿದ್ಯಾರ್ಥಿಗಳು ಮಾತ್ರ ಶಾಲೆಗಳಲ್ಲಿ ಹಾಜರಿದ್ದರು. ಹೈಸ್ಕೂಲು ತೆರೆಯುವವರೆಗೂ ಪೋಲೀಸಿನವರು ಹೊರಗಡೆ ರಸ್ತೆಯಲ್ಲಿ ಉಸ್ತುವಾರಿಯಲ್ಲಿದ್ದರು. ನಂತರ ಅವರು ಅಲ್ಲೆಲ್ಲಿಯೂ ಕಾಣಿಸಿಕೊಳ್ಳಲಿಲ್ಲ. ಒಬ್ಬ ಸಾಮಾನ್ಯ ಕಾನ್ಸ್ಟೇಬಲ್ಲನ್ನು ಹೊರತು ಪೇಟದ ಕಾನ್ಸ್ಟೇಬಲ ಗಳಾಗಲೀ [illegible] ಕಾನ್ಸ್ಟೇಬಲ್ಲುಗಳಾಗಲೀ ಯಾರೂ ಈ ದಿವಸ ಶಾಲೆಗಳ ಒಳಗಾಗಲೀ, ಹೊರಗಾಗಲೀ ಇರಲಿಲ್ಲ

ಮಲ್ಲೇಶ್ವರದ ಬಾಲಿಕೆಯರ ಹೈಸ್ಕೂಲು ಗೋಕುಲಾಷ್ಟಮಿ ಪ್ರಯುಕ್ತ ಈ ದಿವಸ ಮುಚ್ಚಲಾಗಿತ್ತು

ಮಲ್ಲೇಶ್ವರದ ಮಿಡಲ್ ಸ್ಕೂಲಿನ ಸ್ಥಿತಿಯು ನಿನ್ನೆಯಂತೆಯೇ ಇದೆ.

ಮೆರವಣಿಗೆ ಮತ್ತು ದಸ್ತಗಿರಿಗಳು

ಶಾಲೆಗಳಿಗೆ ಹೋಗದೆ ಮುಷ್ಕರ ಹೂಡಿದ್ದ ವಿದ್ಯಾರ್ಥಿಗಳೂ, [illegible] ಸುಮಾರು ನೂರು ಮಂದಿ—ಮೊದಲು ಮಲ್ಲೇಶ್ವರದ ಬಾಲಕಿಯರ ಮಿಡಲ್ ಸ್ಕೂಲ್ ಬಳಿ ಶಿಸ್ತಿನಿಂದ ಸೇರಿ ಅಲ್ಲಿಂದ ಡಿ. ವೆಂಕಟರಾಮಯ್ಯನವರ ರಸ್ತೆ ಮುಖಾಂತರ ಉದ್ದಕ್ಕೂ ಮೆರವಣಿಗೆ ಹೊರಟರು. ಮೆರವಣಿಗೆ ಮುಂಭಾಗದಲ್ಲಿ [illegible] ವಿದ್ಯಾರ್ಥಿನಿಯರು ತ್ರಿವರ್ಣದ ರಾಷ್ಟ್ರೀಯ ಧ್ವಜವನ್ನು ಹಿಡಿದು ಗಂಭೀರವಾಗಿ ನಡೆಯುತ್ತಿದ್ದರು. ಅವರ ಹಿಂದೆ ಇಬ್ಬಿಬ್ಬರಾಗಿ ಹುಡುಗರು ಶಾಂತಿಯಿಂದಲೂ, ಶಿಸ್ತಿನಿಂದಲೂ ರಾಷ್ಟ್ರೀಯ ಗೀತೆಗಳನ್ನು ಹಾಡುತ್ತ ಮುಂದುವರಿಯುತ್ತಿದ್ದರು

ಪೋಲೀಸಿನವರು ಬಂದರು

ಮೆರವಣಿಗೆಯು ಮಲ್ಲೇಶ್ವರದ ಬಾಲಕಿಯರ ಹೈಸ್ಕೂಲ್ ಪಕ್ಕದ ರಸ್ತೆಯಲ್ಲಿ ಹೊರಟು ೧೮ನೇ ಕ್ರಾಸ್ ರಸ್ತೆಯಲ್ಲಿ ಬಲಕ್ಕೆ ತಿರುಗಿ ಸೌತ್ ಎಂಡ್ ಹೋಟೇಲ್ ಪಕ್ಕದ ರಸ್ತೆಯಲ್ಲಿ ನಿಂತಿತು. ಅಲ್ಲಿ ಅವರು ತಮ್ಮ ಮೆರವಣಿಗೆಯನ್ನು ವ್ಯವಸ್ಥೆಗೊಳಿಸುತ್ತಿರುವಾಗ ಪೋಲೀಸ್ ವ್ಯಾನು ಬೇವಿನಮರದ ರಸ್ತೆಯ ಮುಖಾಂತರ ಆ ಸ್ಥಳಕ್ಕೆ ಬಂದಿತು

ವಿದ್ಯಾರ್ಥಿಗಳ ಮುಖಂಡರು ಮೆರವಣಿಗೆಯಲ್ಲಿರುವ ವಿದ್ಯಾರ್ಥಿಗಳನ್ನುದ್ದೇಶಿಸಿ "ಯಾರೂ ಚದುರಬೇಡಿ [illegible] ನೋಡಿರಿ" ಎನ್ನುತ್ತಿದ್ದರು

ಕ್ರಮವಿಲ್ಲದ ದಸ್ತಗಿರಿಗಳು

ಪೋಲೀಸ್ ವ್ಯಾನಿನಲ್ಲಿ ಬೆಂಗಳೂರು ಡಿ|| ಮ್ಯಾಜಿಸ್ಟ್ರೇಟರಾದ ಶ್ರೀ [illegible] ಎಂ ಹೆಚ್ ರಣಜೋಧಸಿಂಗರೂ, ಸಿಟಿ ಪೋಲೀಸ್ ಸೂಪರಿಂಟೆಂಡೆಂಟರಾದ ಶ್ರೀ ಪಿ ಡಿ ಮಾಚಯ್ಯನವರೂ, ಅಸಿಸ್ಟೆಂಟ್ ಪೋಲೀಸ್ ಸೂಪರಿಂಟೆಂಡೆಂಟರಾದ ಮಿ|| ಖಾದರ್ ಅಲಿಯವರೂ, ಮಲ್ಲೇಶ್ವರದ ಸಬ್ ಇನ್ಸ್ಪೆಕ್ಟರವರೂ ಇದ್ದರು ಒಳಗಡೆ ಲಾಠೀ ಸಜ್ಜಿತರಾದ ಪೋಲೀಸಿನವರು ಸ್ಟೀಲ್ ಹೆಲ್ಮೆಟ್ ಗಳನ್ನು ಹಾಕಿಕೊಂಡು ಕುಳಿತಿದ್ದರು

ಪೋಲೀಸ್ ವ್ಯಾನು ಬೇವಿನಮರದ ರಸ್ತೆಯ ಪಕ್ಕಕ್ಕೆ ನಿಂತಿತು ಒಡನೆಯೇ ಶ್ರೀ ಮಾಚಯ್ಯನವರೂ, ಮಿ|| ಖಾದರ್ ಅಲಿಯವರೂ ವ್ಯಾನಿನಿಂದ ಇಳಿದರು. ಅವರೊಡನೆ ಒಬ್ಬಿಬ್ಬ ಕಾನ್ಸ್ಟೇಬಲ್ಲುಗಳೂ ಇಳಿದರು ಮಿ|| ಮಾಚಯ್ಯನವರು ಮೆರವಣಿಗೆಯನ್ನು ನಿಲ್ಲುವಂತೆ ಹೇಳಿ, ವಿದ್ಯಾರ್ಥಿ ಸಮೂಹದಲ್ಲಿದ್ದ ದೊಡ್ಡವರಲ್ಲಿ ಒಬ್ಬೊಬ್ಬರನ್ನು ಹಿಡಿದುಕೊಂಡು ವ್ಯಾನಿಗೆ ಕಳುಹಿಸಿದರು ಅವರ ಅಪರಾಧವೇನೆಂಬುದಾಗಲೀ ಅವರ್ಯಾರೆಂಬುದಾಗಲೀ ಪ್ರಶ್ನಿಸದೆ, ಸುವ [illegible] ಅವರನ್ನು ಬಂಧಿಸಿಬಿಟ್ಟರು.

ಇನ್ನೊಬ್ಬ ಯುವಕರು ಗಾಂಧಿ ಟೋಪಿ ಧರಿಸಿ ಬೈಸಿಕಲ್ ಹಿಡಿದುಕೊಂಡು ನಿಂತಿದ್ದರು ಶ್ರೀ ಮಾಚಯ್ಯನವರು ಅವರ ಹತ್ತಿರ ಬಂದು "ನೀವು [illegible] ವಿದ್ಯಾರ್ಥಿಗಳೇ ಅಥವ ಸುಮ್ಮನೆ ನೋಡುವುದಕ್ಕೆ ಬಂದಿದ್ದೀರೋ" ಎಂದರು ವಿದ್ಯಾರ್ಥಿಗಳೆಂಬುದಾಗಿ ಉತ್ತರ ಬಂದಾಗ ಅವರ ತೋಳಿಗೆ ಕೈ ಹಾಕಿ ಸಬ್ ಇನ್ಸ್ಪೆಕ್ಟರನ್ನು ಕರೆಸಿ ಹಿಡಿದುಕೊಂಡು ಹೋಗುವಂತೆ ಹೇಳಿದರು ಕಾರಣವನ್ನೇ ಕೊಡಲಿಲ್ಲ ಆ ಯುವಕರು ವ್ಯಾನಿನೊಳಕ್ಕೆ ಹೋದ ಮೇಲೆ ಒಬ್ಬ ಕಾನ್ಸ್ಟೇಬಲನು ಆ ಬೈಸಿಕಲ್ಲನ್ನು ವಶಕ್ಕೆ ತೆಗೆದುಕೊಂಡನು.

ಅನಂತರ ಶ್ರೀ ಮಾಚಯ್ಯನವರು ಪೋಲೀಸ ವ್ಯಾನಿನಲ್ಲಿ ಕುಳಿತಿದ್ದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಸಲಹೆ ಕೇಳಿ ಪುನಃ ಹಿಂತಿರುಗಿ ಬಂದು ಗುಂಪಿನಲ್ಲಿದ್ದ ದೊಡ್ಡವರನ್ನು ಮಾತ್ರ ಹುಡುಕಿ ಬಂಧಿಸಿದರು

ದಸ್ತಗಿರಿಯಾದವರಿವರು:—ಬಿ ಎಂ ರಂಗಸ್ವಾಮಿ, ಸಿ ಆರ್ ರಾಮಸ್ವಾಮಿ [ಹೈಸ್ಕೂಲು ವಿದ್ಯಾರ್ಥಿ], ಅನಂತಯ್ಯಂಗ್ [ಇಂಟರ್ ಕಾಲೇಜ್ ವಿದ್ಯಾರ್ಥಿ], ವಿಶ್ವೇಶ್ವರಯ್ಯ [ಗಾಂಧಿ ನಗರದ ಹೈಸ್ಕೂಲು], ಜಿ ಎಸ್ ನಾರಾಯಣಮೂರ್ತಿ [ಮಲ್ಲೇಶ್ವರ ಹೈಸ್ಕೂಲ್], ಪಿ ರಾಮಾಚಾರ್ [ಮಲ್ಲೇಶ್ವರ ಹೈಸ್ಕೂಲ್].

ವಿದ್ಯಾರ್ಥಿಗಳ ಗುಂಪು ಅಲ್ಲಿಂದ ಚದುರಲಿಲ್ಲವಾಗಿ ಮಿ|| ಖಾದರ್ ಅಲಿಯವರು ಇಂಗ್ಲೀಷಿನಲ್ಲಿ "ಮನೆಗಳಿಗೆ ಹೋಗಿ" ಎಂದರು. ಹುಡುಗರು ಕೇಳಲಿಲ್ಲವಾಗಿ ದಸ್ತಗಿರಿಯಾದ ಎಲ್ಲಾ ವಿದ್ಯಾರ್ಥಿಗಳನ್ನು ಬುದ್ಧಿವಾದ ಹೇಳುವಂತೆ ಕೇಳಿಕೊಂಡರು ವ್ಯಾನಿನ ಬಾಗಿಲು ತೆರೆಯಲ್ಪಟ್ಟು ಆ ವಿದ್ಯಾರ್ಥಿಗಳು ಪುಟ್ ಬೋರ್ಡ್ ಮೇಲೆ ನಿಂತು "ಸಹೋದರರೇ ಶಾಂತವಾಗಿ ಮನೆಗಳಿಗೆ ಹೋಗಿ, ಇಲ್ಲಿ ನಿಲ್ಲಬೇಡಿ" ಎಂದರು. ವಿದ್ಯಾರ್ಥಿಗಳು ಚಪ್ಪಾಳೆ ತಟ್ಟಿ ಬೇವಿನ ಮರದ ರಸ್ತೆಯ ಮುಖಾಂತರ ಹೊರಟುಹೋದರು

ತ್ರಿವರ್ಣದ ರಾಷ್ಟ್ರೀಯ ಧ್ವಜವನ್ನು ಹಿಡಿದುಕೊಂಡಿದ್ದ ವಿದ್ಯಾರ್ಥಿನಿಯರೂ ಹೊರಟುಹೋದರು.

ಪೋಲೀಸ್ ವ್ಯಾನು ಅಲ್ಲಿಂದ ಮುಂದಕ್ಕೆ ಹೋಗಿ ಚೌಕದಲ್ಲಿ ತಿರುಗಿ ಪುನಃ ಬೇವಿನಮರದ ರಸ್ತೆಯ ಮುಖಾಂತರ ಹೊರಟು ಹೋಯಿತು. ವ್ಯಾನು ಹೋಗುತ್ತಿದ್ದಾಗ "ಮಹಾತ್ಮ

ಗಾಂಧಿ ಕಿ ಜೈ" ಎಂಬುದಾಗಿ ಜಯಘೋಷಗಳಾದವು

ಅನಂತರ ಹುಡುಗರು ಕ್ರಮಶಃ ಮೆರವಣಿಗೆ ಸೇರಿ ಮುಂದುವರಿದರು.

ವಿದ್ಯಾರ್ಥಿನಿಯರಿಗೆ ಏಟುಬಿದ್ದಿದೆ

ಮಂಗಳವಾರ ಮಲ್ಲೇಶ್ವರಂ ಮಹಿಳಾ ಹೈಸ್ಕೂಲಿನ ಬಳಿ ಪೋಲೀಸರು ವಿದ್ಯಾರ್ಥಿಗಳಿಗೆ ಬೆತ್ತದಲ್ಲಿ ಪ್ರಹಾರಮಾಡಿದಾಗ್ಗೆ ಮೈಥಿಲಿ ಮಿತ್ರ ಮಧುರ ಎಂಬ ಮಹಿಳಾ ವಿದ್ಯಾರ್ಥಿನಿಯರಿಗೆ ಏಟುಬಿದ್ದಿದೆ ಎಂಬುದಾಗಿ ತಾಯಿನಾಡು ಸಂಪಾದಕರಿಗೆ ೭ ಜನ ವಿದ್ಯಾರ್ಥಿನಿಯರು ಸಹಿಮಾಡಿದ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

....

ಬೆಂಗಳೂರಿನಲ್ಲಿ ಪ್ರದರ್ಶನ

ಶಾಂತ ರೀತಿಯ ಮೆರವಣಿಗೆ

ಕೆಲವು ಕಡೆ ಪೋಲೀಸಿನವರಿಂದ ತಡೆ

ದಸ್ತಗಿರಿಗಳು ಮತ್ತು ಖುಲಾಸೆ

ಹಿಮಾಲಯಾ ಟಾಕೀಸ್ ಬಳಿ ರಸ್ತೆಯಲ್ಲಿ ಸತ್ಯಾಗ್ರಹ

ಬೆಂಗಳೂರು ಸೆ. ೭

ನಿನ್ನೆ ದಿವಸ ಬೆಂಗಳೂರಿನಲ್ಲಿ ಮೆರವಣಿಗೆಗಳೂ, ಸಭೆಗಳೂ, 'ಸ್ಪೆಶಲ್ ಸ್ಕ್ವಾಡ್' ಯುವಕರ ಪ್ರದರ್ಶನಗಳೂ ಎಲ್ಲಾ ಭಾಗಗಳಲ್ಲಿಯೂ ನಡೆದವು. ಪೋಲೀಸಿನವರು ಬೆಳಿಗ್ಗೆಯೂ ಮತ್ತು ಮಧ್ಯಾಹ್ನವೂ ಈ ಮೆರವಣಿಗೆ ಮತ್ತು ಪ್ರದರ್ಶನಗಳಿಗೆ ಕಾರಣಕರ್ತರಾದ ಕೆಲವರನ್ನು ಬಂಧಿಸಿ, ರಾತ್ರಿಯ ಹೊತ್ತಿಗೆ ಬಿಡುಗಡೆ ಮಾಡಿಬಿಟ್ಟರು. ನಿನ್ನೆಯ ಪ್ರದರ್ಶನ ಮತ್ತು ಮೆರವಣಿಗೆಗಳಿಗೆ ಕಾರಣ 'ಕ್ವಿಟ್ ಇಂಡಿಯಾ' ಆಚರಣೆ ಎಂಬುದಾಗಿ ತಿಳಿಯಬಂದಿತು.

ಮೊನ್ನೆಯ ದಿನ ರಾತ್ರಿಯೇ ಮಲ್ಲೇಶ್ವರ, ಚಾಮರಾಜಪೇಟೆ, ಶಂಕರಪುರ ಮತ್ತು ಬಸವನಗುಡಿ ಬಡಾವಣೆಗಳಲ್ಲಿಯೂ, ಪೇಟೆಯ ಭಾಗಗಳಲ್ಲೂ ಎಲ್ಲಿ ನೋಡಿದರೂ "ಕ್ವಿಟ್ ಇಂಡಿಯಾ" ಪೋಸ್ಟರುಗಳನ್ನು ಅಂಟಿಸಿಬಿಟ್ಟಿದ್ದರು. ದೀಪದ ಕಂಬಗಳ ಮೇಲೂ, ಗೋಡೆಗಳ ಮೇಲೂ "ಕ್ವಿಟ್ ಇಂಡಿಯಾ" ಘೋಷಣೆಗಳನ್ನು ಬರೆದಿದ್ದರು. ಅನೇಕ ಕಡೆ ಕಾಂಗ್ರೆಸ್ ಬುಲೆಟಿನ್ನುಗಳನ್ನು ಗೋಡೆಗಳ ಮೇಲೆ ಅಂಟಿಸಿದ್ದರು. ಅದನ್ನು ನೋಡಲಾಗಿ ಅದರ ಶಿರೋನಾಮೆಯಲ್ಲಿ ಫ್ರೀ ಇಂಡಿಯಾ ಬುಲೆಟಿನ್ ಎಂಬುದಾಗಿತ್ತು.

ಮಲ್ಲೇಶ್ವರದಲ್ಲಿ ವಿದ್ಯಾರ್ಥಿಗಳ ಮೆರವಣಿಗೆ

ಮಲ್ಲೇಶ್ವರದಲ್ಲಿ ಬೆಳಗ್ಗೆ ಒಂದೆರಡು ಅಂಗಡಿಗಳನ್ನು ಬಿಟ್ಟು ಮಿಕ್ಕ ಅಂಗಡಿಗಳ್ಯಾವುವೂ ತೆಗೆದಿರಲಿಲ್ಲ. ಕೃಷ್ಣ ಬಿಲ್ಡಿಂಗ್ಸ್ ಹತ್ತಿರದಿಂದ ಹಿಡಿದು ೧೧ನೇ ಕ್ರಾಸ್ ರಸ್ತೆಯವರೆಗೂ ಅಂಗಡಿಗಳನ್ನೆಲ್ಲಾ ಮುಚ್ಚಿ ಹರತಾಳವನ್ನಾಚರಿಸಿದ್ದರು.

ಬೆಳಿಗ್ಗೆ ೯ ಗಂಟೆ ಸುಮಾರಿನಲ್ಲಿ ಹಲಕೆಲವು ವಿದ್ಯಾರ್ಥಿಗಳು ತ್ರಿವರ್ಣದ ರಾಷ್ಟ್ರೀಯ ಧ್ವಜವನ್ನು ಹಿಡಿದುಕೊಂಡು ಮಿಡ್ಲ್ ಸ್ಕೂಲ್ ಆಟದ ಮೈದಾನದ ಬಳಿ ಸೇರಲಾರಂಭಿಸಿದರು. ಅಲ್ಲಿಗೆ ಕೆಲವು ಹಿರಿಯ ವಿದ್ಯಾರ್ಥಿಗಳು ಬೈಸಿಕಲ್ಲುಗಳ ಮೇಲೆ ಬಂದಿದ್ದರು.

ರೀಡಿಂಗ್ ರೂಮಿನಲ್ಲಿ ಹೊಸ ತರಕಾರಿ ಸಹಕಾರ ಸಂಘವೊಂದು ರಾಜಮಂತ್ರಪ್ರವೀಣ ಶ್ರೀ ಎ. ವಿ. ರಾಮನಾಥನ್‌ರವರಿಂದ ಆರಂಭಿಸಲ್ಪಡುವ ಸಲುವಾಗಿ ಒಂದು ಸಭೆ ಏರ್ಪಾಟಾಗಿತ್ತು. ಪ್ರದರ್ಶನಕಾರರು ಈ ಸಭೆಗೆಲ್ಲಿ ಬಂದು ಘೋಷಣೆ ಮಾಡುವರೋ ಎಂಬುದಾಗಿ ಸಿವಿಲ್ ಗಾರ್ಡುಗಳು ರೀಡಿಂಗ್ ರೂಮಿನ ಸುತ್ತಲೂ ನಿಂತು, ಆಹ್ವಾನಿತ ಮಹನೀಯರನ್ನು ಮಾತ್ರ ಒಳಗೆ ಬಿಡುತ್ತಿದ್ದರು. ಮಿಕ್ಕವರನ್ನು 'ಇಲ್ಲಿ ನಿಲ್ಲಬೇಡಿ, ಆ ಕಡೆ ಹೋಗಿ. ಇಲ್ಲಿ ನಿಮಗೇನು ಕೆಲಸ' ಎನ್ನುತ್ತಿದ್ದರು.

ಆದರೆ ಶ್ರೀ ಎ. ವಿ. ರಾಮನಾಥನ್‌ರವರು ಸಭೆಗೆ ಬಂದು ಸಭಾ ಕಾರ್ಯಕಲಾಪಗಳನ್ನು ಮುಗಿಸುವವರೆಗೂ ಪ್ರದರ್ಶಕಾರರು ಅಲ್ಲಿಗೆ ಬರಲೇ ಇಲ್ಲ. ಹೈಸ್ಕೂಲ್ ಕಾರ್ನರ್ ಬಳಿ ಕೆಲವು ವಿದ್ಯಾರ್ಥಿಗಳು 'ಕ್ವಿಟ್ ಇಂಡಿಯಾ' ಬ್ಯಾಡ್ಜುಗಳನ್ನು ಹಿಡಿದುಕೊಂಡು ಬಸ್ ಸ್ಟ್ಯಾಂಡಿನಲ್ಲಿ ಬಸ್ಸುಗಳು ನಿಂತಾಗ, ಬಸ್ಸಿನೊಳಗಿರುವವರಿಗೆ ಅವನ್ನು ಮಾರುತ್ತಿದ್ದರು. ಕೆಲವರು ಕೊಂಡುಕೊಳ್ಳುತ್ತಿದ್ದರು. ಕೆಲವರು ನಿರಾಕರಿಸುತ್ತಿದ್ದರು. ರಸ್ತೆಗಳಲ್ಲಿ ಬರುತ್ತಿದ್ದ ದಾರಿಗರಿಗೆಲ್ಲಾ ಸಹ ಬ್ಯಾಡ್ಜುಗಳನ್ನು ಕೊಂಡುಕೊಳ್ಳುವಂತೆ ಕೇಳಿಕೊಳ್ಳುತ್ತಿದ್ದರು.

ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳೂ ಸಹ -ಆರೇಳು ವಯಸ್ಸಿನವರು- ಚೌಕದಲ್ಲಿ ನಿಂತು ಘೋಷಣೆಗಳನ್ನು ಮಾಡುತ್ತಾ, ಬ್ಯಾಡ್ಜುಗಳನ್ನು ಮಾರುತ್ತಿದ್ದುದು ಕಂಡು ಬಂತು. ಒಬ್ಬ ಸಣ್ಣ ಹುಡುಗ-ಐದಾರು ವಯಸ್ಸಿನ ಹುಡುಗ- ದಾರಿಯಲ್ಲಿ ಹೋಗುತ್ತಿದ್ದ ಕಾರಿನ ಸವಾರರುಗಳ ಬಳಿಗೆ ಬಂದು, 'ಬ್ಯಾಡ್ಜ್ ಕೊಂಡುಕೊಳ್ಳಿ' ಎಂಬುದಾಗಿ ಕೇಳುತ್ತಿದ್ದನು. ಅವರು ನಕ್ಕು ಹೊರಟು ಹೋದರು.

ಮೆರವಣಿಗೆಯನ್ನು ತಡೆದು ಚೆಲ್ಲಿಸಿದರು

ಮಲ್ಲೇಶ್ವರದ ಕ್ರಿಕೆಟ್ ಮೈದಾನದಿಂದ (ರೀಡಿಂಗ್ ರೂಂ ಎದುರು) ಮೆರವಣಿಗೆಯು ಹೊರಟು ಆಸ್ಪತ್ರೆಯ ಮುಂಭಾಗದಲ್ಲಿ ಹಾದು ೨ನೇ ಕ್ರಾಸ್ ರಸ್ತೆಯ ಮುಖಾಂತರ ಹೊರಟು ಲಿಂಕ್ ರೋಡಿನ ಮೂಲಕ ಸಂಪಿಗೆ ರಸ್ತೆಗೆ ಬಂದಾಗ ಮಲ್ಲೇಶ್ವರದ ಸಬ್ ಇನ್ಸ್‌ಪೆಕ್ಟರವರು ಹತ್ತಾರು ಮಂದಿ ಕಾನ್‌ಸ್ಟೇಬಲ್ಲುಗಳೊಡನೆ ಬಂದು ರಸ್ತೆಯ ಮಧ್ಯದಲ್ಲಿ ಮೆರವಣಿಗೆಯನ್ನು ತಡೆದು ಚೆಲ್ಲಿಸಿ, ಐವರು ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿರುವುದಾಗಿ ಹೇಳಿದರು.

ದಸ್ತಗಿರಿಯಾದವರಿವರು:—ಶ್ರೀಯುತರಾದ ಕೆ. ಅನಂತರಾಮರ್, ಎಸ್. ರಂಗರಾಜು, ಕೆ. ಶೇಷಗಿರಿರಾವ್, ಎಸ್. ಎಲ್. ಶರ್ಮ, ಕೆ. ವೆಂಕಟರಾಮಯ್ಯಂಗಾರ್.

ಆಗ ಅಲ್ಲಿ ಪೋಲೀಸ್ ವ್ಯಾನಿರಲಿಲ್ಲವಾದುದರಿಂದ ಇವರನ್ನು ಪೋಲೀಸ್ ಸ್ಟೇಷನ್ ಕಡೆಗೆ ಸಬ್ ಇನ್ಸ್‌ಪೆಕ್ಟರವರು ನಡೆಸಿಕೊಂಡು ಹೋಗುತ್ತಿದ್ದರು. ದಸ್ತಗಿರಿಯಾದವರ ಹಿಂದುಗಡೆ ಸುಮಾರು ೨೦೦-೩೦೦ ಮಂದಿ ವಿದ್ಯಾರ್ಥಿಗಳು ಮಹಾತ್ಮಾ ಗಾಂಧಿ-ಕಿ-ಜೈ, ಜವಹರ್ ಲಾಲ್-ಕಿ-ಜೈ ಎಂಬುದಾಗಿ ಘೋಷಣೆಯನ್ನು ಮಾಡುತ್ತಾ ಹೋಗುತ್ತಿದ್ದರು. ಇದನ್ನು ನೋಡಲು ಹೆಂಗಸರು ಮಕ್ಕಳಾದಿಯಾಗಿ ಎಲ್ಲರೂ ಅವರವರ ಮನೆಗಳ ಮುಂದೆ ನಿಂತಿದ್ದರು. ಅಷ್ಟು ಹೊತ್ತಿಗೆ ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಂಪೆನಿ ಬಸ್ಸಿನ ತುಂಬ ಪೋಲೀಸಿನವರು ಬಂದು ಚೌಕದಲ್ಲಿ ನಿಂತರು. ಒಡನೆಯೇ ಇನ್ಸ್‌ಪೆಕ್ಟರ್ ಶ್ರೀ ನರಸಿಂಹಯ್ಯನವರು ಕೆಳಗಿಳಿದು ದಸ್ತಗಿರಿಯಾದವರನ್ನು ಬಸ್ಸಿನೊಳಗೆ ಕೂಡುವಂತೆ ಹೇಳಿದರು. ಅವರು ಕೂತುಕೊಂಡಿದ್ದಾಗ ಆ ಬಸ್ಸಿಗೆ ಹುಡುಗರೆಲ್ಲಾ ಹತ್ತಿ 'ನಾವೂ ಬರುತ್ತೇವೆ' ಎಂಬುದಾಗಿ ಹಠ ಹಿಡಿದರು. ಅವರೆಲ್ಲರನ್ನೂ ಇಳಿಸಿ ದಸ್ತಗಿರಿಯಾದವರನ್ನು ಮಾತ್ರ ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋದರು.

ಏತನ್ಮಧ್ಯೆ ಚೌಕದಲ್ಲಿ ಗುಂಪು ಅಧಿಕವಾಗಲಾರಂಭಿಸಿತು. ಪೋಲೀಸಿನವರು ಒಳ್ಳೆಯ ಮಾತಿನಿಂದ ಅವರನ್ನು ಮನೆಗಳಿಗೆ ಹೊರಟು ಹೋಗುವಂತೆ ಹೇಳುತ್ತಿದ್ದರು. ಕೆಲವರು ಹೊರಟರು, ಕೆಲವರು ಚದುರಲಿಲ್ಲ. ವಿದ್ಯಾರ್ಥಿಗಳ ಇನ್ನೊಂದು ಗುಂಪು ಮಲ್ಲೇಶ್ವರದ ಮಿಡ್ಲ್ ಸ್ಕೂಲ್ ಕ್ರಿಕೆಟ್ ಪೆವಿಲಿಯನ್ ಕಡೆ ಮುಂದುವರಿಯಿತು. ಪೋಲೀಸ್ ಸ್ಟೇಷನ್ನಿನವರು ವಿದ್ಯಾರ್ಥಿಗಳನ್ನು ಬಸ್ಸಿನಲ್ಲಿ ಕರೆದುಕೊಂಡು ಪೇಟೆಯ ಕಡೆಗೆ ಹೊರಟರು.

ಶ್ರೀರಾಮಪುರದಲ್ಲಿ ದಸ್ತಗಿರಿಗಳು

ಈ ಕಡೆ ವಿದ್ಯಾರ್ಥಿಗಳ ಪ್ರದರ್ಶನವಾಗುತ್ತಿರುವಷ್ಟು, ಆ ಕಡೆ ಶ್ರೀರಾಮಪುರದ ಲೇಬರ್ ಕಾಲೋನಿಯಿಂದ ಮಿಲ್ ಕೆಲಸಗಾರರ ಮೆರವಣಿಗೆಯೊಂದು ಮಲ್ಲೇಶ್ವರದ ಕಡೆ ಹೊರಟಿತು. ಪೋಲೀಸಿನವರು ಆ ಕಡೆ ಹೋಗಿ ಅದನ್ನು ನಿಲ್ಲಿಸಿ, ಕೆಲವರನ್ನು ಬಂಧಿಸಿಕೊಂಡು ಹೊರಟು ಹೋದರು. ಅನಂತರ ಅವರು ಪುನಃ ಸೇರಿಕೊಂಡು ಮೆರವಣಿಗೆಯಲ್ಲಿ ರೀಡಿಂಗ್ ರೂಮಿನ ಕಡೆಗೆ ಬಂದರು. ಮಧ್ಯದಲ್ಲಿ ಯಾರೂ ಅವರನ್ನು ತಡೆಯಲಿಲ್ಲ.

ವಿದ್ಯಾರ್ಥಿಗಳ ಮೆರವಣಿಗೆ ಬೇರೆಯ ಕಡೆ ಹೊರಟಿತು

ಕ್ರಿಕೆಟ್ ಪೆವಿಲಿಯನ್ನಿನಲ್ಲಿ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಸೇರಲಾರಂಭಿಸಿದರು. ಮಹಾರಾಣಿ ಕಾಲೇಜ್ ವಿದ್ಯಾರ್ಥಿನಿಯರಲ್ಲಿ ನಲವತ್ತು ಮಂದಿ ಬಂದು ಮೆರವಣಿಗೆಯಲ್ಲಿ ಸೇರಿಕೊಂಡರು. ಮೆರವಣಿಗೆಯ ಮುಂಭಾಗದಲ್ಲಿ ತ್ರಿವರ್ಣದ ರಾಷ್ಟ್ರೀಯ ಧ್ವಜವನ್ನು ಹಿಡಿದುಕೊಂಡು ವಿದ್ಯಾರ್ಥಿನಿಯರು ನಿಂತರು. ಈ ಮೆರವಣಿಗೆಯು [illegible] ರಸ್ತೆ, ವೆಂಕಟರಂಗಯ್ಯಂಗಾರ್ ರಸ್ತೆ ಮುಖಾಂತರ ಶೇಷಾದ್ರಿಪುರದ ಕಡೆ ಹೊರಟಿತು. ಇದರೊಂದಿಗೆ ಗಿರಣಿ ಕೆಲಸಗಾರರೂ ಸೇರಿಕೊಂಡರು.

ಗಿರಣಿ ಕೆಲಸಗಾರರ ದಸ್ತಗಿರಿ

ಈ ಮೆರವಣಿಗೆಯು ಶೇಷಾದ್ರಿಪುರದ ಪೋಲೀಸ್ ಸ್ಟೇಷನ್ ಬಳಿ ಬಂದಾಗ ಪೋಲೀಸ್ ವ್ಯಾನು ಅಲ್ಲಿ ಕಾದಿಸಿಕೊಂಡು, ಗಿರಣಿ ಕೆಲಸಗಾರರಲ್ಲಿ ೧೭ ಮಂದಿಯನ್ನು, ವಿದ್ಯಾರ್ಥಿಗಳಲ್ಲಿ ಮೂವರನ್ನು ದಸ್ತಗಿರಿ ಮಾಡಿ ವ್ಯಾನಿನಲ್ಲಿ ಕೂಡಿಸಿಕೊಂಡರು. ಈ ದಸ್ತಗಿರಿಗಳಾದ ಬಳಿಕ ಮೆರವಣಿಗೆಯು ಅಲ್ಲಿಂದ ಪೇಟೆಯ ಕಡೆ ಮುಂದುವರಿಯಿತು.

ಶ್ರೀರಾಮಪುರದ ಪರಿಸ್ಥಿತಿಯನ್ನು ವಿಚಾರಿಸಿಕೊಂಡು ಬರಲು ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಶ್ರೀ ಸಿ. ಎಂ. ಹೆಚ್. ರಣಜೋಧಸಿಂಗರೂ, ಮಿಲಿಟರಿಯವರ ಬಂದೋಬಸ್ತಿನೊಡನೆ ಆ ಕಡೆ ಹೋಗಿ ನೋಡಿಕೊಂಡು ಬಂದರು.

ಹಿಮಾಲಯಾ ಟಾಕೀಸ್ ಬಳಿ ಮೆರವಣಿಗೆಯನ್ನು ನಿಲ್ಲಿಸಿದರು

ಶೇಷಾದ್ರಿಪುರದ ಪೋಲೀಸ್ ಸ್ಟೇಷನ್ ಬಳಿ ದಸ್ತಗಿರಿಗಳನ್ನು ಮಾಡಿದ ಬಳಿಕ ಗಿರಣಿ ಕೆಲಸಗಾರರು ಪೇಟೆಯ ಕಡೆ ಹೊರಟರು. ಅವರಿ[illegible] ವಿದ್ಯಾರ್ಥಿಗಳು ಹಿಂತಿರುಗಿಬಿಟ್ಟರು. ಗಿರಣಿ ಕೆಲಸಗಾರರ ಮೆರವಣಿಗೆಯು ಹಿಮಾಲಯಾ ಟಾಕೀಸ್ ಹತ್ತಿರಕ್ಕೆ ಹೋಗುವವರೆಗೂ ಪೋಲೀಸಿನವರು ಅದನ್ನು ತಡೆಯಲಿಲ್ಲ. ಅಲ್ಲಿ ಅದನ್ನು ತಡೆದು ಮುಂದಕ್ಕೆ ಹೋಗಕೂಡದೆಂದು ಅಡ್ಡಿಪಡಿಸಿದರು. ಆಗ ಬೆಳಗ್ಗೆ ೧೦-೩೦ ಗಂಟೆ ಸಮಯವಿರಬಹುದು. ಪ್ರದರ್ಶಕರು 'ನಾವು ಮುಂದೆ ಹೋಗಬೇಕು, ಬೇಕಾದರೆ ನಮ್ಮೆಲ್ಲರನ್ನೂ ದಸ್ತಗಿರಿ ಮಾಡಿ ಇಲ್ಲದಿದ್ದರೆ ಬಿಟ್ಟುಬಿಡಿ' ಎಂದರು. ಅವರ ಮಾತನ್ನು ಪೋಲೀಸಿನವರು ಕೇಳಲಿಲ್ಲ. ಮೆರವಣಿಗೆಯಲ್ಲಿದ್ದ ಸುಮಾರು ೩೦೦ ಮಂದಿ ಕೆಲಸಗಾರರು ಅಲ್ಲಿಯೇ ರಸ್ತೆಯ ಒಂದು ಪಕ್ಕದಲ್ಲಿ ಕುಳಿತುಬಿಟ್ಟರು. ಮುಖಂಡರು [illegible] ಸಂಚಾರಾದಿಗಳನ್ನು [illegible] ಕರೆದುಕೊಂಡು [illegible] ನೋಡಿಕೊಂಡರು.

ಜಟ್ಕಾ ಸ್ಟ್ಯಾಂಡ್ ಬಳಿ ಎಂದರೆ—ಮೂರು ವ್ಯಾನುಗಳ ತುಂಬ ಪೋಲೀಸಿನವರು ಬಂದು ತಯಾರಿಯಲ್ಲಿದ್ದರು. ಸಿಟಿ ಮ್ಯಾಜಿಸ್ಟ್ರೇಟರಾದ ಶ್ರೀ ಸಿ. ರಾಮಚಂದ್ರರಾಯರೂ, ಇತರ ಪೋಲೀಸ್ ಅಧಿಕಾರಿಗಳೂ ಇದ್ದರು.

ಕೆಲಸಗಾರರು ತಮ್ಮ ಸತ್ಯಾಗ್ರಹವನ್ನಾರಂಭಿಸಿ, ತಮ್ಮನ್ನು ಮುಂದೆ ಬಿಡುವವರೆಗೂ ಕದಲುವುದಿಲ್ಲವೆಂದು ಕೂತುಬಿಟ್ಟರು. ಪೋಲೀಸಿನವರು ಅಲ್ಲಿಯೇ ಸ್ವಲ್ಪ ಹೊತ್ತು ನಿಂತಿದ್ದು ಸಾಮಾನ್ಯ [illegible]ದಲ್ಲಿ ಕೆಲವರನ್ನು ಉಸ್ತುವಾರಿಗೆ ಹಾಕಿ, ಮಿಕ್ಕವರೆಲ್ಲರೂ ವ್ಯಾನುಗಳಲ್ಲಿ ಹೊರಟು ಹೋದರು.

ಸಂಜೆಯವರೆಗೂ ಸತ್ಯಾಗ್ರಹ

ಆ ಗಿರಣಿ ಕೆಲಸಗಾರರು ಸಂಜೆಯವರೆಗೂ ಅಲ್ಲಿಯೇ ಕೂತಿದ್ದರು. ಅವರ ದಾಹ ಶಮನಾರ್ಥವಾಗಿ ಅವರಿಗೆ ಸೌಕರ್ಯಗಳನ್ನೂ, ನೀರನ್ನು ಸರಬರಾಜು ಮಾಡುತ್ತಿದ್ದರು. ಮೆರವಣಿಗೆಯ ಮುಂಭಾಗದಲ್ಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ ಜಿ. ಚಂದರಾರಾಧ್ಯರೂ, ಅವರ ಧರ್ಮಪತ್ನಿಯವರೂ ತ್ರಿವರ್ಣದ ರಾಷ್ಟ್ರೀಯ ಧ್ವಜವನ್ನೂ, ಗಿರಣಿ ಬಾವುಟಗಳನ್ನೂ ಹಿಡಿದುಕೊಂಡು ಕುಳಿತಿದ್ದರು. ಪೋಲೀಸಿನವರಲ್ಲಿ ಕೆಲವರು ಇವರ ಮುಂಭಾಗದಲ್ಲಿ ಉಸ್ತುವಾರಿಯಲ್ಲಿದ್ದರು. ಈ ಸತ್ಯಾಗ್ರಹವನ್ನು ನೋಡುವುದಕ್ಕಾಗಿ ಜನರು ವಿಶೇಷ ಸಂಖ್ಯೆಯಲ್ಲಿ ಅಲ್ಲಿ ಸೇರಲಾರಂಭಿಸಿದರು. [illegible] ಲಾಠಿ ಸಜ್ಜಿತರಾದ ಪೋಲೀಸಿನವರು ನಿಂತಿದ್ದರೆ ಉದ್ರೇಕವಾದೀತೆಂದರಿತು ಅವರೆಲ್ಲರೂ ವ್ಯಾನುಗಳಲ್ಲಿ ಹೊರಟುಹೋದರು. ಜನಗಳಿಗೆ ಯಾವ ಅವಕಾಶವನ್ನೂ ಕೊಡಲಿಲ್ಲ. ಸತ್ಯಾಗ್ರಹಿಗಳ ಉಪಚಾರಕ್ಕೆ ಅಲ್ಲಿದ್ದವರ ಮೂಲಕ ಚಂದಾ ಹಣವನ್ನು ಎತ್ತಿ, ಅವರಿಗೆ ಬಳಿಕ ತಿಂಡಿ ತೀರ್ಥಗಳನ್ನು ಒದಗಿಸುತ್ತಿದ್ದರು.

ಸಂಧ್ಯಾಕಾಲ ೪-೩೦ ಗಂಟೆ ಸಮಯದಲ್ಲಿ

ಸಂಧ್ಯಾಕಾಲ ೪-೩೦ ಗಂಟೆ ಸಮಯದಲ್ಲಿ ಶ್ರೀ ಜಿ. ಚಂದರಾರಾಧ್ಯರು ಫುಟ್‌ಪಾತ್ ಕಡೆಗೆ ಬಂದು ಭಾಷಣ ಮಾಡಿ, 'ಇಂದಿಗೆ ಮೆರವಣಿಗೆ ಮುಗಿಯಿತು. ನಾವೆಲ್ಲರೂ ಹೊರಟು ಹೋಗೋಣ' ಎಂದರು. ಶ್ರೀ ಚಂದರಾರಾಧ್ಯರ ಪತ್ನಿ ಶ್ರೀಮತಿ ಭಾಗೀರಥಮ್ಮನವರು ಭಾಷಣ ಮಾಡಿ, ಪ್ರತಿಮೆಯೊಂದಕ್ಕೆ ಬೆಂಕಿ ಹಚ್ಚಿ ಅದನ್ನು ಸುಟ್ಟರು. ಆ ದಿನದ ಪ್ರದರ್ಶನಗಳೇಕೆ ಎಂಬ ವಿಚಾರದಲ್ಲಿಯೂ ಭಾಷಣ ಮಾಡಿ ಹೊರಟು ಹೋದರು. ಮೆರವಣಿಗೆಯು ಮಲ್ಲೇಶ್ವರದ ಕಡೆ ಹಿಂತಿರುಗಿತು. ಪವರ್ ಸ್ಟೇಷನ್ ಬಳಿ ಅವರಿಗೆ ತಿಂಡಿ ತೀರ್ಥದ ಏರ್ಪಾಡನ್ನೊದಗಿಸಲಾಯಿತು. ಅಲ್ಲಿಂದ ಶ್ರೀರಾಮಪುರದ ಲೇಬರ್ ಕಾಲೋನಿಗೆ ಅವರು ಹೊರಟು ಹೋದರು. ಎಲ್ಲಿಯೂ ಅವರನ್ನು ತಡೆಯಲಿಲ್ಲ.

ಮಲ್ಲೇಶ್ವರದಲ್ಲಿ ಸೈಕಲ್ ಸ್ಕ್ವಾಡ್ ಮೆರವಣಿಗೆ

ಮಲ್ಲೇಶ್ವರದಲ್ಲಿ "ಸೈಕಲ್ ಸ್ಕ್ವಾಡ್" ವಿದ್ಯಾರ್ಥಿಗಳಲ್ಲಿ ಸುಮಾರು ೨೦-೩೦ ಮಂದಿ ತ್ರಿವರ್ಣದ ರಾಷ್ಟ್ರೀಯ ಧ್ವಜವನ್ನು ಸೈಕಲ್ಲಿಗೆ ಸಿಕ್ಕಿಸಿಕೊಂಡು ಮುಖ್ಯ ರಸ್ತೆಗಳಲ್ಲಿ ಹೋಗಿ ಜಯಘೋಷಗಳನ್ನು ಮಾಡುತ್ತಿದ್ದರು. ಅವರನ್ನು ಎಲ್ಲಿಯೂ ಅಡ್ಡಿಪಡಿಸಲಿಲ್ಲ.

ರಾತ್ರಿ ೭ ಗಂಟೆ ಸಮಯದಲ್ಲಿ ಸಣ್ಣ ಬಾಲ[illegible] ಕ್ರಾಸ್ ರಸ್ತೆ, ಸಂಪಿಗೆ ರಸ್ತೆಯ[illegible] ಮೆರವಣಿಗೆ ನಡೆಸಿ ಜಯಘೋಷ ಮಾ[illegible]ತ್ತಿದ್ದರು.

[illegible]ಣಿ ಕೆಲಸಗಾರರ ಬಿಡುಗಡೆ

ಗಿ[illegible] ಕೆಲಸಗಾರರ ಪೈಕಿ ಈ ಕೆಳಗೆ ನಮೂದಿಸಿದವರನ್ನು ದಸ್ತಗಿರಿ ಮಾಡಿ ರಾತ್ರಿಯೇ ಅವರನ್ನು ಬಿಟ್ಟುಬಿಟ್ಟರು. ಶ್ರೀಗಳಾದ ಕೆ. ವಿಜಯರಾಂ, ಕೆ. ಶ್ರೀರಾಮುಲು, ಕೆ. ದೊರೆಸ್ವಾಮಿ, [illegible], ಕುಪ್ಪ, ಕೃಷ್ಣ, ಪಂಚಣ್ಣಂ, ಅಯೋಧ್ಯಾರಾಂ, ಎಸ್. ಮುನಿಸ್ವಾಮಿ, ಮುರಳ್[illegible], ಮುನಿಸ್ವಾಮಿ, ನಾರಾಯಣ

ಸ್ವಾಮಿ, ವೆಂಕಟೇಶಯ್ಯ, ವೀರಸಿಂಗಶೆಟ್ಟಿ, ರಂಗಪ್ಪ. ಸಿಕ್ಕಿಗಿಬಿದ್ದಿರುವ ವಿದ್ಯಾರ್ಥಿಗಳ ನ್ನೆಲ್ಲ ಕ್ಷಮಾಪಣೆ ಕೊಟ್ಟರೆಂದು ಬಿಟ್ಟುಕಳುಹಿ ಹಾಕಲಾಗಿದೆ.

ಇತ್ತೀಚಿನಲ್ಲಿ ನಿನ್ನೆಯ ಪ್ರದರ್ಶನಗಳು ಶಾಂತ ರೀತಿಯಿಂದ ನಡೆದವು ಯಾವ ಗಲಾಟೆಗೂ ಅವಕಾಶವಾಗಲಿಲ್ಲ ಪೋಲೀಸಿನವರೂ ಸಹ ಯಾವ ಉದ್ರೇಕಕ್ಕೂ ಅವಕಾಶ ಕೊಡದೆ ಎಲ್ಲವನ್ನೂ ಬಹು ಚೆನ್ನಾಗಿ ನಿರ್ವಹಿಸಿದರು.

ಸಜ್ಜನರಾವ್ ದೇವಾಲಯದ ಬಳಿ ನಡೆದ ಪ್ರಕರಣ

ನಿನ್ನೆ ಸಂಜೆ ೭ ಗಂಟೆ ಸಮಯದಲ್ಲಿ ದಕ್ಷಿಣ ಪಕ್ಷಾಂತರ ವಿದ್ಯಾರ್ಥಿಗಳು ಸುಮಾರು ೨೦೦ ಜನರೂ ಕೆಲವರು ಸಾಹೇಬರುಗಳ ನ್ಯಾಷನಲ್ ಹೈಸ್ಕೂಲ್ ಫೀಲ್ಡಿನಿಂದ ಮೆರವಣಿಗೆಯಲ್ಲಿ ಹೊರಟು ಇರ್ವಿನ್ ಸರ್ಕಲ್ ಮೂಲಕ ಸಜ್ಜನರಾವ್ ರವರ ದೇವಸ್ಥಾನಕ್ಕೆ ಬಂದರು. ಅಲ್ಲಿ ದೇವಾಲಯದ ಎದುರು ಭಾಗದಲ್ಲಿ ಟೋಪಿ ಮತ್ತು ಹ್ಯಾಟ್‌ಗಳನ್ನು ಒಟ್ಟುಗೂಡಿಸಿ ಬೆಂಕಿ ಹಚ್ಚಿಸಿ ಸುಡಲಾಯಿತು. ಅದೇ ಸಮಯದಲ್ಲಿ ಬೆಂಕಿ ಆರಿಸಲು ವ್ಯಾನಿನಲ್ಲಿಯೂ ಅದೇ ಇನ್ನಿತರ ವ್ಯಾನುಗಳಲ್ಲಿಯೂ ಪೋಲೀಸರು ಬಂದಿಳಿದು ನಿಂತರು. ಕೂಡಲೇ ವಿದ್ಯಾರ್ಥಿಗಳೆಲ್ಲರೂ ಅಲ್ಲಿಯೇ ಕುಳಿತುಬಿಟ್ಟರು. ಅಲ್ಲಿ ಉರಿಯುತ್ತಿದ್ದ ಟೋಪಿ ಮತ್ತು ಹ್ಯಾಟ್‌ಗಳ ಮೇಲೆ ಪೋಲೀಸರು ನೀರನ್ನು ಹೊಯ್ದು ಆರಿಸಿದರು. ವಿದ್ಯಾರ್ಥಿಗಳು ಹಿಡಿದು ತಂದಿದ್ದ ಕೆಲವು ಪ್ಲೆಕಾರ್ಡುಗಳನ್ನು ಪೋಲೀಸರು ಕಸಿದುಕೊಂಡರು. ವಿದ್ಯಾರ್ಥಿಗಳು ಮಾತ್ರ ಆ ಸ್ಥಳ ಬಿಟ್ಟೇಳಲಿಲ್ಲ. ಕೊನೆಗೆ ಅರ್ಧ ಗಂಟೆಯ ತರುವಾಯ ಪೋಲೀಸರು ಅಲ್ಲಿಂದ ಹೊರಟು ಹೋದರು. ಅದೇ ವೇಳೆ ವಿದ್ಯಾರ್ಥಿಗಳು ದೇವಾಲಯದೊಳಗೆ ಹೋಗಿ ದೇವರಿಗೆ ಮಂಗಳಾರತಿ ಮಾಡಿ ಭಾರತದ ಸ್ವಾತಂತ್ರ್ಯಕ್ಕಾಗಿ ಪ್ರಾರ್ಥನೆ ಸಲ್ಲಿಸಿದರು.

ಬಸವನಗುಡಿಯಲ್ಲಿ ವಿದ್ಯಾರ್ಥಿಗಳ ಪ್ರದರ್ಶನ

ಮೆರವಣಿಗೆ ಶಿಸ್ತಿನಿಂದ ನಡೆಯಿತು

ಬೆಂಗಳೂರು ನೆ ೫

ಬಸವನಗುಡಿ ನ್ಯಾಷನಲ್ ಹೈಸ್ಕೂಲಿನ ವಿದ್ಯಾರ್ಥಿಗಳು ನಿನ್ನೆ ದಿವಸ ಬೆಳಗ್ಗೆ ಬಹಳ ಮಂದಿ ವಿದ್ಯಾರ್ಥಿಗಳು ರಾಷ್ಟ್ರೀಯ ಧ್ವಜದೊಡನೆ ಗುಂಪು ಸೇರಿದ್ದರು. ಕೆಲವು ಬಾಲಕಿಯರೂ ಸೇರಿದ್ದರು. ಬಹುಮಂದಿ ನ್ಯಾಷನಲ್ ಹೈಸ್ಕೂಲ್ ವಿದ್ಯಾರ್ಥಿಗಳು ಇದರಲ್ಲಿ ಸೇರಿದ್ದರು. ಆ ಸಮಯದಲ್ಲಿ ಎರಡು ಪೋಲೀಸ್ ವ್ಯಾನುಗಳು ಬಂದು ರಸ್ತೆಯಲ್ಲಿ ನಿಂತವು. ಸಿಟಿ ಪೋಲೀಸ್ ಸೂಪರಿಂಟೆಂಡೆಂಟರು ಗುಂಪು ಕೂಡಿದ್ದ ವಿದ್ಯಾರ್ಥಿಗಳ ಮಧ್ಯೆ ಬಂದು ಚದುರಬೇಕೆಂದು ತಿಳಿಸಿದರು. ವಿದ್ಯಾರ್ಥಿಗಳು ಚದುರಲಿಲ್ಲ. ಕೆಲವರನ್ನು ಅರಿಸಿ ಪೋಲೀಸಿನವರು ಹಿಡಿದುಕೊಂಡು ಹೋದರು. ಗುಂಪು ಶಾಂತ ರೀತಿಯಿಂದಲೂ ಶಿಸ್ತಿನಿಂದಲೂ ಕೂಡಿತ್ತು. ಸ್ವಲ್ಪ ದೂರದಲ್ಲಿ ಕೆಲವು ಪೋಲೀಸಿನವರು ದೊಣ್ಣೆಗಳನ್ನು ಹಿಡಿದುಕೊಂಡು ನಿಂತಿದ್ದರು. ಸ್ವಲ್ಪ ಹೊತ್ತು ಪೋಲೀಸಿನವರು ಕಾದಿದ್ದರು. ಚದುರಬೇಕೆಂದು ಪೋಲೀಸಿನವರು ಗುಂಪಿನವರಿಗೆ ಮತ್ತೆ ತಿಳಿಸಿದರು. ಆದ ವಿದ್ಯಾರ್ಥಿಗಳು ನಾಲ್ಕೈದು ಗುಂಪಿನಲ್ಲಿ ಸ್ವಲ್ಪ ಸ್ವಲ್ಪ ದೂರದಲ್ಲಿ ಕುಳಿತುಬಿಟ್ಟರು. ಪೋಲೀಸಿನವರು ಆ ಮೇಲೆ ಸ್ಥಳದಿಂದ ಹೊರಟುಹೋದರು.

ಆನಂತರ ವಿದ್ಯಾರ್ಥಿಗಳು ಅಲ್ಲಿಂದ ಮೆರವಣಿಗೆ ಹೊರಟು, ಚಾಮರಾಜಪೇಟೆಯಲ್ಲಿ ಬಂದು ಅನಂತರ ಚದುರಿದರು. ಮೆರವಣಿಗೆಯ ಮುಂಭಾಗದಲ್ಲಿ ಕೆಲವು ಬಾಲಕಿಯರು ರಾಷ್ಟ್ರೀಯ ಧ್ವಜವನ್ನು ಹಿಡಿದಿದ್ದರು. ವಿದ್ಯಾರ್ಥಿಗಳು ಜೈಕಾರಗಳನ್ನು ಮಾಡಿಕೊಂಡು ಮೆರವಣಿಗೆ ಬಂದರು. ಮೆರವಣಿಗೆಯನ್ನು ಪೋಲೀಸಿನವರು ತಡೆಯಲಿಲ್ಲ.

ಪುನಃ ಸಂಜೆ ಈ ವಿದ್ಯಾರ್ಥಿಗಳು ನ್ಯಾಷನಲ್ ಹೈಸ್ಕೂಲಿನ ಮೈದಾನದಿಂದ ಮೆರವಣಿಗೆ ಹೊರಟು, ಚಾಮರಾಜಪೇಟೆಯಲ್ಲಿ ಬಂದು, ವಿಶ್ವೇಶ್ವರಪುರದ ಸಜ್ಜನರಾಯರ ದೇವಸ್ಥಾನದ ಬಳಿಗೆ ಬಂದರು. ಅಷ್ಟು ಹೊತ್ತಿಗೆ ಪೋಲೀಸ್ ವ್ಯಾನುಗಳಲ್ಲಿ ಪೋಲೀಸಿನವರು ಸ್ಥಳಕ್ಕೆ ಬಂದರು. ಗುಂಪನ್ನು ಚದುರಬೇಕೆಂದು ತಿಳಿಸಿದರು. ಗುಂಪಿನವರು ಚದುರಲಿಲ್ಲ. ರಸ್ತೆಯ ಮೇಲೆ ಕುಳಿತುಬಿಟ್ಟರು. ಸ್ವಲ್ಪ ಹೊತ್ತು ಪೋಲೀಸಿನವರು ಕಾದಿದ್ದು ಅನಂತರ ಅಲ್ಲಿಂದ ಹೊರಟುಹೋದರು. ಮೆರವಣಿಗೆಯು ಮುಂದೆ ಹೊರಟು ಅನಂತರ ಚದುರಿತು

Daily News

44

Mr. P.R. RAMAIYA Mr.P.B.SRINIVASAN ARRESTED

★

Also Messrs. T. T. Sharma & B.N. Gupta

BANGALORE, Sep 9

Messrs. P. R. Ramaiya (Proprietor Tainadu & the Editor, Daily News), P B Sreenivasan (Editor of the Tainadu), T. T. Sharman (Managing Director of the Viswakarnataka) and B N. Gupta (Editor of the Janavani and Prajamata) were arrested by the City Police in the early hours of this morning (between 12 p m and 1 45 a m) under the Defence of India Rules, and were removed to the Ulsoorgate Police Station

BANGALORE EDITORS ON TRIAL

:o:

ALLEGED VIOLATION OF NOTIFICATION UNDER DEFENCE ACT

:o:

(From Our Registered Correspondent)

BANGALORE Sep, 9

Messrs. P. R. Ramaiya (Proprietor of the Tainadu and Proprietor Editor of the Daily News), P B. Srinivasan (Editor of the Tainadu), T.T. Sharman (Managing Director of the Viswakarnataka), Siddavvanahalli Krishna Sharma (Editor of the Viswakarnataka) and B. N. Gupta (Editor of the Janavani), who were arrested under Rule 41 of the Defence of India Rules between 10-30 and 2-30 on the night of 8-9th September in their respective residences, were produced and charge-sheeted before the City Magistrate this after noon.

The Court hall was filled to capacity with journalists, lawyers and others.

At about 1 p.m the Prosecuting Inspector filed an application for remanding the accused to jail custody pending final investigation. Messrs. Doraswamy, G. R. Ethirajulu Naidu and Nittoor Srinivasa Rao, counsels for accused, requested the Magistrate that the accused should be produced before the Court when the prosecution prayed for grant of remand to jail custody They submitted to the Magistrate that the prosecution should reveal the nature of the offence alleged against the accused and the possible line of investigation. The Prosecuting Inspector replied that the investigation was not yet over and he would place the charge-sheet the next day. Mr. Nittoor Srinivasa Rao again pleaded for production of accused before the Court and an opportunity for the counsels to consult their clients. At this stage, Inspector of Police for C Division represented to the Court that charge sheet would be placed that day alone.

Charge Sheet

